ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

43

ಏಪ್ರಿಲ್ 8 ಶನಿವಾರ 2023

ಸಂಪುಟ: 43 | ಸಂಚಿಕೆ: 348 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4

ಇಂದು ಇಲ್ಲವೆ ನಾಳೆ ಬಿಜೆಪಿ ಮೊದಲ ಪಟ್ಟಿ ಬಿಡುಗಡೆ

■ ಇಂದು ಕೇಂದ್ರ ಚುನಾವಣಾ ಸಮಿತಿ ಸಭೆ ■ ಸಭೆಯಲ್ಲಿ ಪಾಲ್ಗೊಳ್ಳಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಸಿಎಂ ಯಡಿಯೂರಪ್ಪ ದೆಹಲಿಗೆ ದೌಡು ■ ಚುನಾವಣಾ ಪೂರ್ವ ಸಮೀಕ್ಷೆ, ಸಂಘ ಪರಿವಾರ ನೀಡಿದ ವರದಿ, ರಾಜ್ಯ ಘಟಕ ಮಾಡಿದ ಶಿಫಾರಸು ಆಧರಿಸಿ ಅಭ್ಯರ್ಥಿಗಳ ಆಯ್ಕೆ

ಬೆಂಗಳೂರು, ಏ.7(ಕೆಎಂಶಿ)–ರಾಜ್ಯ ವಿಧಾನಸಭಾ ಚುನಾವಣೆಗೆ ಪಕ್ಷದ ಅಭ್ಯರ್ಥಿಗಳ ಆಯ್ಕೆ ಸಂಬಂಧ ನಡೆಯಲಿರುವ ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲಿ ಪಾಲ್ಗೊಳ್ಳಲು ಸಿಎಂ ಬಸವರಾಜ ಬೊಮ್ಮಾಯಿ, ಬಿಜೆಪಿಯ ಸಂಸದೀಯ ಮಂಡಳಿ ಸದಸ್ಯರೂ ಆದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ದೆಹಲಿಗೆ ತೆರಳಿದ್ದಾರೆ.




ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಅವರ ಅಧ್ಯಕ್ಷತೆಯಲ್ಲಿ ಕೇಂದ್ರ ಚುನಾವಣಾ ಸಮಿತಿ ನಾಳೆ (ಏ.8) ಕರ್ನಾಟಕದ 224 ವಿಧಾನಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಆಯ್ಕೆ ಸಂಬಂಧ ಸಭೆ ನಡೆಸಲಿದೆ.

ಮೇ 10ರಂದು ರಾಜ್ಯ ವಿಧಾನಸಭೆಗೆ ನಡೆಯಲಿರುವ ಚುನಾವಣೆಗೆ ಏಪ್ರಿಲ್ 13 ರಂದು ಅಧಿಸೂಚನೆ ಹೊರಬೀಳಲಿದೆ. ಇದಕ್ಕೂ ಮುನ್ನವೇ ವಿವಾದವಲ್ಲದ ಕ್ಷೇತ್ರಗಳಿಗೆ ಮೊದಲ ಪಟ್ಟಿಯಲ್ಲೇ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ, ನಾಳೆ ಸಂಜೆ ಇಲ್ಲವೇ ಭಾನುವಾರ ಬೆಳಿಗ್ಗೆ ಪಟ್ಟಿ ಪ್ರಕಟಿಸಲು ಉದ್ದೇಶಿಸಲಾಗಿದೆ ಎಂದು ಪಕ್ಷದ ಉನ್ನತ ಮೂಲಗಳು ● 9ನೇ ಪುಟಕ್ಕೆ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾಜಿ ಸಿಎಂ ಯಡಿಯೂರಪ್ಪಗೆ ಟಿಕೆಟ್ ಆಕಾಂಕ್ಷಿಗಳು ದುಂಬಾಲು

ಬೆಂಗಳೂರು, ಏ.7(ಕೆಎಂಶಿ)–ಅಭ್ಯರ್ಥಿಗಳ ಆಯ್ಕೆಗೆ ಬಿಜೆಪಿಯ ಸಂಸದೀಯ ಮಂಡಳಿ ಸಭೆ ದೆಹಲಿಯಲ್ಲಿ ಸೇರುವುದು ಖಚಿತವಾಗುತ್ತಿದ್ದಂತೆ ಟಿಕೆಟ್ ಆಕಾಂಕ್ಷಿಗಳು ಪಕ್ಷದ ಮುಖಂಡರ ಬೆನ್ನತ್ತಿದ್ದಾರೆ. ಚುನಾವಣಾ ಸಂಸದೀಯ ಮಂಡಳಿ ಸದಸ್ಯರಾಗಿರುವ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪನವರಿಗೆ ಇಂದು ಇಡೀ ದಿನ ಆಕಾಂಕ್ಷಿಗಳನ್ನು ಭೇಟಿ ಮಾಡುವುದೇ ಆಯಿತು. ಅದರಲ್ಲಿ ಕೆಲವರು ಸಚಿವರು, ಶಾಸಕರು ಇದ್ದರು. ಕೆಲವರಂತೂ ನನಗೆ ಬೇಡ, ನಮ್ಮ ಕುಟುಂಬದವರಿಗೆ ನೀಡಿ ಎಂದರೆ, ಮತ್ತೆ ಕೆಲವರು ನನಗೂ ಕೊಡಿ, ನಮ್ಮ ಕುಟುಂಬದವರಿಗೂ ಕೊಡಿಸಿ, ಗೆದ್ದು ಬರುತ್ತೇವೆ ಎಂದು ಮನವಿ ಮಾಡಿದರು. ಇದೇ ರೀತಿ ಪ್ರವಾಸದಲ್ಲಿರುವ ಸಿಎಂ ಬಸವರಾಜ ಬೊಮ್ಮಾಯಿ ಅವರಿಗೂ ಆಕಾಂಕ್ಷಿಗಳು ಬೆನ್ನತ್ತಿದ್ದಾರೆ. ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಯಡಿಯೂರಪ್ಪ ಪಕ್ಷದ ಟಿಕೆಟ್‌ಗಾಗಿ ಒತ್ತಡ ಇದೆ. ಆದರೆ ಗೆಲ್ಲುವ ಅಭ್ಯರ್ಥಿಗೆ ಟಿಕೆಟ್ ದೊರೆಯಲಿದೆ ಎಂದರು. ಸಂಸದೀಯ ಮಂಡಳಿ ಸಭೆಯಲ್ಲಿ ಎಲ್ಲಾ ಹಂತದ ವರದಿಗಳನ್ನು ಮುಂದಿಟ್ಟುಕೊಂಡೇ ವರಿಷ್ಠರು ಸಮರ್ಥ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಿದ್ದಾರೆ ಎಂದರು. ಇಂದು ಸಂಜೆ ಅಭ್ಯರ್ಥಿಗಳ ಆಯ್ಕೆ ಪೂರ್ವಭಾವಿ ಸಭೆ ದೆಹಲಿಯಲ್ಲಿ ನಡೆಯಬೇಕಿತ್ತು. ಅದು ರದ್ದಾಗಿದೆ. ನೇರವಾಗಿಯೇ ಸಂಸದೀಯ ಮಂಡಳಿಯಲ್ಲೇ ಪಕ್ಷದ ಅಭ್ಯರ್ಥಿಗಳ ಆಯ್ಕೆಯನ್ನು ಅಂತಿಮಗೊಳಿಸಲಾಗುವುದು ಎಂದರು.





ಇಂದು ಮೈಸೂರಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಆಗಮನ

ಮೈಸೂರು, ಬಂಡೀಪುರ, ಮದುಮಲೈನಲ್ಲಿ ಅವರು ಪಾಲ್ಗೊಳ್ಳುವ ಕಾರ್ಯಕ್ರಮಗಳಿಗೆ ಸರ್ವ ಸಿದ್ಧತೆ, ಭಾರೀ ಬಂದೋಬಸ್ತ್





ಮೈಸೂರಿನ ಓವೆಲ್ ಮೈದಾನದ ತಾತ್ಕಾಲಿಕ ಹೆಲಿಪ್ಯಾಡ್‌ನಲ್ಲಿ ಶುಕ್ರವಾರ ಹೆಲಿಕಾಪ್ಟರ್ ಲ್ಯಾಂಡಿಂಗ್ ಪೂರ್ವಾಭ್ಯಾಸ ನಡೆಸಲಾಯಿತು.

ಮೈಸೂರು, ಏ.7(ಆರ್‌ಕೆ)– ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನಾಳೆ(ಏ.8) ರಾತ್ರಿ ಮೈಸೂರಿಗೆ ಆಗಮಿಸುವರು. ಶನಿವಾರ ರಾತ್ರಿ 8.40 ಗಂಟೆಗೆ ನವದೆಹಲಿಯಿಂದ ವಿಶೇಷ ವಿಮಾನದಲ್ಲಿ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸುವ ಪ್ರಧಾನಿಗಳು, ಅಲ್ಲಿಂದ ಕಾರಿನಲ್ಲಿ ಮೈಸೂರಿನ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಹೋಟೆಲ್ ರ್‍ಯಾಡಿಸನ್ ಬ್ಲೂ ಪ್ಲಾಜಾಗೆ ತೆರಳಿ, ಅಲ್ಲಿ ವಾಸ್ತವ್ಯ ಹೂಡುವರು. ಮರುದಿನ ಬೆಳಗ್ಗೆ 6.20 ಗಂಟೆಗೆ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಿಂದ ಕಾರಿನಲ್ಲಿ ಓವೆಲ್ ಮೈದಾನದ ತಾತ್ಕಾಲಿಕ ಹೆಲಿಪ್ಯಾಡ್‌ಗೆ ತೆರಳಿ ಅಲ್ಲಿಂದ 6.30 ಗಂಟೆಗೆ ವಿಶೇಷ ಹೆಲಿಕಾಪ್ಟರ್‌ನಲ್ಲಿ ಪ್ರಯಾಣ ಬೆಳೆಸಿ ಬೆಳಗ್ಗೆ 7 ಗಂಟೆಗೆ ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲೂಕಿನ ಮೇಲುಕಾಮನಹಳ್ಳಿ ತಾತ್ಕಾಲಿಕ ಹೆಲಿಪ್ಯಾಡ್ ತಲುಪುವರು.

ನಂತರ ಬೆಳಗ್ಗೆ 7.15 ಗಂಟೆಗೆ ಕಾರಿನಲ್ಲಿ ರಸ್ತೆ ಮೂಲಕ ಬಂಡೀಪುರ ಹುಲಿ ಮೀಸಲು ಅರಣ್ಯದ ಸ್ವಾಗತ ಕೇಂದ್ರ ತಲುಪುವ ಮೋದಿ ಅವರು, ಬೆಳಗ್ಗೆ 9.30 ಗಂಟೆವರೆಗೆ ಸಫಾರಿ ನಡೆಸುವರು. ಅಲ್ಲಿಂದ ತಮಿಳುನಾಡಿನ ಮದುಮಲೈ ಹುಲಿ ಮೀಸಲು ಪ್ರದೇಶಕ್ಕೆ ತೆರಳಿ ಆಸ್ಕರ್ ಪ್ರಶಸ್ತಿ ವಿಜೇತ 'ದಿ ಎಲಿಫೆಂಟ್ ವಿಸ್ಪರರ್ಸ್' ಸಾಕ್ಷ್ಯ ಚಿತ್ರದಲ್ಲಿ ಬಳಸಿಕೊಳ್ಳಲಾಗಿರುವ ಆನೆಗಳ ಸಲಹಿದ ಬೊಮ್ಮ ಮತ್ತು ಬೆಳ್ಳಿ ದಂಪತಿಗಳನ್ನು ಪ್ರಧಾನಮಂತ್ರಿಗಳು ಸನ್ಮಾನಿಸುವರು.

ನಂತರ ಬೆಳಗ್ಗೆ 9.45 ಗಂಟೆಗೆ ಅಲ್ಲಿನ ತೆಪ್ಪಕಾಡು ತಾತ್ಕಾಲಿಕ ಹೆಲಿಪ್ಯಾಡ್‌ನಿಂದ ಹೆಲಿಕ್ಯಾಪ್ಟರ್‌ನಲ್ಲಿ ಹೊರಟು ಬೆಳಗ್ಗೆ 10.20 ಗಂಟೆಗೆ ಮೈಸೂರಿನ ಕ್ರಾಫರ್ಡ್ ಭವನದ ಎದುರಿನ ಓವೆಲ್ ● 9ನೇ ಪುಟಕ್ಕೆ

ಒಳಪುಟಗಳಲ್ಲಿ

ಇಂದು ವರ್ಷ ರಘುನಾಥನ್ ಅವರಿಂದ ಭರತನಾಟ್ಯ ರಂಗಪ್ರವೇಶ



ಮೈಸೂರು, ಏ.7–ಮೈಸೂರಿನ ಹೆಬ್ಬಾಳಿನಲ್ಲಿರುವ ನಾದವಿದ್ಯಾ ಸಂಗೀತ ಮತ್ತು ನೃತ್ಯ ಅಕಾಡೆಮಿಯಿಂದ ವಿದುಷಿ ಮಿತ್ರ ನವೀನ್ ಅವರ ಶಿಷ್ಯರಾದ ವರ್ಷ ರಘುನಾಥನ್ ಅವರ ಭರತನಾಟ್ಯ ರಂಗ ಪ್ರವೇಶವನ್ನು ನಾಳೆ (ಏ. 8) ಸಂಜೆ 5.30 ಗಂಟೆಗೆ ರಾಮಕೃಷ್ಣನಗರದ ರಮಾ ಗೋವಿಂದ ರಂಗ ಮಂದಿರದಲ್ಲಿ ಏರ್ಪಡಿಸಲಾಗಿದೆ. ಪಕ್ಕವಾದ್ಯದಲ್ಲಿ ವಿದುಷಿ ಮಿತ್ರ ನವೀನ್–ನಟುವಾಂಗ, ವಿದ್ವಾನ್ ನವೀನ್ ಎಂ.ಎಸ್.ಅಂದಗಾರ್–ಗಾಯನ, ವಿದ್ವಾನ್ ನಿತೀಶ್ ಅಮ್ಮನ್ನಯ್ಯ–ಕೊಳಲು, ವಿದ್ವಾನ್ ಜಿ.ಎಸ್.ನಾಗರಾಜ್–ಮೃದಂಗ ಮತ್ತು ಡಾ.ಭುವನೇಶ್ವರಿ ನಿರೂಪಣೆಯಲ್ಲಿ ಸಹಕಾರ ನೀಡಲಿದ್ದಾರೆ. ಗೌರವ ಅತಿಥಿಗಳಾಗಿ ಮೈಸೂರು ವಿಶ್ವವಿದ್ಯಾನಿಲಯದ ನೃತ್ಯ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಡಾ.ಶೀಲಾ ಶ್ರೀಧರ್, ಆಕಾಶವಾಣಿ ಕಲಾವಿದೆ ವಿದುಷಿ ಮೈಸೂರು ಎಸ್. ರಾಜಲಕ್ಷ್ಮಿ, ದಟ್ಟಗಳ್ಳಿಯ ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರದ ಚೀಫ್ ಫಿಸಿಷಿಯನ್ ಡಾ.ಟಿ.ಎಸ್.ಪ್ರಸನ್ನ ವೆಂಕಟೇಶ್ ಭಾಗವಹಿಸುವರು. ಇದೇ ವೇಳೆ ಗುರು ವಿದುಷಿ ಮಿತ್ರ ನವೀನ್ ಅವರನ್ನು ಸನ್ಮಾನಿಸಲಾಗುವುದು. ವರ್ಷ ರಘುನಾಥನ್ ಅವರು ಶುಭಶ್ರೀ ರಘುನಾಥನ್ ಮತ್ತು ರಘುನಾಥನ್ ಅವರ ಪುತ್ರಿಯಾಗಿದ್ದು, ಕೇರಳದ ಕೊಲ್ಲಂನ ಅಮೃತ ಸ್ಕೂಲ್ ಆಫ್ ಆಯುರ್ವೇದ ಕಾಲೇಜಿನಲ್ಲಿ ಆಯುರ್ವೇದ ಮೆಡಿಸಿನ್ ಮತ್ತು ಸರ್ಜರಿ ವ್ಯಾಸಂಗ ಮಾಡುತ್ತಿದ್ದಾರೆ.

ಮೈಸೂರಲ್ಲಿ ಉದ್ದೇಶಿತ ಕ್ರಿಕೆಟ್ ಸ್ಟೇಡಿಯಂ ಜಾಗದ ಸ್ವಚ್ಛತಾ ಕಾರ್ಯ ಆರಂಭ





ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂಗೆ ಹಂಚ್ಯಾ–ಸಾತಗಳ್ಳಿ ಬಳಿ ಗುರ್ತಿಸಿರುವ ಜಾಗದ ಸ್ವಚ್ಛತಾ ಕಾರ್ಯವನ್ನು ಮುಡಾ ಆರಂಭಿಸಿದೆ (ಎಡಚಿತ್ರ). ಇದೇ ಜಾಗದಲ್ಲಿ ಸಣ್ಣ ಕಟ್ಟೆಯಿದ್ದು, ಅದರಲ್ಲಿ ಪೂರ್ಣ ನೀರಿದೆ.

ಮೈಸೂರು, ಏ. 7 (ಆರ್‌ಕೆ)– ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಿಸಲು ಗುರುತಿಸಿರುವ ಮೈಸೂರಿನ ಹಂಚ್ಯಾ–ಸಾತಗಳ್ಳಿ ಸಮೀಪದ ವಿಟಿಯು ಪ್ರಾದೇಶಿಕ ಕಚೇರಿ ಪಕ್ಕ, ರಿಂಗ್ ರೋಡ್‌ಗೆ ಹೊಂದಿಕೊಂಡಂತಿರುವ 20.20 ಎಕರೆ ಜಾಗದಲ್ಲಿ ಬೆಳೆದಿದ್ದ ಗಿಡಗಂಟಿ, ಪೊದೆಯನ್ನು ತೆರವುಗೊಳಿಸುವ ಕಾರ್ಯ ಭರದಿಂದ ಸಾಗಿದೆ. ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ) ಕೋರಿಕೆಯಂತೆ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂ ನಿರ್ಮಿಸಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ವು ಈ 20.20 ಎಕರೆ ಜಾಗವನ್ನು ಗುರುತಿಸಿತ್ತು. ಪ್ರಾಧಿಕಾರದ ಸಭೆಯಲ್ಲಿ ಕೆಎಸ್‌ಸಿಎಗೆ ನೀಡುವ ಬಗ್ಗೆ ತೀರ್ಮಾನಿಸಿ ಕೈಗೊಂಡ ನಿರ್ಣಯದೊಂದಿಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಅನುಮೋದನೆಗಾಗಿ ನಿರೀಕ್ಷಿಸಲಾಗಿದೆ.

ಅಲ್ಲಿಯವರೆಗೆ ತಮ್ಮ ಜಾಗವನ್ನು ಭದ್ರಪಡಿಸಿಕೊಳ್ಳುವ ಸಲುವಾಗಿ ಮುಡಾ, ದಟ್ಟವಾಗಿ ಬೆಳೆದು ನಿಂತಿರುವ ಗಿಡಗಂಟಿ ತೆರವುಗೊಳಿಸಿ ಸ್ವಚ್ಛ ಮಾಡಿ ಸುತ್ತ ತಂತಿ ಬೇಲಿ ಹಾಕಿಸಲು ಮುಂದಾಗಿದ್ದು, 12 ಲಕ್ಷ ರೂ.ಗಳ ಟೆಂಡರ್ ಮೂಲಕ ಕಾಮಗಾರಿ ನಡೆಸಲು ಗುತ್ತಿಗೆ ನೀಡಿದೆ. ಕಳೆದ 15 ದಿನಗಳಿಂದ ತೆರವು ಕಾರ್ಯ ನಡೆಯುತ್ತಿದ್ದು, ಈಗಾಗಲೇ ಶೇ. 80ರಷ್ಟು ಕೆಲಸ ಪೂರ್ಣಗೊಂಡಿದೆ ಎಂದು ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮುಡಾ ಹಂಚ್ಯಾ–ಸಾತಗಳ್ಳಿಯ ಸರ್ವೆ ನಂಬರ್ 84, 85, 88, 104, 105, 107, 09 ಮತ್ತು 106ರ ಜಾಗದಲ್ಲಿ ಬೆಳೆದು ನಿಂತಿರುವ ಮರ, ಗಿಡಗಂಟಿಗಳನ್ನು ಕಡಿದು ಹಾಕುತ್ತಿರುವುದಲ್ಲದೆ, ಅಲ್ಲಿದ್ದ ಕಟ್ಟೆಯನ್ನು ಮುಚ್ಚುತ್ತಿದೆ ಎಂದು ಕೆಲ ಪರಿಸರವಾದಿಗಳು ಆರೋಪಿಸಿದ್ದಾರೆ. ಅದನ್ನು ಅಲ್ಲಗಳೆದಿರುವ ಮುಡಾ ಆಯುಕ್ತ, ಅಲ್ಲಿದ್ದ ಕುರುಚಲು ಗಿಡ, ಪೊದೆಗಳನ್ನು ಮಾತ್ರ ತೆರವುಗೊಳಿಸುತ್ತಿದ್ದು, ಕಟ್ಟೆ ಮುಚ್ಚಿ ಹಾಕಲು ಯಾರಿಂದಲೂ ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಸ್ಥಳದಲ್ಲಿ ದಟ್ಟವಾಗಿ ಗಿಡಗಂಟಿ ಬೆಳೆದಿರುವುದರಿಂದ ಜನರು ಅಲ್ಲಿಗೆ ತ್ಯಾಜ್ಯ ಬಿಸಾಡುತ್ತಿದ್ದಾರಲ್ಲದೆ, ಕೆಲ ಅಕ್ರಮ ಚಟುವಟಿಕೆಗಳೂ ನಡೆಯುತ್ತಿರುವುದಲ್ಲದೆ, ಚಿರತೆಗಳು ಕಾಣಿಸಿಕೊಳ್ಳುತ್ತಿವೆ ಎಂದು ವಾಯುವಿಹಾರಿಗಳು ದೂರು ನೀಡಿದ್ದ ಹಿನ್ನೆಲೆಯಲ್ಲಿ ತಾವು ಜಾಗವನ್ನು ಸ್ವಚ್ಛಗೊಳಿಸಿ ಮುಡಾ ಆಸ್ತಿ ಸಂರಕ್ಷಿಸಲು ಮುಂದಾಗಿದ್ದೇವೆ ಎಂದು ಜಿ.ಟಿ. ದಿನೇಶ್‌ಕುಮಾರ್ ತಿಳಿಸಿದ್ದಾರೆ.

ಸ್ವಯಂಘೋಷಿತ ಆಸ್ತಿ ತೆರಿಗೆ ಪಾವತಿಗೆ ರಮ್ಮನಹಳ್ಳಿ ಪಟ್ಟಣ ಪಂಚಾಯ್ತಿ ಸೂಚನೆ

ಮೈಸೂರು, ಏ.7–ರಮ್ಮನಹಳ್ಳಿ ಪಟ್ಟಣ ಪಂಚಾಯ್ತಿ ವ್ಯಾಪ್ತಿಯ ಆಸ್ತಿ ಮಾಲೀಕರು ಕಡ್ಡಾಯವಾಗಿ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯಡಿ ಪ್ರಸಕ್ತ 2023–24ನೇ ಸಾಲಿನ ಆಸ್ತಿ ತೆರಿಗೆಯನ್ನು ಏ.30ರೊಳಗೆ ಪಾವತಿಸಿದರೆ ಶೇ.5ರಷ್ಟು ರಿಯಾಯಿತಿ ನೀಡಲಾಗುತ್ತದೆ. ಮೇ ಮತ್ತು ಜೂನ್ ತಿಂಗಳಿನಲ್ಲಿ ದಂಡ ರಹಿತವಾಗಿ ಪಾವತಿಸಬಹುದಾಗಿದೆ. ಜುಲೈ 1 ರಿಂದ ಆಸ್ತಿ ತೆರಿಗೆ ಪಾವತಿಸುವವರು ಪ್ರತಿ ತಿಂಗಳು ಶೇ.2ರಷ್ಟು ದಂಡವನ್ನು ಪಾವತಿಸಬೇಕಾಗುತ್ತದೆ. ನೀರಿನ ಕಂದಾಯ ಬಾಕಿ ಉಳಿಸಿಕೊಂಡಿರುವವರು ನೀರಿನ ಕಂದಾಯ ಕಡ್ಡಾಯವಾಗಿ ಪಾವತಿಸಬೇಕು.

ಆಸ್ತಿ ತೆರಿಗೆಯನ್ನು ಸಕಾಲದಲ್ಲಿ ಪಾವತಿಸಿ ಪಟ್ಟಣ ಪಂಚಾಯ್ತಿ ಅಭಿವೃದ್ಧಿಗೆ ಸಹಕರಿಸಲು ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಪಿಎಫ್‌ಓ ವಿವಿಧ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು, ಏ.7–ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆಯಿಂದ (EPFO)ಸೋಷಿಯಲ್ ಸೆಕ್ಯೂರಿಟಿ ಅಸಿಸ್ಟೆಂಟ್ ಹಾಗೂ ಸ್ಟೆನೋಗ್ರಾಫರ್ ಹುದ್ದೆಗಳಿಗೆ ಆನ್–ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಸೋಷಿಯಲ್ ಸೆಕ್ಯುರಿಟಿ ಅಸಿಸ್ಟೆಂಟ್ ಹುದ್ದೆಗೆ ಯಾವುದೇ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದಿರಬೇಕು. ಸ್ಟೆನೋಗ್ರಾಫರ್ ಹುದ್ದೆಗೆ 12ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ವಯೋಮಿತಿ 18 ರಿಂದ 27 ವರ್ಷದವರಾಗಿರಬೇಕು. ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಗರಿಷ್ಠ 40 ವರ್ಷದವರೆಗೆ ಸಡಿಲಿಕೆ ಇರುತ್ತದೆ. ಪ.ಜಾ/ಪ.ಪಂ ಅಭ್ಯರ್ಥಿಗಳಿಗೆ ಗರಿಷ್ಠ 45 ವರ್ಷದವರೆಗೆ ಸಡಿಲಿಕೆ ಇರುತ್ತದೆ. ಒಬಿಸಿ ಅಭ್ಯರ್ಥಿಗಳಿಗೆ ಗರಿಷ್ಠ 43 ವರ್ಷದವರೆಗೆ ಸಡಿಲಿಕೆ ಇರುತ್ತದೆ. ಅರ್ಜಿ ಶುಲ್ಕ ರೂ.700. ಮಹಿಳೆ.ಪ.ಜಾ/ಪ.ಪಂ/ಅ.ವಿ./ಮಾ.ಸೈ. ಅಭ್ಯರ್ಥಿಗಳಿಗೆ ಯಾವುದೇ ಶುಲ್ಕ ಇರುವುದಿಲ್ಲ. ಅರ್ಜಿ ಸಲ್ಲಿಸಲು ಏ.26 ಕೊನೆಯ ದಿನಾಂಕವಾಗಿರುತ್ತದೆ.

ಆಸಕ್ತರು ಸಂಪೂರ್ಣ ವಿವರಗಳಿಗೆ www.epfindia.gov.in ಮತ್ತು http://recruitment.nta.nic.in ವೆಬ್‌ಸೈಟ್‌ಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ:011–69227700, 011–40759000 ಹಾಗೂ ಸಹಾಯಕ ನಿರ್ದೇಶಕರು, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಮೈಸೂರು (ದೂ: 08212489972) ಇವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸಹಾಯಕ ನಿರ್ದೇಶಕರಾದ ಡಿ.ಎಂ. ರಾಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಕಾವೇರಿ ಕಾಲೇಜಿನ 1981ನೇ ಸಾಲಿನ ಬಿಕಾಂ ವಿದ್ಯಾರ್ಥಿಗಳ ಸಂಭ್ರಮದ ಸಮ್ಮಿಲನ



ಮೈಸೂರು, ಏ. 7– ಮೈಸೂರಿನ ಕಾವೇರಿ ಕಾಲೇಜಿನಲ್ಲಿ ಬಿಕಾಂ ವಿದ್ಯಾರ್ಥಿಗಳ 3ನೇ ವರ್ಷದ ಸಮ್ಮಿಲನ ಮೈಸೂರು ರೂಸ್ಟ್ ಹೊಟೇಲ್ ಸಭಾಂಗಣದಲ್ಲಿ ಶ್ರೀಮತಿ ಯೋಗಿನಿ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆಯಿತು.

ಸಮಾರಂಭದಲ್ಲಿ 50 ಸಹಪಾಠಿಗಳು, ಅವರ ಪತಿ–ಪತ್ನಿಯರೊಂದಿಗೆ ಸೇರಿ ತಮ್ಮ ನೆಚ್ಚಿನ ಲೆಕ್ಕ ಶಾಸ್ತ್ರದ ಗುರುಗಳಾದ ಪ್ರೊ. ಟಿ.ವೆಂಕಟರಾಮಯ್ಯ, ಅವರ ಪತ್ನಿ ಸೂರ್ಯಕುಮಾರಿ ಮತ್ತು ಭೂಗೋಳ ಶಾಸ್ತ್ರದ ಅಧ್ಯಾಪಕ ಡಾ. ವಿ.ಎನ್.ನಾಯಕ್ ಅವರನ್ನು ಶಾಲು ಹೊದಿಸಿ ನೆನಪಿನ ಕಾಣಿಕೆ ನೀಡಿ, ಸನ್ಮಾನಿಸಿದರು. ನಂತರ ಪ್ರೊ.ವೆಂಕಟರಾಮಯ್ಯ ಮಾತನಾಡಿ, ನಾನು ಕೊಡಗಿನ ಕಾವೇರಿ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದ ಸಂದರ್ಭದಲ್ಲಿ ಅಲ್ಲಿನ ಜನತೆ ನನಗೆ ಎಲ್ಲಾ ಸವಲತ್ತುಗಳನ್ನು ನೀಡಿ ಪ್ರೀತಿಯಿಂದ ನೋಡಿಕೊಂಡರು. ಆ ಅವಧಿಯ ಉತ್ತಮ ಆಡಳಿತ ಮಂಡಳಿಯ ಸಹಕಾರದಿಂದ ನಿಮ್ಮಂತಹ ಉತ್ತಮ ವಿದ್ಯಾರ್ಥಿಗಳನ್ನು ಸೃಷ್ಟಿಸಲು ಸಾಧ್ಯವಾಯಿತು. ಶ್ರದ್ಧೆಯಿಂದ ವಿದ್ಯಾಭ್ಯಾಸ ಮಾಡಿ, ಸಾಧನೆ ಮಾಡುವುದರಿಂದ ದೇಶದ ಪ್ರಗತಿ ಸಾಧ್ಯ. ಎಲ್ಲರೂ ತಮ್ಮ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕಲ್ಪಿಸಬೇಕೆಂದು ಹಿತನುಡಿದರು.

ಡಾ. ವಿ.ಎನ್.ನಾಯಕ್ ಮಾತನಾಡಿ, ನಾನು ಕೊಡಗಿನಲ್ಲಿ ಸೇವೆ ಸಲ್ಲಿಸಿದ ಸಂದರ್ಭದಲ್ಲಿ ಅಲ್ಲಿನ ಪ್ರಕೃತಿಗೆ ಮಾರುಹೋಗಿದ್ದೆ. ಕೊಡಗಿನ ಕಾಫಿ ಕೃಷಿಯ ಬಗ್ಗೆ ಅಧ್ಯಯನ ಮಾಡಿ, ಡಾಕ್ಟರೇಟ್ ಪದವಿ ಪಡೆದುಕೊಂಡೆ. ಕೊಡಗಿನ ವಿದ್ಯಾರ್ಥಿಗಳು ಸೈನಿಕರಂತೆ ಶಿಸ್ತುಳ್ಳವರು ಗುರುಗಳಿಗೆ ಅಪಾರ ಗೌರವ ನೀಡುತ್ತಾರೆ. ಗುರು–ಶಿಷ್ಯರ ಸಂಬಂಧ ಹೀಗೆಯೇ ಮುಂದುವರಿಯಲಿ ಎಂದು ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಸಹಪಾಠಿಗಳಾದ ನಂದಿನೆರವಂಡ ದಿನೇಶ್, ಚೆಪ್ಪುಡಿರ ಕಿರಣ್ ಕುಟ್ಟಪ್ಪ, ಕೇರಳದಿಂದ ಆಗಮಿಸಿದ ಮಾಜಿ ಸೈನಿಕ ವಿಜಯನ್, ಶ್ರೀಮತಿ ಜಾಲಿ ಪೌಲ್, ಕಾಫಿ ಬೆಳೆಗಾರ ಗಾಂಧಿರಾವ್, ತಾತಂಡ ದಿಲೀಪ್, ಮೈಸೂರಿನ ಶ್ರೀಮತಿ ಇಂದಿರ, ಶ್ರೀಮತಿ ಮಾಯ, ಶ್ರೀಮತಿ ಆದೇಂಗಡ ಸುಮಿತ್ರ, ಶ್ರೀಮತಿ ಕುಪ್ಪಂಡ ಶ್ವೇತಾ ಗಣೇಶ ಇತರರು ಉಪಸ್ಥಿತರಿದ್ದರು. ಈ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆ – ಸಮಾಜ ಸೇವೆ ಸಲ್ಲಿಸಿದವರು, ಕೂಟದ ಬೆಳವಣಿಗೆಗೆ ಸಹಕರಿಸಿದವರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

ನೇಮಕ



ಮೈಸೂರು, ಏ.7–ಮೈಸೂರು ನಗರ (ಜಿಲ್ಲೆ) ಕಾಂಗ್ರೆಸ್‌ನ ಹಿಂದುಳಿದ ವರ್ಗಗಳ ವಿಭಾಗದ ಸಹ ಕಾರ್ಯದರ್ಶಿಯನ್ನಾಗಿ ಜನತಾನಗರದ ಆರ್.ರಾಮಚಂದ್ರ ಅವರನ್ನು ನೇಮಕ ಮಾಡಲಾಗಿದೆ.

ಜಯದೇವ ಆಸ್ಪತ್ರೆಯಲ್ಲಿ ಇಂದು ಪತ್ರಕರ್ತರಿಗೆ ಹೃದಯ ತಪಾಸಣೆ

ಮೈಸೂರು, ಏ.7(ಆರ್‌ಕೆ)– ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಶ್ರೀ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ನಾಳೆ (ಏ.8) ಪತ್ರಕರ್ತರು ಹಾಗೂ ಅವರ ಕುಟುಂಬದವರಿಗೆ ಉಚಿತ ಹೃದಯ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಮತ್ತು ಶ್ರೀ ಜಯದೇವ ಹೃದ್ರೋಗ ಆಸ್ಪತ್ರೆ ಸಹಯೋಗದಲ್ಲಿ ಶನಿವಾರ ಬೆಳಗ್ಗೆ 8 ರಿಂದ ಮಧ್ಯಾಹ್ನ 12–30 ಗಂಟೆಯವರೆಗೆ ಆಯೋಜಿಸಿರುವ ಶಿಬಿರವನ್ನು ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ. ಕೆ.ಎಸ್. ಸದಾನಂದ ಉದ್ಘಾಟಿಸುವರು. ಶಿಬಿರದಲ್ಲಿ ಬಿಪಿ, ಶುಗರ್, ಇಸಿಜಿ ಅಗತ್ಯ ಬಿದ್ದರೆ ಟ್ರೆಡ್‌ಮಿಲ್ ಟೆಸ್ಟ್ (TMT) ಸೇರಿದಂತೆ ಹೃದಯಕ್ಕೆ ಸಂಬಂಧಿಸಿದ ಹಲವು ತಪಾಸಣೆ ಮಾಡಿ ತಜ್ಞ ವೈದ್ಯರು ಸಲಹೆ–ಚಿಕಿತ್ಸೆ ನೀಡುವರು. ಪತ್ರಕರ್ತರು ಇದರ ಸದುಪಯೋಗ ಪಡಿಸಿಕೊಳ್ಳುವಂತೆ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ. ಸುಬ್ರಹ್ಮಣ್ಯ ತಿಳಿಸಿದ್ದಾರ.



ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ನಡೆದ 253ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ಪಂ. ಎಂ.ವೆಂಕಟೇಶ್ ಕುಮಾರ್ ಗಾಯನ ಪ್ರಸ್ತುತಪಡಿಸಿದರು. ಪಕ್ಕವಾದ್ಯದಲ್ಲಿ ಪಂ. ಕೇಶವ ಜೋಷಿ, ರಮೇಶ್ ಕಲ್ಕುಂದ, ಮೃತ್ಯುಂಜಯ ಹಾಗೂ ಪಂ. ವೀರಭದ್ರಯ್ಯ ಹಿರೇಮಠ ಇದ್ದಾರೆ.

ಶ್ರೀ ಗುರುಕಲಾ ಶಾಲೆಯ ಪುಟಾಣಿ ಪರ್‌ಪಂಚ ಬೇಸಿಗೆ ಶಿಬಿರ ಉದ್ಘಾಟನೆ



ಮೈಸೂರು, ಏ.7–ನಗರದ ಶ್ರೀ ಗುರುಕಲಾ ಶಾಲೆಯ ವತಿಯಿಂದ ಕಾಗಿನೆಲೆ ವಿದ್ಯಾ ಸಂಸ್ಥೆಯ ಶಿಶುಲೋಕದಲ್ಲಿ ಬೇಸಿಗೆಯಲ್ಲಿ ಮಕ್ಕಳ ಪ್ರತಿಭಾನ್ವೇಷಣೆ ಉದ್ದೇಶದಿಂದ ಬೇಸಿಗೆ ಶಿಬಿರವನ್ನು ಏರ್ಪಡಿಸಲಾಗಿದೆ.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ನಟ ಶಿವಾಜಿರಾವ್ ಜಾದವ್ ಪುಟಾಣಿ ಪರ್‌ಪಂಚ ಉದ್ಘಾಟಿಸಿ ಮಾತನಾಡುತ್ತಾ, ಇಂದಿನ ಮಕ್ಕಳಿಗೆ ದೇಸಿ ಕಲೆಗಳಾದ ಚಿನ್ನಿಕೋಲು, ಲಗೋರಿ, ಕುಂಟಬಿಲ್ಲೆ, ಹಳಿಗುಳಿಮನೆ, ಮಡಿಕೆ ಆಟಗಳು ಮರೆಯಾಗುತ್ತಿದ್ದು ಇದು ಬೇಸರದ ಸಂಗತಿ. ಅತ್ಯಾಧುನಿಕ ತಂತ್ರಜ್ಞಾನ ಮತ್ತು ವಸ್ತುಗಳಿಂದ ಹಳೆಯ ಕಾಲದ ದೇಸಿ ಆಟಗಳು ಮರೆಯಾಗುತ್ತಿವೆ. ಇದು ನಿಲ್ಲಬೇಕು ನಮ್ಮ ಮಕ್ಕಳಿಗೆ ನೆಲ, ಜಲ, ಭಾಷೆ, ಸಂಸ್ಕೃತಿ ಭಾವೈಕ್ಯತೆ ರಂಗ ತರಬೇತಿ ನೀಡುವುದು ಇಂದಿನ ಶಿಬಿರಗಳ ಮುಖ್ಯವಾದ ಉದ್ದೇಶವಾಗಿದೆ. ಮಕ್ಕಳು ಬೇಸಿಗೆ ಶಿಬಿರಗಳನ್ನು ಕಲಾಸಂಗಮವನ್ನಾಗಿ ಪರಿವರ್ತಿಸಿಕೊಳ್ಳಬೇಕು. ಸಂಗೀತ, ನೃತ್ಯ, ನಾಟಕ ದೇಸಿಯ ರಂಗಕಲೆಗಳಲ್ಲಿ ತರಬೇತಿ ನೀಡುವ ಶಿಕ್ಷಕರಿಂದ ಕಲೆಗಳನ್ನು ಕಲಿತುಕೊಳ್ಳುವಂತೆ ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಗುರುಕಲಾ ಶಾಲೆಯ ಅಧ್ಯಕ್ಷ ರಂಗಕರ್ಮಿ ಎನ್. ಧನಂಜಯ ಮಾತನಾಡಿ, ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಹೊರತರುವುದೇ ನಮ್ಮ ಶಿಬಿರದ ಉದ್ದೇಶವಾಗಿದೆ. ಈಗಾಗಲೇ ಆಕಾಶವಾಣಿಯಲ್ಲಿ ಮಕ್ಕಳ ಮಂಟಪ, ಕೇಳಿ ಗಿಳಿಗಳಿರ ಕಾರ್ಯಕ್ರಮಗಳಲ್ಲಿ ಮಕ್ಕಳು ಭಾಗವಹಿಸಿ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಇದು ನಮಗೆ ಅತ್ಯಂತ ಸಂತಸದ ಸಂಗತಿ. ಕಳೆದ 08 ವರ್ಷಗಳಿಂದಲೂ ಶಾಲೆಗೆ ಹತ್ತಾರು ಜನ ಸಂಪನ್ಮೂಲ ವ್ಯಕ್ತಿಗಳು ಆಗಮಿಸಿ ಮಕ್ಕಳಿಗೆ ವಿವಿಧ ಕ್ಷೇತ್ರದ ಕಲೆಗಳ ತರಬೇತಿ ನೀಡಿರುವುದು ಅತ್ಯಂತ ಸಂತಸದ ಸಂಗತಿ ಎಂದರು. ಕಾರ್ಯಕ್ರಮದಲ್ಲಿ ಶಿಬಿರದ ನಿರ್ದೇಶಕರಾದ ಅರಸೀಕರೆ ಯೋಗಾನಂದ, ಕಾರ್ಯದರ್ಶಿ ಹೆಚ್.ಎಸ್. ಕವಿತಾಧನಂಜಯ ಉಪಸ್ಥಿತರಿದ್ದರು.



ಮೈಸೂರಿನ ಗಾಂಧಿನಗರ ಡಾ.ಬಿ.ಆರ್. ಅಂಬೇಡ್ಕರ್ ನಾಗರಿಕರ ಹಿತರಕ್ಷಣಾ ಸಮಿತಿ ವತಿಯಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 132 ನೇ ಜಯಂತಿ ಅಂಗವಾಗಿ ಏ.14 ರಂದು ನಡೆಯಲಿರುವ ಬೃಹತ್ ಮೆರವಣಿಗೆಯ ಪೋಸ್ಟರ್ ಅನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಬಿಡುಗಡೆ ಮಾಡಿದರು. ಸಮಿತಿಯ ಅಧ್ಯಕ್ಷ ಶರತ್ ಸತೀಶ್ , ಪ್ರಧಾನ ಕಾರ್ಯದರ್ಶಿ ಸಿ.ದೇವರಾಜು, ಉಪಾಧ್ಯಕ್ಷ ರಾಜೇಶ್ ವಿ, ಬಿ.ವಿಜಯ್, ಕುಮಾರ್, ಎಸ್.ಮಂಜುನಾಥ್, ರಂಗಸ್ವಾಮಿ, ಭೀಮ್‌ರಾಜ್, ಎನ್.ಪಿ. ಸುರೇಶ್ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸಿಎಫ್‌ಟಿಆರ್‌ಐ ಸಿರಿಧಾನ್ಯದ ಸಿರಿ, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರ್ ಉಮೇಶ್, 7.15 ಭಾವಗೀತೆಗಳು–ರತ್ನಮಾಲಾ ಪ್ರಕಾಶ್, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ ಮಾಲಿಕೆಯಲ್ಲಿ ಮೈಸೂರಿನ ಯೋಗ ಶಿಕ್ಷಕ ಅಜಯ್ ಕುಮಾರ್ ಅವರೊಂದಿಗೆ ಸಂವಾದ, ನಡೆಸಿಕೊಡುವವರು– ದಿವಾಕರ ಹೆಗಡೆ, 10.00 ಜಿ. ಉಷಾ – ಹಾಡುಗಾರಿಕೆ

ಮಧ್ಯಾಹ್ನ: 12.45 ಜನಪದಸಂಗೀತ–ಲಕ್ಷ್ಮೀ ಸಾಗರದ ಕೆಂಚಮ್ಮ ಮತ್ತು ತಂಡ, 1.00 ರಂಗಗೀತೆ– ಪ್ರೇಮಲೀಲಾ ಹಾಗೂ ಚಂದ್ರಹಾಸ ನಾಟಕದ ಹಾಡುಗಳು, 1.20 ಭಾವಗೀತೆ–ಸಿ. ವಿಶ್ವನಾಥ್, 3.30 ಮಕ್ಕಳ ಮಂಟಪ, 4.00 ನಾಟಕ "ರಾಮಧಾನ್ಯ ಪ್ರಕರಣ", ಪ್ರಸ್ತುತಿ– ಬಹುಮುಖಿ ಸಾಂಸ್ಕೃತಿಕ ವೇದಿಕೆಯ ಸದಸ್ಯರು, 4.30 ನೆನಪಿನಂಗಳ–ಮೈಸೂರು ಆಕಾಶವಾಣಿ ಸ್ಥಾಪಕರಾದ ಡಾ.ಎಂ.ವಿ. ಗೋಪಾಲಸ್ವಾಮಿ ಅವರ ಧರ್ಮಪತ್ನಿ ಕಮಲಾ ಗೋಪಾಲಸ್ವಾಮಿ ಅವರೊಂದಿಗೆ ಡಾ. ಜ್ಯೋತ್ಸ್ನಾ ಕಾಮತ್ ನಡೆಸಿದ್ದ ಸಂವಾದ, 6.50 ಕೃಷಿರಂಗ "ತೋರಣ ಹೂರಣ", 8.00 ಯುವವಾಣಿ, 10.00 ಸಂತಪುರಂ ಎಸ್.ಪಿ. ಪಳನಿವೇಲು–ನಾಗಸ್ವರಂ

ಇಂದಿನ ಪಂಚಾಂಗ

8.4.2023 ಶನಿವಾರ, ಮಳೆ ನಕ್ಷತ್ರ: ರೇವತಿ, 31.03.2023 ರಿಂದ 13.04.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ:ಬಿದಿಗೆ, ನಕ್ಷತ್ರ: ಸ್ವಾತಿ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ :** ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಜಯದೇವ ಆಸ್ಪತ್ರೆ, ಕೆ.ಆರ್.ಎಸ್. ರಸ್ತೆ, ಬೆಳಗ್ಗೆ 8 ರಿಂದ.

■ **ಜೆಎಸ್‌ಎಸ್ ಕಾನೂನು ಕಾಲೇಜು, ಸುರಾನ ಮತ್ತು ಸುರಾನ ಅಂತರರಾಷ್ಟ್ರೀಯ ಅಟಾರ್ನಿ :** 20ನೇ ರಾಷ್ಟ್ರೀಯ ಅಣುಕು ನ್ಯಾಯಾಲಯ ಸ್ಪರ್ಧೆ, ಉದ್ಘಾಟನೆ : ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಹೆಚ್.ಪಿ. ಸಂದೇಶ್, ಸ್ಥಳ: ಜೆಎಸ್‌ಎಸ್ ಕಾನೂನು ಕಾಲೇಜು, ಕುವೆಂಪುನಗರ, ಬೆಳಗ್ಗೆ 9.30ಕ್ಕೆ.

■ **ಯಶಸ್ವಿನಿ ಮಹಿಳಾ ಜಾಗೃತಿ ಪರಿಷತ್ :** 78ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು ಪಂಪ ಪ್ರಶಸ್ತಿ ಪುರಸ್ಕೃತರಾದ ಚುಟುಕು ರತ್ನ ಡಾ.ಸಿಪಿಕೆ ಅವರ 85ನೇ ಹುಟ್ಟುಹಬ್ಬ ಸಮಾರಂಭ, ಉದ್ಘಾಟನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಡಾ.ಅರವಿಂದ ಮಾಲಗತ್ತಿ, ಸಿಪಿಕೆ ಅವರಿಗೆ ಶುಭ ಹಾರೈಕೆ: ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಡಾ.ನೀಲಗಿರಿ ತಳವಾರ, ಉಪಸ್ಥಿತರು: ಚುಟುಕು ರತ್ನ ಡಾ.ಸಿಪಿಕೆ, ಯಶಸ್ವಿನಿ ಮಹಿಳಾ ಜಾಗೃತಿ ಪರಿಷತ್ ಉದ್ಘಾಟನೆ: ಚುಟುಕು ಸಾಹಿತ್ಯ ಪರಿಷತ್, ಕೇಂದ್ರ ಸಮಿತಿ ಸಂಸ್ಥಾಪಕ ಡಾ. ಎಂ.ಜಿ.ಆರ್.ಅರಸ್, ಪುಸ್ತಕ ತಾಂಬೂಲ ವಿತರಣೆ: ಮೈಸೂರು ವಾಣಿಜ್ಯ ಮತ್ತು ಕೈಗಾರಿಕೋದ್ಯಮಿಗಳ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಅಧ್ಯಕ್ಷತೆ: ಶತಮಾನೋತ್ಸವ ಸಂಭ್ರಮದಲ್ಲಿರುವ ಅರಸು ಮಂಡಳಿ ಅಧ್ಯಕ್ಷ ಹೆಚ್.ಎಂ.ಟಿ.ಲಿಂಗರಾಜೇ ಅರಸ್, ಮುಖ್ಯ ಅತಿಥಿಗಳು: ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮೈಸೂರು ಜಿಲ್ಲಾ ಚುಟುಕ ಸಾಹಿತ್ಯ ಪರಿಷತ್ ಅಧ್ಯಕ್ಷ ಚುಟುಕು ಸಿರಿ ಡಾ. ರತ್ನ ಹಾಲಪ್ಪಗೌಡ, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ಕ್ಕೆ.

■ **ನಿಸರ್ಗ ಟ್ರಸ್ಟ್, ನೈಸರ್ಗಿಕ ಸಾವಯುವ ರೈತ ಗ್ರಾಹಕ ಒಕ್ಕೂಟ :** ನೈಸರ್ಗಿಕ ಸಾವಯವ ರೈತರ ಸಂತೆ, ಸ್ಥಳ: 23, 18ನೇ ಮುಖ್ಯ ರಸ್ತೆ, 8ನೇ ಅಡ್ಡ ರಸ್ತೆ, ಕುವೆಂಪುನಗರ, ಬೆಳಗ್ಗೆ 10ಕ್ಕೆ

■ **ಮೈಸೂರು ಆರ್ಟ್ ಗ್ಯಾಲರಿ :** ಸಾಧಕರೊಂದಿಗೆ ಸಂವಾದ–78, ತಿಂಗಳ ಸಾಧಕರು ಆಹಾರ ಜೋಳಿಗೆಯ ಡಾ. ರಾಜೇಂದ್ರ ಮತ್ತು ಶ್ವೇತಾ ದಂಪತಿಗಳು, ಮುಖ್ಯ ಅತಿಥಿಗಳು : ಮಾನಸಿಕ ರೋಗ ತಜ್ಞ ಡಾ. ಸುಮನ್ ಕೆ. ಮೂರ್ತಿ, ಅಧ್ಯಕ್ಷತೆ : ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ಕ್ಕೆ.

■ **ಸುರುಚಿ ರಂಗಮನೆ ಕಲಾಸುರುಚಿ :** ಮಕ್ಕಳಿಗೆ ಕಥೆ ಹೇಳೋಣ ಬನ್ನಿ ಕಾರ್ಯಕ್ರಮ, ತಾಂತ್ರಿಕ ಸ್ಫೂರ್ತಿ ಸಂವಹನಕಾರ ಬಿ.ಎಸ್. ಕೃಷ್ಣಮೂರ್ತಿ ಅವರು ಕುತೂಹಲಕರ ಅಂಕಿಗಳು ವಿಷಯ ಕುರಿತು ಕಥೆ ಹೇಳುವರು, ಸ್ಥಳ: ಸುರುಚಿ ರಂಗ ಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.

■ **ಮೂನ್‌ಲೈಟ್ ಮ್ಯೂಜಿಕ್ ಅಕಾಡೆಮಿ :** ಗಾನೋತ್ಸವ, ಚಲನಚಿತ್ರ ಗೀತೆಗಳ ಸಂಗೀತ ರಸ ಸಂಜೆ ಕಾರ್ಯಕ್ರಮ, ಉದ್ಘಾಟನೆ : ಕೆಪಿಎ ಸಹಾಯಕ ನಿರ್ದೇಶಕ ಎಂ. ಶಿವಶಂಕರ್, ಮುಖ್ಯ ಅತಿಥಿಗಳು : ಸಾಫ್ಟ್‌ವೇರ್ ಇಂಜಿನಿಯರ್ ಸುಷ್ಮ ರಘು, ಆಂದೋಲನ ಪತ್ರಿಕೆಯ ರಶ್ಮಿ ಕೋಟಿ, ಹಿರಿಯ ಹೃದ್ರೋಗ ತಜ್ಞ ಡಾ. ಸಿ.ಬಿ. ಕೇಶವಮೂರ್ತಿ, ಉದ್ಯಮಿ ರಂಜಿತ್, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 5ಕ್ಕೆ.

■ **ಶ್ರೀ ರಾಘವೇಂದ್ರ ಸ್ವಾಮಿ ಸೇವಾ ಸಮಿತಿ :** ಪಂಡಿತ್ ಅನಿರುದ್ಧಾಚಾರ್ ಪಾಂಡುರಂಗಿ ಅವರಿಂದ ಪದ್ಮಪುರಾಣ ಕುರಿತು ಪ್ರವಚನ, ಸ್ಥಳ: ಶ್ರೀರಾಯರ ಮಠ, ಜಯಲಕ್ಷ್ಮಿಪುರಂ, ಸಂಜೆ 5ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ವಿಪ್ರಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ

■ **ನಟನ ರಂಗಶಾಲೆ :** ರಂಗಾಭ್ಯಾಸಿಗಳಿಂದ ಆಂಟನ್ ಚೆಕಾವ್ ಅವರ ರಚನೆಯ ಚೆರ್ರಿ ತೋಟ ನಾಟಕ ಪ್ರದರ್ಶನ, ನಿರ್ದೇಶನ : ಎನ್.ಎಸ್.ಡಿ. ಪದವೀಧರೆ ಯಶಸ್ವಿನಿ ರಾವ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ಕಲಾಸುರುಚಿ ಮತ್ತು ಕುತೂಹಲಿ ಸಂಸ್ಥೆ :** ಸೈನ್ಸ್ ಸಂಜೆ ಕಾರ್ಯಕ್ರಮ, ಬೆಂಗಳೂರಿನ ರಾಮನ್ ರಿಸರ್ಚ್ ಸಂಸ್ಥೆಯ ನಿವೃತ್ತ ವಿಜ್ಞಾನಿ ಡಾ. ಎಸ್. ಸೀತಾ ಅವರಿಂದ ಯುವಿ ಮತ್ತು ಎಕ್ಸರೇಗಳಲ್ಲಿ ಕಾಣದ ವಿಶ್ವ ಕುರಿತು ಉಪನ್ಯಾಸ, ಸ್ಥಳ: ಸುರುಚಿ ರಂಗಮನೆ, ಸಂಜೆ 6.30 ರಿಂದ.

ನಗರದಲ್ಲಿ ವಿವಿಧೆಡೆ ಶ್ರೀರಾಮೋತ್ಸವ

■ **ಶ್ರೀ ರಾಮ ಸೇವಾ ಚಾರಿಟಬಲ್ ಟ್ರಸ್ಟ್‌ನ ಅಂಗ ಸಂಸ್ಥೆ ಶ್ರೀ ರಾಮ ಸೇವಾ ಮಂಡಲಿ:** 70ನೇ ವರ್ಷದ ಶ್ರೀ ರಾಮೋತ್ಸವ, ಸಂಜೆ 6.30ಕ್ಕೆ ನಾದಸ್ವಾದ ಬೆಂಗಳೂರು ವೃಂದದವರಿಂದ ವಾದ್ಯ ಸಂಗೀತ, ರಾಘವೇಂದ್ರ ಶೃಂಗೇರಿ ಅವರಿಂದ ಕೊಳಲು, ನಾಗಪೂಜಿತ್ ಅವರಿಂದ ಕೊಳಲು, ಕೆ.ವಿ.ಶ್ರೇಯಸ್ ಅವರಿಂದ ಕೊಳಲು, ಶ್ರೀವತ್ಸ ಕಶ್ಯಪ್ ಅವರಿಂದ ಮ್ಯಾಂಡೋಲಿನ್, ಜಿ.ವಿ.ಶ್ರೀಹರ್ಷ ಅವರಿಂದ ಪಿಟೀಲು, ಅನಿರುದ್ಧ ವಾಸುದೇವ್ ಅವರಿಂದ ಮೃದಂಗ, ನಟರಾಜ್ ಶೃಂಗೇರಿ ಅವರಿಂದ ಘಟಂ, ಸ್ಥಳ: ಶ್ರೀ ಅವನಿ ಶಂಕರ ಮಠ, ವಿದ್ಯಾರಣ್ಯಪುರಂ, ಸಂಜೆ 6.30ಕ್ಕೆ.



■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ :** ಶ್ರೀ ರಾಮೋತ್ಸವ, ವಿದ್ವಾನ್ ರಾಮಕೃಷ್ಣನ್ ಮೂರ್ತಿ ಅವರಿಂದ ಶಾಸ್ತ್ರೀಯ ಸಂಗೀತ, ವಿದ್ವಾನ್ ಹೆಚ್.ಎನ್. ಭಾಸ್ಕರ್– ಪಿಟೀಲು, ವಿದ್ವಾನ್ ಡೆಲ್ಲಿ ಸಾಯಿರಾಂ–ಮೃದಂಗ, ವಿದ್ವಾನ್ ಗುರುಪ್ರಸನ್ನ–ಖಂಜೀರ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಶ್ರೀರಾಮ ಪೇಟೆ, ಸಂಜೆ 6.30ಕ್ಕೆ

■ **ಶ್ರೀ ರಾಮ ಮಂದಿರ :** ಶ್ರೀ ರಾಮನವಮಿ, ಬೆಳಗ್ಗೆ ಶ್ರೀ ಆದಿತ್ಯಾದಿ ನವಗ್ರಹ ಹೋಮ ನಾಂದಿ, ಸಂಜೆ 6.30ಕ್ಕೆ ವರಪೂಜೆ, ಸ್ಥಳ: ಶ್ರೀ ರಾಮ ಮಂದಿರ, ಜಯನಗರ.

■ **ಶ್ರೀ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ :** 107ನೇ ರಾಮನವಮಿ ವಾರ್ಷಿಕ ಪರಂಪರೆಯ ಸಂಗೀತೋತ್ಸವ, ವಿದ್ವಾನ್ ಪಟ್ಟಾಭಿರಾವ್ ಪಂಡಿತ್ ಅವರಿಂದ ಗಾಯನ, ವಿದ್ವಾನ್ ಮಧುರ್ ಶ್ರೀನಿಧಿ–ವಯೋಲಿನ್, ವಿದ್ವಾನ್ ಎಚ್.ಎಸ್. ಸುಧೀಂದ್ರ–ಮೃದಂಗ, ವಿದ್ವಾನ್ ರಘುನಂದನ್ ರಾವ್–ಘಟಂ, ಸ್ಥಳ: ಶ್ರೀ ಪ್ರಸನ್ನ ಸೀತಾರಾಮ ಮಂದಿರ, ಸಂಜೆ 6.15ಕ್ಕೆ

ವಿವೇಕ ಸೋಷಿಯಲ್ ಕ್ಲಬ್(ರಿ)

ಸಿ.ಎ.4, ಎಸ್.ಬಿ.ಎಂ.ಕಾಲೋನಿ, ಶ್ರೀರಾಂಪುರ, 2ನೇ ಹಂತ, ಮೈಸೂರು

ಸರ್ವ ಸದಸ್ಯರ ಸಭೆ

ಮಾನ್ಯರೆ,

ದಿನಾಂಕ: 9/04/2023 ರಂದು, ಭಾನುವಾರ ಬೆಳಗ್ಗೆ 10.30ಕ್ಕೆ ಸರಿಯಾಗಿ ಕ್ಲಬ್‌ನ ಆವರಣದಲ್ಲಿ 2020-21 ಮತ್ತು 2021-22ರ ಸರ್ವ ಸದಸ್ಯರ ಸಭೆಯನ್ನು ಸಂಘದ ಅಧ್ಯಕ್ಷರಾದ ಡಾ|| ಎನ್.ಕೃಷ್ಣೇಗೌಡ ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಎಲ್ಲಾ ಸದಸ್ಯರು ಸಭೆಗೆ ಹಾಜರಾಗಲು ಕೋರುತ್ತೇನೆ.

ಸಹಿ/- ಕಾರ್ಯದರ್ಶಿಗಳು, ವಿವೇಕ ಸೋಷಿಯಲ್ ಕ್ಲಬ್ (ರಿ)
ಶ್ರೀರಾಂಪುರ, ಮೈಸೂರು. ಮೊ: 6362494989

ಕಾಣೆಯಾಗಿದ್ದಾರೆ



ಪ್ರೇಮಮ್ಮ ನವರು 65 ವರ್ಷ

ಈ ಮೇಲ್ಕಂಡ ಮಹಿಳೆಯು ಶ್ರೀರಂಗಪಟ್ಟಣದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ರಸ್ತೆಯ ನಿವಾಸಿಯಾಗಿದ್ದು 20.11.2022ನೇ ಭಾನುವಾರದಂದು ಮೈಸೂರಿನ ಅಂಭಾ ಭವಾನಿ ದೇವಸ್ಥಾನ, ಎನ್.ಆರ್.ಮೊಹಲ್ಲಾ, ಇಲ್ಲಿಂದ ಮದುವೆಗೆ ಹೋದವರು ಕಾಣೆಯಾಗಿದ್ದಾರೆ. ಈಕೆ ನೆನಪಿನ ಶಕ್ತಿಯನ್ನು ಕಳೆದುಕೊಂಡಿರುತ್ತಾರೆ. ಎಲ್ಲಾದರೂ ಕಂಡು ಬಂದಲ್ಲಿ ದಯಮಾಡಿ ಈ ಕೆಳಗಿನ ಮೊಬೈಲ್ ಸಂಖ್ಯೆಗೆ ತಿಳಿಸಬೇಕಾಗಿ ಕೋರುತ್ತೇವೆ.

6364318494, 9019247855, 6364319476, 9742856884



ಸಾರ್ವಜನಿಕ ತಿಳುವಳಿಕೆ ಪತ್ರ

ನನ್ನ ಕಕ್ಷಿದಾರರು, ಈ ಕೆಳಗೆ ಅನುಸೂಚಿಯಲ್ಲಿ ನಮೂದಿಸಿರುವ ಸ್ವತ್ತನ್ನು, ಅದರ ಮಾಲೀಕರಾದ ಚಾಮರಾಜನಗರ ಜಿಲ್ಲೆ, ಚಾಮರಾಜನಗರ ಟೌನ್, ಚಮಾಲ್ ಬೀದಿ, 2ನೇ ಕ್ರಾಸ್, ವಾರ್ಡ್ ನಂ.20 ರಲ್ಲಿ ವಾಸವಾಗಿರುವ ಶ್ರೀ ರಾಜಶೇಖರ್ ಮೂರ್ತಿ ರವರ ಮಗನಾದ **ಶ್ರೀ ಮೋಹಕ್ ಆರ್.ಆರ್** ರವರಿಂದ ಖರೀದಿಸುವ ಇರಾದೆಯನ್ನು ಹೊಂದಿರುವುದು ಸರಿಯಷ್ಟೆ, **ಶ್ರೀ ಮೋಹಕ್ ಆರ್.ಆರ್** ರವರು ಮಾತ್ರ ಮಾಲೀಕರಾಗಿ ಅನುಸೂಚಿ ಸ್ವತ್ತಿನ ಮೇಲೆ ಹಕ್ಕು, ಆಸಕ್ತಿ ಮತ್ತು ಸೌಮ್ಯಂಗಳಿಗೂ ಒಳಪಟ್ಟು ಸ್ವಾಧೀನದಲಿದ್ದು ಅವರು ವಿಕ್ರಯಿಸಲು, ಪರಭಾರೆ ಮಾಡಲು ಸಂಪೂರ್ಣ ಸ್ವಂತಂತ್ರರಾಗಿಯೂ ಮತ್ತು ಕಾನೂನು ಪ್ರಕಾರ ಹಕ್ಕುಳ್ಳವರಾಗಿಯೂ ಇರುತ್ತೇನೆ ಎಂದು ಪ್ರತಿಪಾದಿಸುತ್ತಿದ್ದಾರೆ.

ಅನುಸೂಚಿ ಸ್ವತ್ತು ಯಾವುದೆ ಬ್ಯಾಂಕಿಗೆ, ಹಣಕಾಸು ಸಂಸ್ಥೆಗೆ ಅಥವ ಯಾವುದೇ ಸಂಘ, ಸಂಸ್ಥೆಗೆ, ನ್ಯಾಸ(ಟ್ರಸ್ಟ್) ಮತ್ತು ಯಾವುದೇ ವ್ಯಕ್ತಿಗೆ ಸಮ್ಮತವಾದ ಮತ್ತು ಕಾನೂನು ಬದ್ಧವಾದ ಹಕ್ಕು ಆಸಕ್ತಿ ಅಂದರೆ, ಆಧಾರ, ಭೋಗ್ಯ, ಗೇಣಿ, ಕ್ರಯ, ದಾನ, ರಿಲೀಸ್, ವ್ಯವಸ್ಥಾ, ಹಿಸ್ಸೆ, ಜೀವನಾಂಶ, ಭಾಗಾಂಶ, ಮೈನರ್ ಹಕ್ಕು, ವಾರಸು ಹಕ್ಕು, ರಹದಾರಿ, ನಿರಂತರವಾಗಿ ಬಳಸಿರುವ (ಹಾದಿ) ಹಕ್ಕು, ಡಿಮಾಂಡ್ ಸಿವಿಲ್, ರೆವಿನ್ಯೂ, ಕ್ರಿಮಿನಲ್, ಕೋರ್ಟ್ ಅಟ್ಯಾಚ್ ಮೆಂಟ್, ದಾವಾ, ಡಿಕ್ರಿ, ಜಪ್ತಿ, ಜಾಮೀನು, ನಿರ್ದಿಷ್ಟ ಪರಿಹಾರ ಸಾಲ ಬಾಕಿ, ಕರಾರು, ಅಧಿಕಾರ ಪತ್ರ, ಇತರೆ ತಂಟೆ ತಕರಾರು ಇದ್ದಲ್ಲಿ, ಅವರು ಖುದ್ದಾಗಿ ದಾಖಲೆಗಳ ಸಹಿತ ಈ ಪತ್ರಿಕಾ ಪ್ರಕಟಣೆಯಾದ **15 (ಹದಿನೈದು)** ದಿನಗಳ ಸೂಕ್ತ ದಾಖಲೆಗಳೊಂದಿಗೆ ಒಳಗೆ ಕೆಳಕಂಡ ನನ್ನ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು ಅಥವಾ ಲಿಖಿತವಾಗಿ ತಿಳಿಸತಕ್ಕದ್ದು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಅನುಸೂಚಿ ನಿವೇಶನಗಳ ಸಂಬಂಧ ಯಾರು ಅಧಿಕಾರ ಪತ್ರ ಹೊಂದಿಲ್ಲವೆಂದು ಮತ್ತು ಯಾರಿಗೂ ಯಾವುದೇ ರೀತಿಯ ಹಕ್ಕು, ಆಸಕ್ತಿ, ಸೌಮ್ಯ ಕ್ಲೈಮ್, ಆಧಾರ, ಸಾಲ ಬಾಕಿ, ಕರಾರು, ಅಧಿಕಾರ ಪತ್ರ, ಇತರೆ ತಂಟೆ ತಕರಾರು ಯಾವುದು ಇರುವುದಿಲ್ಲಾ ಎಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತಿನ ಸಂಬಂಧ ಕ್ರಯದ ಕ್ರಯ ಪತ್ರವನ್ನು ಬರೆಯಿಸಿ ನೋಂದಾಯಿಸಿಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯುವುದು. ಆನಂತರದಲ್ಲಿ ಉಂಟಾಗತಕ್ಕ ಯಾವುದೇ ತಂಟೆ ತಕರಾರುಗಳು ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ತಿಳಿಯತಕ್ಕದ್ದು.

ಅನುಸೂಚಿ

ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ವಿಜಯನಗರ 3ನೇ ಹಂತ, ಡಿ ಬ್ಲಾಕ್, ಬಡಾವಣೆಯಲ್ಲಿರುವ ನಿವೇಶನ ಸಂಖ್ಯೆ 278, ಇದರ ವಿಸ್ತೀರ್ಣ, ಪೂರ್ವ – ಪಶ್ಚಿಮ: 15.00 ಮೀಟರ್, ಉತ್ತರ – ದಕ್ಷಿಣ: 24.00 ಮೀಟರ್, ಒಟ್ಟು 360.00 ಚದರ ಮೀಟರಗಳುಳ್ಳ ಖಾಲಿ ನಿವೇಶನಕ್ಕೆ ಚಕ್ಕುಬಂದಿ:

ಪೂರ್ವಕ್ಕೆ: ನಿವೇಶನ ಸಂಖ್ಯೆ:279, **ಪಶ್ಚಿಮಕ್ಕೆ :** ನಿವೇಶನ ಸಂಖ್ಯೆ:277, **ಉತ್ತರಕ್ಕೆ :** ರಸ್ತೆ, **ದಕ್ಷಿಣಕ್ಕೆ :** ನಿವೇಶನ ಸಂಖ್ಯೆ:245 ಮತ್ತು 246

ಸ್ಥಳ: ಮೈಸೂರು
ದಿನಾಂಕ: 07/04/2023

ಮೋಹನ ಸಿ
ವಕೀಲರು
ನಂ.1164, 1ನೇ ಮಹಡಿ,
ನಂಜುಂಡೇಶ್ವರ ಕಾಂಪ್ಲೇಕ್ಸ್,
ನಾರಾಯಣ ಶಾಸ್ತ್ರಿ ರಸ್ತೆ, ದೇವರಾಜ ಮೊಹಲ್ಲಾ,
ಮೈಸೂರು–04, ಮೊ: 94484 48407.

PUBLIC NOTICE

Notice is hereby given that **SRI. SUNIL KUMAR. H.P.**, son of Sri.Puttaraju, has agreed to sell the under mentioned property to my client and any person or persons claiming any interest on the under mentioned property or any part thereof, is hereby required to communicate the same to me with documentary evidence at my office, situated at DOOR No.2765/1A D13/A1, "KEYANS", 5TH MAIN ROAD, V.V. PURAM (V.V. MOHALLA), MYSORE – 570 002, within 15 (Fifteen) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

Converted Lands for Industrial Purpose bearing following Survey Numbers, Extents and Boundaries, situated at Nagaraghatta (Be) Village, K.Shettihalli-2 Hobli, Srirangapatna Taluk, Mandya District.

Item No.	Sy. No.	Extent		Boundaries			
		A	G	East	West	North	South
1	58/6	1	1 ½	Sy. No.58/7	Sy. No.58/5	Road	Sy. No.67 & 68
2	58/7	1	½	Private Land Sy.No.60	Sy. No.58/6	Road	Private Land
Total		2	02				

Date: 07.03.2023
Place: Mysore

Dhirendra Kumar R. Mehta
Advocate
KEY-ANS LAW SOLUTIONS



ಕೀರ್ತನ ಟ್ರಸ್ಟ್ (ರಿ) ಮತ್ತು ಆರ್ ಕೆ. ಎಜುಕೇಷನಲ್ ಇನ್‌ಸ್ಟಿಟ್ಯೂಷನ್ (ರಿ),

ಕೆ. ಹೊನ್ನಲಗೆರೆ, ಮದ್ದೂರು ತಾ. ಮಂಡ್ಯ ಜಿಲ್ಲೆ–571433

ಆರ್ ಕೆ. ಸಮೂಹ ಶಿಕ್ಷಣ ಸಂಸ್ಥೆಗಳಲ್ಲಿ

ಇರುವ ಕೆಳಕಂಡ ಖಾಲಿ ಹುದ್ದೆಗಳನ್ನು ತುಂಬಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಂಸ್ಥೆಯ ಹೆಸರು	ಖಾಲಿ ಹುದ್ದೆಗಳು		ಸಂಖ್ಯೆ	ವಿದ್ಯಾರ್ಹತೆ
ಆರ್‌ಕೆ. ಪೂರ್ವ ಪ್ರಾಥಮಿಕ ಶಾಲೆ	ಶಿಕ್ಷಕಿ		01	ಯಾವುದೇ ಪದವಿ ಅಥವಾ ಎನ್‌ಟಿಟಿ ಅಥವಾ ಎನ್‌ಎಸ್‌ಟಿ ಮತ್ತು ಕರಕೌಶಲ ಅಥವಾ ಚಿತ್ರಕಲೆ ತರಬೇತಿ ಪ್ರಮಾಣ ಪತ್ರದ ಜೊತೆಗೆ ಸೇವಾ ಅನುಭವ ಇರುವವರಿಗೆ ಆದ್ಯತೆ.
	ಕಂಪ್ಯೂಟರ್ ಆಪರೇಟರ್		01	ಪಿಯುಸಿ ಜೊತೆಗೆ ಕಂಪ್ಯೂಟರ್ ಜ್ಞಾನ ಮತ್ತು ಕನ್ನಡ ಹಾಗೂ ಇಂಗ್ಲೀಷ್ ಭಾಷೆಯಲ್ಲಿ ಪರಿಣಿತಿ.
ಆರ್‌ಕೆ. ಹಿರಿಯ ಪ್ರಾಥಮಿಕ ಶಾಲೆ	ಗಣಿತ ಶಿಕ್ಷಕರು		02	ಎಂ.ಎಸ್ಸಿ., ಬಿ.ಇಡಿ. ಅಥವಾ ಬಿ.ಎಸ್ಸಿ., ಬಿ.ಇಡಿ. ಜೊತೆಗೆ ಸೇವಾ ಅನುಭವ
	ಸಮಾಜ ಶಿಕ್ಷಕರು		01	ಎಂ.ಎ., ಬಿ.ಇಡಿ. ಅಥವಾ ಬಿ.ಎ., ಬಿ.ಇಡಿ. ಜೊತೆಗೆ ಸೇವಾ ಅನುಭವ
	ಕನ್ನಡ ಶಿಕ್ಷಕರು		01	ಎಂ.ಎ., ಬಿ.ಇಡಿ., ಅಥವಾ ಬಿ.ಎ., ಬಿ.ಇಡಿ. ಜೊತೆಗೆ ಸೇವಾ ಅನುಭವ
	ಇಂಗ್ಲೀಷ್ ಶಿಕ್ಷಕರು		01	ಎಂ.ಎ., ಬಿ.ಇಡಿ., ಅಥವಾ ಬಿ.ಎ., ಬಿ.ಇಡಿ. ಜೊತೆಗೆ ಸೇವಾ ಅನುಭವ, ಇಂಗ್ಲೀಷ್ ಐಚ್ಛಿಕ ವಿಷಯವನ್ನು ಅಧ್ಯಯನ ಮಾಡಿರಬೇಕು.
	ಕ್ರಾಫ್ಟ್ ಶಿಕ್ಷಕರು		02	ತೋಟಗಾರಿಕೆ ಅಥವಾ ಕರಕೌಶಲ ಅಥವಾ ಚಿತ್ರಕಲೆ ತರಬೇತಿ ಪ್ರಮಾಣ ಪತ್ರದ ಜೊತೆಗೆ ಸೇವಾ ಅನುಭವ ಇರುವವರಿಗೆ ಆದ್ಯತೆ.
ಆರ್‌ಕೆ. ಪ್ರೌಢಶಾಲೆ	ಕನ್ನಡ ಶಿಕ್ಷಕರು		01	ಎಂ.ಎ., ಬಿ.ಇಡಿ. ಅಥವಾ ಬಿ.ಎ., ಬಿ.ಇಡಿ. ಜೊತೆಗೆ ಸೇವಾ ಅನುಭವ
	ವಿಜ್ಞಾನ ಶಿಕ್ಷಕರು(CBZ)		01	ಎಂ.ಎಸ್ಸಿ., ಬಿ.ಇಡಿ., ಅಥವಾ ಬಿ.ಎಸ್ಸಿ., ಬಿ.ಇಡಿ. ಜೊತೆಗೆ ಸೇವಾ ಅನುಭವ
	ಇಂಗ್ಲೀಷ್ ಶಿಕ್ಷಕರು		01	ಎಂ.ಎ., ಬಿ.ಇಡಿ. ಅಥವಾ ಬಿ.ಎ., ಬಿ.ಇಡಿ. ಜೊತೆಗೆ ಸೇವಾ ಅನುಭವ ಹಾಗೂ ಇಂಗ್ಲೀಷ್ ಐಚ್ಛಿಕ ವಿಷಯವನ್ನು ಅಧ್ಯಯನ ಮಾಡಿರಬೇಕು.
	ದೈಹಿಕ ಶಿಕ್ಷಣ ಶಿಕ್ಷಕರು		02	ಬಿ.ಪಿ.ಎಡ್. ಅಥವಾ ಎಂ.ಪಿ.ಎಡ್. ಜೊತೆಗೆ ಸೇವಾ ಅನುಭವ
ಆರ್‌ಕೆ. ಪದವಿ ಪೂರ್ವ ಕಾಲೇಜು	ಜೀವಶಾಸ್ತ್ರ ಉಪನ್ಯಾಸಕರು		01	ಎಂ.ಎಸ್ಸಿ., ಬಿ.ಇಡಿ. ಜೊತೆಗೆ ಸೇವಾ ಅನುಭವ
	ಇಂಗ್ಲೀಷ್ ಉಪನ್ಯಾಸಕರು		01	ಎಂ.ಎ., ಬಿ.ಇಡಿ. ಜೊತೆಗೆ ಸೇವಾ ಅನುಭವ
	ಕಂಪ್ಯೂಟರ್ ಲ್ಯಾಬ್ ಸಹಾಯಕರು		01	ಪಿಯುಸಿ ಜೊತೆಗೆ ಸೇವಾ ಅನುಭವ
ಆರ್‌ಕೆ. ಪ್ರಥಮ ದರ್ಜೆ ಕಾಲೇಜು	ಕನ್ನಡ ಉಪನ್ಯಾಸಕರು		01	ಎಂ.ಎ., ಮತ್ತು ಕೆಸೆಟ್ ಅಥವಾ ನೆಟ್ ಹಾಗೂ ಪಿ.ಹೆಚ್.ಡಿ. ಪದವಿ ಜೊತೆಗೆ ಸೇವಾ ಅನುಭವ ಇರುವವರಿಗೆ ಮೊದಲ ಆದ್ಯತೆ
	ಇಂಗ್ಲೀಷ್ ಉಪನ್ಯಾಸಕರು		01	ಎಂ.ಎ., ಮತ್ತು ಕೆಸೆಟ್ ಅಥವಾ ನೆಟ್ ಹಾಗೂ ಪಿ.ಹೆಚ್.ಡಿ. ಪದವಿ ಜೊತೆಗೆ ಸೇವಾ ಅನುಭವ ಇರುವವರಿಗೆ ಮೊದಲ ಆದ್ಯತೆ
ಆರ್‌ಕೆ. ವಿದ್ಯಾಸಂಸ್ಥೆ (ರಿ)	ಅಡ್ಮಿನ್		02	ಯಾವುದೇ ಪದವಿ ಜೊತೆಗೆ ಕಂಪ್ಯೂಟರ್ ಜ್ಞಾನ ಮತ್ತು ಕನ್ನಡ ಹಾಗೂ ಇಂಗ್ಲೀಷ್ ಭಾಷೆಯಲ್ಲಿ ಪರಿಣಿತಿ ಹೊಂದಿರಬೇಕು.
	ವಾಹನ ಚಾಲಕರು		13	ಚಾಲನಾ ಪರವಾನಗಿ ಜೊತೆಗೆ ಕನಿಷ್ಠ 03 ವರ್ಷಗಳ ಸೇವಾ ಅನುಭವವಿರಬೇಕು.
	ಸಹಾಯಕಿಯರು		04	ಎಸ್.ಎಸ್.ಎಲ್.ಸಿ. ಜೊತೆಗೆ ಸೇವಾ ಅನುಭವವಿರುವ ಸ್ಥಳೀಯರಿಗೆ ಹೆಚ್ಚಿನ ಆದ್ಯತೆ.
	ವಾಹನ ಮೇಲ್ವಿಚಾರಕರು		01	ಯಾವುದೇ ಪದವಿ ಜೊತೆಗೆ ವಾಹನಗಳ ಬಗ್ಗೆ ತಾಂತ್ರಿಕ ಜ್ಞಾನ ಇರಬೇಕು.
ಆರ್‌ಕೆ. ವಸತಿ ನಿಲಯ	ವಾರ್ಡನ್	ಪುರುಷ	01	ಬಿ.ಇಡಿ. ಪದವಿ ಜೊತೆಗೆ ಸೇವಾ ಅನುಭವ
		ಮಹಿಳೆ	01	
	ಅಡುಗೆ ಭಟ್ಟರು		01	ಕನಿಷ್ಠ 03 ವರ್ಷಗಳ ಸೇವಾ ಅನುಭವವಿರಬೇಕು

ಸೇವೆ ಸಲ್ಲಿಸಲು ಆಸಕ್ತಿಯಿರುವ ಅಭ್ಯರ್ಥಿಗಳು ಪ್ರಕಟವಾದ ದಿನದಿಂದ 15 ದಿನಗಳೊಳಗೆ ಸ್ವವಿವರಗಳು ಮತ್ತು ದೃಢೀಕರಿಸಿದ ದಾಖಲಾತಿಗಳೊಂದಿಗೆ ಅರ್ಜಿಯನ್ನು ಕಾರ್ಯದರ್ಶಿಗಳು, ಆರ್‌ಕೆ. ಎಜುಕೇಷನಲ್ ಇನ್‌ಸ್ಟಿಟ್ಯೂಷನ್ (ರಿ), ಆರ್‌ಕೆ. ಪದವಿ ಪೂರ್ವ ಕಾಲೇಜು ಕಟ್ಟಡ, ಕೆ. ಹೊನ್ನಲಗೆರೆ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ–571433. ಈ ವಿಳಾಸಕ್ಕೆ ಕಳುಹಿಸಿಕೊಡುವುದು ಹಾಗೂ ದಿನಾಂಕ 02–05–2023 ರ ಮಂಗಳವಾರದಂದು ಬೆಳಿಗ್ಗೆ 10.30 ಗಂಟೆಗೆ ಸಂದರ್ಶನಕ್ಕೆ ಹಾಜರಾಗುವುದು.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:- 9900719366, 9538751832, Email: rkeinstitution@gmail.com

ಸಹಿ/- ವ್ಯವಸ್ಥಾಪಕ ನಿರ್ದೇಶಕರು

ನಕ್ಕರೆ ಅದೇ ಸ್ವರ್ಗ

(ನಿಂಗ ಮೊದಲ ಬಾರಿಗೆ ತನ್ನ ಅತ್ತೆಯ ಮನೆಗೆ ಹೋದ. ಅವನ ಅತ್ತೆ ಇಡೀ ವಾರ ಬರೀ ಸೌತೆಕಾಯಿ ಹಾಕಿದ ಅಡುಗೆಯನ್ನೇ ಮಾಡಿದಳು. ಎಂಟನೆಯ ದಿನ ಅತ್ತೆ ಅಳಿಯನನ್ನು ಕೇಳಿದಳು)

ಅತ್ತೆ : ಅಳಿಯಂದ್ರೆ, ಇವತ್ತು ಏನು ಅಡುಗೆ ಮಾಡ್ಲಿ?

ನಿಂಗ : ಅತ್ತೆ, ಸುಮ್ನೆ ಯಾಕೆ ಅಡುಗೆ ಮಾಡ್ತೀರಾ? ಸೌತೆಕಾಯಿ ತೋಟ ಎಲ್ಲಿದೆ ಎಂದು ತೋರಿಸಿ. ಅಲ್ಲೇ ಹೋಗಿ ಮೇಯ್ದು ಬರ್ತೀನಿ!

ಮೈಸೂರು ಮಿತ್ರ

ಶನಿವಾರ, 8 ಏಪ್ರಿಲ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನಾವು ನಮ್ಮ ಸಾಮರ್ಥ್ಯವನ್ನು ಮೀರಿ ಸಾಧನೆ ಮಾಡಬೇಕೆಂದರೆ, ಮೊದಲು ನಮ್ಮ ಮಿತಿಗಳನ್ನು ಅರಿತುಕೊಳ್ಳಬೇಕು. –ಅಲ್ಬರ್ಟ್ ಐನ್‌ಸ್ಟೀನ್

ವೇದ ಸುಳ್ಳಾದರೂ { ಕೈಲಾಗದವನು
ಗಾದೆ ಸುಳ್ಳಾಗದು { ಮೈ ಪರಚಿಕೊಂಡನಂತೆ

ನಿಮ್ಮ ಪತ್ರಗಳು

ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಸ್ಪರ್ಧಿಸುವುದನ್ನು ನಿಷೇದಿಸಬೇಕಿದೆ!

ಮಾನ್ಯರೆ,

ರಾಜಕಾರಣಿಗಳು ಚುನಾವಣೆಯ ಸಂದರ್ಭದಲ್ಲಿ ಒಂದಕ್ಕಿಂತ ಹೆಚ್ಚು ಸ್ಥಾನಗಳಲ್ಲಿ ಸ್ಪರ್ಧಿಸುವುದನ್ನು ತಡೆಯಲು ಕಾನೂನಿಗೆ ತಿದ್ದುಪಡಿ ತರುವುದು ಅವಶ್ಯಕ. ಪ್ರಸ್ತುತ ಅಸ್ತಿತ್ವದಲ್ಲಿರುವ ಚುನಾವಣಾ ಕಾನೂನಿನ ಪ್ರಕಾರ ಯಾವುದೇ ಅಭ್ಯರ್ಥಿಯು ಸಾರ್ವತ್ರಿಕ ಚುನಾವಣೆ ಅಥವಾ ಉಪ ಚುನಾವಣೆಗಳಲ್ಲಿ ಎರಡು ವಿಭಿನ್ನ ಕ್ಷೇತ್ರಗಳಿಂದ ಸ್ಪರ್ಧಿಸಲು ಅನುಮತಿಸಲಾಗಿದೆ. ಒಬ್ಬ ವ್ಯಕ್ತಿಯು ಒಂದಕ್ಕಿಂತ ಹೆಚ್ಚು ಸ್ಥಾನಗಳಿಂದ ಚುನಾಯಿತರಾದರೆ, ಆ ವ್ಯಕ್ತಿಯು ತಾನು ಗೆದ್ದ ಸ್ಥಾನಗಳಲ್ಲಿ ಒಂದನ್ನು ಮಾತ್ರ ಉಳಿಸಿಕೊಳ್ಳಬಹುದಾಗಿದೆ.

ಅಭ್ಯರ್ಥಿಯು ಎರಡು ಸ್ಥಾನಗಳಿಂದ ಸ್ಪರ್ಧಿಸಿ, ಎರಡನ್ನೂ ಗೆದ್ದರೆ ಒಂದನ್ನು ತೆರವು ಮಾಡಬೇಕಾಗುತ್ತದೆ. ಇದರಿಂದಾಗಿ ಸಾರ್ವಜನಿಕ ಬೊಕ್ಕಸಕ್ಕೆ ಆರ್ಥಿಕ ಹೊರೆ ಉಂಟಾಗುತ್ತದೆ. ಜೊತೆಗೆ ಮಾನವ ಸಂಪನ್ಮೂಲ, ಇತರ ಸಂಪನ್ಮೂಲಗಳೂ ವ್ಯಯವಾಗುತ್ತವೆ. ಕ್ಷೇತ್ರ ತೊರೆದು ಉಪ ಚುನಾವಣೆಗೆ ಕಾರಣವಾಗುವುದು ಕ್ಷೇತ್ರದ ಮತದಾರರಿಗೆ ಮಾಡಿದ ಅನ್ಯಾಯವೂ ಹೌದು. ಒಂದು ವೇಳೆ ಅಸ್ತಿತ್ವದಲ್ಲಿರುವ ನಿಬಂಧನೆಗಳನ್ನೇ ಉಳಿಸಿಕೊಳ್ಳುವುದಾದರೆ, ಎರಡು ಸ್ಥಾನಗಳಿಂದ ಸ್ಪರ್ಧಿಸಿ, ಎರಡರಲ್ಲೂ ಗೆಲ್ಲುವ ಅಭ್ಯರ್ಥಿ, ತಾನು ತೆರವು ಮಾಡುವ ಸ್ಥಾನದ ಉಪ ಚುನಾವಣೆಯ ವೆಚ್ಚವನ್ನು ಭರಿಸಬೇಕು ಎಂಬ ಕಠಿಣ ನಿರ್ಧಾರವನ್ನು ಮಾಡಬೇಕಿದೆ.

ಈಗಿರುವ ಜನಪ್ರತಿನಿಧಿ ಕಾಯಿದೆಗೆ ಸೂಕ್ತ ತಿದ್ದುಪಡಿ ಹಾಗೂ ಮಾರ್ಪಾಡುಗಳನ್ನು ತರುವುದು ಅವಶ್ಯಕವಾಗಿದೆ. ಸಾರ್ವಜನಿಕ ವಲಯದಲ್ಲಿ ಇದು ಹೆಚ್ಚು ಹೆಚ್ಚು ಚರ್ಚಿತವಾದಲ್ಲಿ ಶಾಸಕಾಂಗವೂ ಇದಕ್ಕೆ ಸಮ್ಮತಿಸಬಹುದು. ಸಾರ್ವಜನಿಕರು ಎಲ್ಲವನ್ನೂ ಮೌನವಾಗಿ ಸಹಿಸುತ್ತಾರೆ ಎಂಬ ಭಾವ, ಆಳುವ ಮಂದಿಗೆ ಬಾರದಿರಲು ಇಂತಹ ಚರ್ಚೆ, ಒತ್ತಾಸೆಗಳು ಅನಿವಾರ್ಯ. ಸುಶಿಕ್ಷಿತ ವರ್ಗ ಇಂತಹ ವಿಷಯಗಳಲ್ಲಿ ಸಕ್ರಿಯವಾಗಿ ಧ್ವನಿ ಎತ್ತಿದರೆ ಅಪೇಕ್ಷಿತ ಬದಲಾವಣೆಗಳು ಕಂಡು ಬಂದೀತು. ಹಾಗೆಯೇ ಈ ಬಗ್ಗೆ ಪ್ರಜ್ಞಾವಂತ ನಾಗರಿಕರೆಲ್ಲರೂ ದನಿ ಎತ್ತಬೇಕಾಗಿದೆ. ಈ ಎಲ್ಲಾ ವಿಚಾರಗಳ ಬಗ್ಗೆ ಚರ್ಚೆಯಾಗಬೇಕಿದೆ. ಈಗಿನ ಚುನಾವಣೆಯ ಸುಸಂದರ್ಭದಲ್ಲಿ ಒಬ್ಬ ವ್ಯಕ್ತಿ ಒಂದು ಬಾರಿಗೆ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಿಂದ ಸ್ಪರ್ಧಿಸುವುದನ್ನು ತಡೆಯಲು ಸರ್ಕಾರ ಹಾಗೂ ಚುನಾವಣಾ ಆಯೋಗ ಮುಂದಾಗಬೇಕಿರುವುದು ಅವಶ್ಯಕ ಹಾಗೂ ಅನಿವಾರ್ಯವಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಅಲ್ಪ ಸಂಖ್ಯಾತರನ್ನು ಪ್ರೋತ್ಸಾಹಿಸಿ

ಮಾನ್ಯರೆ,

ದುರದೃಷ್ಟವಷಾತ್ ನಮ್ಮ ದೇಶದಲ್ಲಿ ಜಾತೀಯತೆ ಬೇರೂರಿದೆ. ಒಬ್ಬ ನೌಕರ ವರ್ಗಾವಣೆಯಾಗಿ ಬಂದರೆ, ಮೊದಲೇ ಅಲ್ಲಿ ಇರುವವರು ಅವನು ಯಾವ ಜಾತಿ ಎಂದು ವಿಚಾರಿಸಿರುತ್ತಾರೆ. ಒಬ್ಬ ಶಾಸಕ, ಮಂತ್ರಿ ತನ್ನ ಆಪ್ತ ಸಹಾಯಕನನ್ನಾಗಿ ತನ್ನ ಜಾತಿಯವನನ್ನೇ ನೇಮಿಸಿಕೊಳ್ಳುತ್ತಾರೆ. ಈ ಜಾತೀಯತೆಯಲ್ಲಿ ಬೆಂದು ಹೋಗಿರುವವರು ನತದೃಷ್ಟ ಬ್ರಾಹ್ಮಣ ಸಮಾಜದವರು. ಅವರು ಅಲ್ಪ ಸಂಖ್ಯಾತರು ಆಗಿದ್ದಾರೆ. ಹುಟ್ಟಿದ ಮೇಲೆ ಬದುಕಲು ನಾನಾ ರೀತಿಯಲ್ಲಿ ಬವಣೆ ಪಡುತ್ತಿದ್ದಾರೆ. ಒಳ್ಳೆಯ ವಿದ್ಯಾಭ್ಯಾಸ, ನೌಕರಿ ಅವರಿಗೆ ಮರೀಚಿಕೆಯಾಗಿದೆ. ಅವರು ನೊಂದಿರುವುದನ್ನು ಗಮನಿಸಿ ಎಲ್ಲಾ ರಾಜಕೀಯ ಪಕ್ಷಗಳು ಅವರನ್ನು ಪ್ರೋತ್ಸಾಹಿಸಿ ಅವರನ್ನು ಹುರಿಯಾಳುಗಳನ್ನಾಗಿ ನಿಲ್ಲಿಸಲು ಟಿಕೆಟ್ ನೀಡಬೇಕಾಗಿ ವಿನಂತಿ

–ಅಕ್ಕಿಹೆಬ್ಬಾಳು ವೆಂಕಟೇಶ್, ಮೈಸೂರು

ಸಾರ್ವಜನಿಕರ ತೆರಿಗೆ ಹಣ ಪೋಲು!



ಮಾನ್ಯರೆ,

ಇದು ಮೈಸೂರಿನ ಅಶೋಕ ವೃತ್ತದ (ಬಲ್ಲಾಳ್ ಸರ್ಕಲ್) ಬಳಿ ಕಟ್ಟುತ್ತಿರುವ ನೂತನ ಬಸ್ ಪ್ರಯಾಣಿಕರ ತಂಗುದಾಣ. ಇದೇ ಸ್ಥಳದಲ್ಲಿ ಕಳೆದ ನಲವತ್ತು ವರ್ಷಗಳಲ್ಲಿ ನಾನು ಕಂಡ ಮೂರನೆಯ ತಂಗುದಾಣ. ಹಿಂದೆ ಕಟ್ಟುವಾಗಲೇ ಈ ಸ್ಥಳ ಸೂಕ್ತವಲ್ಲವೆಂದು ಮಾಧ್ಯಮಗಳಲ್ಲಿ ನಾನು ಬರೆದ ಪತ್ರ ಚಿತ್ರ ಸಮೇತ ಪ್ರಕಟವಾಗಿತ್ತು. ಅದಾದ ಸುಮಾರು ಹದಿನೈದು ವರ್ಷಗಳ ನಂತರ ನಿರ್ಮಾಣವಾಗಿದ್ದ ತಂಗುದಾಣವನ್ನು ನೆಲಸಮ ಮಾಡಲಾಯಿತು. ಸಾರ್ವಜನಿಕರ ತೆರಿಗೆ ಹಣದ ದುರುಪಯೋಗ ಮಾಡುತ್ತಿರುವ ಪಾಲಿಕೆಗೆ ಬುದ್ಧಿಯಿಲ್ಲವೇ? ಒಬ್ಬರಿಗಂತೂ ಈ ನಿರ್ಮಾಣದಿಂದ ಅನುಕೂಲವಾಗಿದೆ. ಅದು ಕಟ್ಟಡ ನಿರ್ಮಾಣದ ಗುತ್ತಿಗೆ ಪಡೆದವರಿಗೆ!

–ಕೊ.ಸು.ನರಸಿಂಹ ಮೂರ್ತಿ, ಚಾಮರಾಜಪುರಂ, ಮೈಸೂರು.

ಅಳಿಯ ಅಲ್ಲ...

ಮಾನ್ಯರೆ,



ಕನ್ನಡ ಚಿತ್ರರಂಗದ ಖ್ಯಾತ ನಾಯಕ ನಟ ಕಿಚ್ಚ ಸುದೀಪ್ ಅವರು ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಅವರು ಹೇಳುವ ಅಭ್ಯರ್ಥಿಗಳ ಪರ ಚುನಾವಣಾ ಪ್ರಚಾರ ಮಾಡುವುದಾಗಿಯೂ ಆದರೆ ತಾವು ಬಿಜೆಪಿ ಅಥವಾ ಇನ್ನಿತರ ಯಾವುದೇ ರಾಜಕೀಯ ಪಕ್ಷ ಸೇರುವುದಿಲ್ಲವೆಂದು ಘೋಷಿಸಿದ್ದಾರೆ. ಸುದೀಪ್ ಅವರು ಕನ್ನಡ ಮಾತ್ರವಲ್ಲದೆ ಇತರ ಭಾಷೆಗಳ ಚಿತ್ರಗಳಲ್ಲಿಯೂ ನಟಿಸಿ ಅಸಂಖ್ಯಾತ ಅಭಿಮಾನಿ ವರ್ಗವನ್ನು ಹೊಂದಿದ್ದಾರೆ. ಕಿರು ತೆರೆಯಲ್ಲಿ ಮೂಡಿ ಬರುತ್ತಿರುವ "ಬಿಗ್ ಬಾಸ್" ಕಾರ್ಯಕ್ರಮದ ರೂವಾರಿ ಯಾಗಿಯೂ ಅವರು ಸಾಕಷ್ಟು ಯಶಸ್ಸು ಗಳಿಸಿದ್ದಾರೆ. ಇಂತಹ ಸುದೀಪ್ ಈಗ ಮುಖ್ಯಮಂತ್ರಿಯವರ ಪರ ಪ್ರಚಾರ ನಡೆಸುವ ತೀರ್ಮಾನ ಕೈಗೊಂಡು ಅಚ್ಚರಿ ಮೂಡಿಸಿದ್ದಾರೆ. ಆದರೆ ಅವರ ದ್ವಂದ್ವ ನೀತಿ ಮಾತ್ರ ಸರಿಯಲ್ಲ. ಮುಖ್ಯಮಂತ್ರಿ ಪರವಾಗಿ ಪ್ರಚಾರ ಮಾಡುವುದೂ ಒಂದೇ, ಬಿಜೆಪಿ ಪರವಾಗಿ ಪ್ರಚಾರ ಮಾಡು ವುದೂ ಒಂದೇ. ಇದೊಂದು ರೀತಿಯಲ್ಲಿ "ಅಳಿಯ ಅಲ್ಲ ಮಗಳ ಗಂಡ" ಅನ್ನೋ ತರ. ಈ ಸತ್ಯವನ್ನು ಸುದೀಪ್ ಸಾಹೇಬರು ಮನಗಾಣರೇ?

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ಬಹುಮುಖಿ

ಕನ್ನಡ ಸಾಹಿತ್ಯದ 'ಚಿರಮಲ್ಲಿಗೆ' ಶಾಂತರಸ


"ಎಂದೋ ಶ್ರೀ ಕುವೆಂಪು ನುಡಿದರು
'ಕನ್ನಡ ಮಂತ್ರಕಣಾ ಶಕ್ತಿಕಣಾ'
ಅದು ಅವರಿಗೆ ಮಾತ್ರ ನಮಗಲ್ಲ
ಎಂದಿತು ವಿಧಾನಸೌಧವು ಅಂದೇ"

ಇದು ಕನ್ನಡದ ಪ್ರಥಮ ಗಜಲ್ ಕವಿ ಎಂದೇ ಹೆಸರಾಗಿದ್ದ ಡಾ. ಶಾಂತರಸರು ತಮ್ಮ ದ್ವಿಪದಿಯೊಂದರ ಮೂಲಕ ಅಕ್ಷರಗಳನ್ನೇ ಗುಂಡುಗಳನ್ನಾಗಿಸಿ ತಮ್ಮ ಪೆನ್ನಿನ ಗನ್ನಿನಿಂದ ಕನ್ನಡದ ಬಗ್ಗೆ ನಿರ್ಲಕ್ಷ್ಯದಿಂದಿರುವ ಅಧಿಕಾರಸ್ಥ ರಾಜಕಾರಣಿಗಳ ಎದೆಗೆ ಹೊಡೆದಿರುವ ರೀತಿ. ಇಲ್ಲಿ ತುಂಬಿ ತುಳುಕುತ್ತಿದ್ದುದು ಅವರಿಗಿದ್ದ ಕನ್ನಡಾಭಿಮಾನದ ಅದಮ್ಯ ಪ್ರೀತಿ. ಕನ್ನಡವೆಂದರೆ ಇಳಿ ವಯಸ್ಸಿನಲ್ಲೂ ಎಳೆಗರುವಿನಂತೆ ಉಲ್ಲಾಸಗೊಳ್ಳುತ್ತಿದ್ದ ಶಾಂತರಸರ ಒಡಲು ಒಂದು ರೀತಿಯಲ್ಲಿ ಕನ್ನಡದ ಕಡಲಾಗಿತ್ತು. ಇಲ್ಲಿ ಸದಾ ಕನ್ನಡ ಕಟ್ಟುವ ತುಡಿತವೇ, ಸತ್ತಂತಿಹ ಕನ್ನಡಿಗರನ್ನು ಬಡಿದೆಚ್ಚರಿಸುವ ಭೋರ್ಗರೆತವೇ ತುಂಬಿತ್ತು.

"ಜಗವ ಬೆಳಗುವ ಶಕ್ತಿ ಅಡಗಿಹುದು ನಿನ್ನಲ್ಲಿ ಕನ್ನಡಿಗ ಬಳಸು ಇಂದದನು ಇಲ್ಲದಿರೆ ನೀನೇ ಕನ್ನಡಕೆ ಮೃತ್ಯು" ಎಂದು ಶಾಂತರಸರು ತಮ್ಮ ಮತ್ತೊಂದು ದ್ವಿಪದಿಯಲ್ಲಿ ಕಾವ್ಯವನ್ನೇ ಖಡ್ಗ ಮಾಡಿಕೊಂಡು ಝಳಪಿಸುತ್ತಾ ಕನ್ನಡಿಗರನ್ನು ಜಾಗೃತಿಗೊಳಿಸಿರುವ ಪರಿಯಂತೂ ಪ್ರತಿಯೊಬ್ಬ ಕನ್ನಡಿಗರ ನರ–ನಾಡಿಗಳಲ್ಲೂ ನವಚೈತನ್ಯ ತುಂಬುವಂತದ್ದು. ಹಾಗೆಯೇ ಇವರು ಬರೀ ಬರಹಗಾರರಾಗಿರಲಿಲ್ಲ, ಬರೆದಂತೆ ಬದುಕಿದವರು. ಬರೀ ಮಾತನಾಡಿದವರಲ್ಲ, ಆಡಿದಂತೆಯೇ ನಡೆದವರು. ನೇರ ನಡೆ–ನೇರ ನುಡಿಯೇ ಇವರ ಬದುಕಿನ ಧ್ಯೇಯ ವಾಕ್ಯ ಆಗಿತ್ತು. ಇವರ ಬದುಕೊಂದು ತೆರೆದ ಪುಸ್ತಕವೇ ಸರಿ. 1992 ರಲ್ಲಿ 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ'ಗೆ ಸರ್ಕಾರ ಇವರನ್ನು ಆಯ್ಕೆ ಮಾಡಿದ್ದಾಗ ಕರ್ನಾಟಕದಲ್ಲಿ ಕನ್ನಡ ಭಾಷೆಗೆ ಸಾರ್ವಭೌಮತ್ವ ದೊರಕಿಸಿ ಕೊಡುವಲ್ಲಿ ವಿಫಲವಾಗಿರುವ ಸರ್ಕಾರದಿಂದ ತಾವು ಪ್ರಶಸ್ತಿಯನ್ನು ಸ್ವೀಕರಿಸುವುದಿಲ್ಲವೆಂದು ಅದನ್ನು ತಿರಸ್ಕರಿಸುವ ಧೈರ್ಯ ತೋರಿದ್ದವರಲ್ಲಿ ಬಹುಶಃ ಶಾಂತರಸರೇ ಮೊದಲಿಗರು.

ಪ್ರಶಸ್ತಿಗಾಗಿ ಶಾಸಕರು, ಮಂತ್ರಿ ಮಹೋದಯರ ಮುಂದೆ ಹಲ್ಲುಗಿಂಜುತ್ತಾ ಅರ್ಜಿ ಹಿಡಿದು ಲಾಬಿ ಮಾಡುವ ಸಾಹಿತಿಗಳನೇಕರಿರುವಾಗ ಮನೆ ಬಾಗಿಲಿಗೆ ಬಂದ ಪ್ರಶಸ್ತಿಯನ್ನು ತಿರಸ್ಕರಿಸಿ ಪ್ರಶಸ್ತಿಗಿಂತ ತಮ್ಮ ತತ್ವ ಸಿದ್ಧಾಂತಗಳೇ ದೊಡ್ಡದೆಂದು ಅದಕ್ಕೆ ಬದ್ಧರಾಗಿ ಬದುಕಿದ್ದ ಇವರು ಹೆಸರಿನಲ್ಲಿ 'ಶಾಂತರಸ' ರಾದರೂ ಮೈ–ಮನಗಳಲ್ಲಿ ತುಂಬಿಕೊಂಡಿದ್ದು ಬಂಡಾಯರಸ. ಇಲ್ಲಿ ಸಾತ್ವಿಕ ಚಿಂತನೆಯ, ಕನ್ನಡ ಪರ ಪ್ರತಿಪಾದನೆಯ ಜನಪರ ಹೋರಾಟದ ಅಲೆಗಳು ನಿರಂತರವಾಗಿ ಅವರೊಡನಿದ್ದವು.

ದೇಶಕ್ಕೆ ಸ್ವಾತಂತ್ರ್ಯ ಬರುವ ಮುನ್ನ ಹೈದರಾಬಾದ್ ಕರ್ನಾಟಕದಲ್ಲಿ ಬಹುಮನಿ ಸುಲ್ತಾನರಿಂದ ಹಿಡಿದು ನಿಜಾಮರ ಆಳ್ವಿಕೆ ತನಕವೂ ಇಲ್ಲಿ ಕನ್ನಡ ಅವಜ್ಞೆಗೆ ಒಳಗಾಗಿತ್ತು. ಬಹುಮನಿ ಸುಲ್ತಾನರ ಕಾಲದಲ್ಲಿ ರಾಜ್ಯ ಭಾಷೆ ಪಾರ್ಸಿಯಾಗಿದ್ದರೆ ನಿಜಾಮರ ಕಾಲದಲ್ಲಿ ರಾಜ್ಯ ಭಾಷೆ ಉರ್ದು ಆಗಿತ್ತು. ಕನ್ನಡ ಕಲಿಸುವ ಶಾಲೆಗಳೇ ಇರದಿದ್ದ ಕಾಲವದು. ಕನ್ನಡ ಕಲಿಯುವುದೇ ಅಪರಾಧವೆನ್ನುವಂತಹ ಪರಿಸ್ಥಿತಿ. ಇಂತಹ ಸಂಕಷ್ಟ ಕಾಲದಲ್ಲಿ ಪ್ರಾಥಮಿಕ ಶಾಲೆಯಿಂದ ಪದವಿ ತನಕ ಉರ್ದು ಮಾಧ್ಯಮದಲ್ಲೇ ಓದಿ ಮನೆಯಲ್ಲೇ ಕನ್ನಡ ಕಲಿತು, ಕನ್ನಡ ಸಾಹಿತ್ಯ ಅಭ್ಯಾಸಿಸಿ ಕನ್ನಡ ಉಳಿಸುವ ಹೋರಾಟದ ಕೈಂಕರ್ಯಕ್ಕಿಳಿದು ಬಹುದೊಡ್ಡ ಸಾಹಿತಿಯಾಗಿ ಬೆಳೆದ ಶಾಂತರಸರ ಬದುಕೇ ಒಂದು ಮಹಾಕಾವ್ಯವಾಗಬಲ್ಲದು. ಅಂತಹ ಕನ್ನಡ ಚೇತನ ಅವರು ಕನ್ನಡ ಕೇತನವೂ ಹೌದು.



> ಆಶ್ಚರ್ಯವೆಂದರೆ ಶಾಂತರಸ ಅವರು ಕನ್ನಡ ಕಲಿತದ್ದು ಮತ್ತು ಕನ್ನಡ ಸಾಹಿತ್ಯದ ಓಂಕಾರ ತಿಳಿದದ್ದು ನಬಿಸಾಬ ಎಂಬ ಮುಸ್ಲಿಂ ಧರ್ಮೀಯ ಶಿಕ್ಷಕನಿಂದ. ಹಾಗೆಯೇ ಇವರ ಶೈಕ್ಷಣಿಕ ಪ್ರಗತಿಗೆ ಮತ್ತು ಸಾಹಿತ್ಯದ ಬೆಳವಣಿಗೆಗೆ ಪ್ರೇರಕ ಶಕ್ತಿಗಳಾ ಗಿದ್ದವರು ಇವರ ತಂದೆ ಚೆನ್ನಬಸವಯ್ಯ ಹಿರೇಮಠ, ಸೋದರ ಸಂಬಂಧಿ ಶಿಕ್ಷಕ ಸಿದ್ಧವೀರಯ್ಯ ಮತ್ತು ಮಾಸ್ತರುಗಳಾದ ಬಾಲಚಂದ್ರನಾಯಕ, ಸೊಗವೀರ ಶರ್ಮ ಹಾಗೂ ಮಾನವಿ ನರಸಿಂಗರಾಯರು. ಯಾವಾಗಲೂ ಶಾಂತರಸರು ಇವರುಗಳನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತಿದ್ದರು.

ಆಶ್ಚರ್ಯವೆಂದರೆ ಶಾಂತರಸ ಅವರು ಕನ್ನಡ ಕಲಿತದ್ದು ಮತ್ತು ಕನ್ನಡ ಸಾಹಿತ್ಯದ ಓಂಕಾರ ತಿಳಿದದ್ದು ನಬಿಸಾಬ ಎಂಬ ಮುಸ್ಲಿಂ ಧರ್ಮೀಯ ಶಿಕ್ಷಕನಿಂದ. ಹಾಗೆಯೇ ಇವರ ಶೈಕ್ಷಣಿಕ ಪ್ರಗತಿಗೆ ಮತ್ತು ಸಾಹಿತ್ಯದ ಬೆಳವಣಿಗೆಗೆ ಪ್ರೇರಕ ಶಕ್ತಿಗಳಾಗಿದ್ದವರು ಇವರ ತಂದೆ ಚೆನ್ನಬಸವಯ್ಯ ಹಿರೇಮಠ, ಸೋದರ ಸಂಬಂಧಿ ಶಿಕ್ಷಕ ಸಿದ್ದವೀರಯ್ಯ ಮತ್ತು ಮಾಸ್ತರುಗಳಾದ ಬಾಲಚಂದ್ರನಾಯಕ, ಸೊಗವೀರ ಶರ್ಮ ಹಾಗೂ ಮಾನವಿ ನರಸಿಂಗರಾಯರು. ಯಾವಾಗಲೂ ಶಾಂತರಸರು ಇವರುಗಳನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತಿದ್ದರು.

ಹಾಗೆಯೇ ಹೈದರಾಬಾದ್ ನಿಜಾಮರ ದಬ್ಬಾಳಿಕೆ ನಡುವೆಯೂ ಉರ್ದು ಪ್ರಭಾವ ತೊಡೆದು ಕನ್ನಡ ಉಳಿಸಲು ಆ ಕಾಲದಲ್ಲೇ ಹೋರಾಟ ನಡೆಸುತ್ತಿದ್ದ ಬಾಲ್ಕಿಯ ಹಿರೇಮಠ ಸಂಸ್ಥಾನದ ಗುರುಗಳಾದ ಶ್ರೀ ಚೆನ್ನಬಸವ ಪಟ್ಟದ ದೇವರು ಅವರನ್ನು ಇವರು ತಮ್ಮ ಆತ್ಮಗುರುವಾಗಿ ಸ್ವೀಕರಿಸಿದ್ದರು. ಅವರಿಗೆ ಗುರು ಕಾಣಿಕೆ ಎಂಬಂತೆ ಅವರನ್ನು ಕುರಿತು ಇವರು ತಂದಿರುವ 'ಕಾಯಕ ಪರಿಣಾಮಿ' ಅಭಿನಂದನಾ ಗ್ರಂಥ ಇಂದಿಗೂ ಕೂಡ ಮೌಲ್ಯಯುತ ಮಾದರಿ ಕೃತಿಯಾಗಿದೆ.

ಇಂಥ ಕನ್ನಡ ಸಾಹಿತ್ಯ ಪ್ರತಿಭೆ, ರಾಯಚೂರು ಜಿಲ್ಲೆಯ ಹೆಂಬೇರಾಳು ಎಂಬ ಪುಟ್ಟ ಗ್ರಾಮದಲ್ಲಿ 1924ರ ಏಪ್ರಿಲ್ 7ರಂದು. ತಂದೆ ಚೆನ್ನಬಸವಯ್ಯ ಹಿರೇಮಠ, ತಾಯಿ ಸಿದ್ದಲಿಂಗಮ್ಮ. ಜನ್ಮಕೊಟ್ಟವರು ಇವರಿಗಿಟ್ಟ ಹೆಸರು ಶಾಂತಯ್ಯ ಎಂದಾದರೂ ಕರ್ನಾಟಕದ ಉದ್ದಗಲಕ್ಕೂ ಹೆಸರಾದದ್ದು ಶಾಂತರಸ ಎಂಬ ಕಾವ್ಯ ನಾಮವೇ! ಅನುಭಾವಿ ತಂದೆ ಕನ್ನಡ ಮತ್ತು ಸಂಸ್ಕೃತ ಪಂಡಿತರು. ತತ್ವಪದ ಸಂಪನ್ನರು ಹಾಗೂ ವೇದಾಂತಿಗಳು. ಅವರು ತಮ್ಮ ಮನೆಯಲ್ಲಿ ಮತ್ತು ಗ್ರಾಮದ ಹನುಮಂತ ದೇವರ ಗುಡಿಯಲ್ಲಿ ಅನುಭಾವ ಗೋಷ್ಠಿ, ವೇದಾಂತ, ತತ್ವಪದಗಳನ್ನು ಗ್ರಾಮದ ಮಕ್ಕಳಿಗೆ ಹೇಳಿಕೊಡುತ್ತಿದ್ದರು.

ಶಾಂತರಸರು ಮಹಾರಾಷ್ಟ್ರದಲ್ಲಿರುವ ಲಾತೂರ್‌ನ ರಾಜಾಸ್ಥಾನ್ ಸ್ಕೂಲ್‌ನಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿ ಪ್ರೌಢ ಶಿಕ್ಷಣಕ್ಕೆ ಕಾಲಿರಿಸಿದ್ದ ಅವರು 1944ರಲ್ಲಿ ಮೆಟ್ರಿಕ್ ಪಾಸು ಮಾಡಿದ್ದರು. ನಂತರ ಜೀವನಕ್ಕಾಗಿ 1945ರಲ್ಲಿ ರಾಯಚೂರಿನ ತಾರಾನಾಥ ಶಿಕ್ಷಣ ಸಂಸ್ಥೆಯ ಹಮ್‌ದರ್ದ್ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕ ವೃತ್ತಿಗೆ ಸೇರಿದ್ದರು. ಆಶ್ಚರ್ಯಕರ ರೀತಿಯಲ್ಲಿ ಅಲ್ಲಿ ಶಿಕ್ಷಕರಾಗಿದ್ದು ಕೊಂಡೇ ಹೈದರಾಬಾದ್‌ನ ಉಸ್ಮಾನಿಯಾ ವಿಶ್ವವಿದ್ಯಾಲಯದಿಂದ ಉರ್ದು ಮಾಧ್ಯಮದಲ್ಲಿ ಬಿ.ಎ. ಪದವಿ, ಆ ನಂತರ ಕರ್ನಾಟಕ ವಿಶ್ವ ವಿದ್ಯಾಲ ಯದಿಂದ ಬಿ.ಎಡ್. ಪದವಿ, ನಂತರ ಕನ್ನಡದಲ್ಲಿ ಎಂ.ಎ. ಪದವಿ ಪಡೆದು ತಾವು ಸೇರಿದ್ದ ಹಮ್‌ದರ್ದ್ ಸಂಸ್ಥೆಯಲ್ಲೇ ಪ್ರೌಢಶಾಲಾ ಶಿಕ್ಷಕರಾಗಿ, ಪದವಿಪೂರ್ವ ಕಾಲೇಜು ಪ್ರಾಚಾರ್ಯರಾಗಿ ಬಡ್ತಿ ಪಡೆದು 1981ರಲ್ಲಿ ನಿವೃತ್ತಿ ಹೊಂದಿದ್ದರು.

ವೃತ್ತಿಯಲ್ಲಿ ಶಿಕ್ಷಕ ಪ್ರವೃತ್ತಿಯಲ್ಲಿ ಸಾಹಿತಿ ಮತ್ತು ಹೋರಾಟಗಾರರಾದ ಶಾಂತರಸರು ವಾಸ್ತವವಾಗಿ ಬರವಣಿಗೆಯಲ್ಲೂ ಹೋರಾಟದ ಮನೋಭಾವದವರೇ. 1942 ರಲ್ಲೇ ತಮ್ಮ ವಿದ್ಯಾರ್ಥಿ ದಿಶೆಯಲ್ಲೇ ಬರವಣಿಗೆಗಿಳಿದ ಅವರು 'ಸರ್ವಜ್ಞ' ಎಂಬ ಕೈ ಬರಹದ ಪತ್ರಿಕೆಯ ಮತ್ತು 'ಪ್ರತೀಕ' ಎಂಬ ಸಾಹಿತ್ಯಿಕ ಪತ್ರಿಕೆಯ ಸಂಪಾದಕರಾಗಿ ಪತ್ರಕರ್ತರಾಗಿಯೂ ಲೇಖನಿ ಆಡಿಸಿದ್ದಾರೆ. 60ರ ದಶಕದಲ್ಲಿ ಅವರು ಪ್ರಕಟಿಸುತ್ತಿದ್ದ 'ಪ್ರತೀಕ' ಪತ್ರಿಕೆಯಲ್ಲಿ ದೇವನೂರು ಮಹದೇವರ ಕಥೆಯೊಂದು ಪ್ರಕಟವಾಗಿರುವುದೇ (ಮೊದಲ ಕಥೆ, ದ್ಯಾವನೂರು ಸಂಕಲನದಲ್ಲಿ ಇಲ್ಲದ್ದು) ಇವರ ಪ್ರಯೋಗಶೀಲತೆಗೆ ಪ್ರತ್ಯಕ್ಷ ಸಾಕ್ಷಿ. ಪ್ರಕಾಶಕರಾಗಿಯೂ ಅವರು 'ಸತ್ಯ ಸ್ನೇಹಿ ಪ್ರಕಾಶನ' ಸ್ಥಾಪಿಸಿ ತಮ್ಮೊಡನೆ ಹಲವಾರು ಪ್ರತಿಭೆಗಳು ಪ್ರಕಾಶಿಸುವಂತೆ ಮಾಡಿದ್ದಾರೆ. ಸಂಘಟಕರಾಗಿಯೂ ಕಿರಿಯ ವಯಸ್ಸಿನಲ್ಲೇ ಸಂಗಡಿಗರ ಸಮಿತಿ, ಅನುಭವ ಮಂಟಪ, ನಾಗರಿಕ ಸಮಿತಿಯಂತಹ ಸಂಘಟನೆಗಳನ್ನು ಸಂಸ್ಥಾಪಿಸಿ ತನ್ಮೂಲಕ ಸಮಾಜದ ಸರ್ವತೋಮುಖ ಪ್ರಗತಿಗೆ ಅವರು ಶ್ರಮಿಸಿದ್ದರು.

ನಲವತ್ತರ ದಶಕದಿಂದ ಅರವತ್ತರ ದಶಕದವರೆಗೆ ಶಾಂತರಸರು ನೂರಾರು ಬಿಡಿ ಲೇಖನಗಳನ್ನು,ಕಥೆ–ಕವನಗಳನ್ನು ಬರೆದಿದ್ದರೂ, ಹಲವಾರು ಕೃತಿಗಳನ್ನು ಸಂಪಾದಿಸಿದ್ದರೂ ಅವರ ಮೊದಲ ಸ್ವತಂತ್ರ ಕೃತಿ 'ಸತ್ಯ ಸ್ನೇಹಿ' ನಾಟಕ ಪುಸ್ತಕ ರೂಪದಲ್ಲಿ ಬಂದದ್ದು 1961 ರಲ್ಲಿ. ಹಾಗಾಗಿ ಹರಿಹರನ ಮಲುಹಣನ ರಗಳೆಯನ್ನು ಗೀತನಾಟಕವಾಗಿ ಪರಿವರ್ತಿಸಿದ್ದ ಮಹತ್ವದ ಕೃತಿ 'ಸತ್ಯ ಸ್ನೇಹಿ'ಯ ಮೂಲಕ ಅಧಿಕೃತವಾಗಿ ಕನ್ನಡ ಸಾಹಿತ್ಯ ಲೋಕಕ್ಕೆ ಪಾದಾರ್ಪಣೆ ಗೈದ ಶಾಂತರಸರು ನಂತರ ಸಾರಸ್ವತ ಪಥದಲ್ಲಿ ಹಿಂತಿರುಗಿ ನೋಡಲೇ ಇಲ್ಲ. ಒಂದರ ಮೇಲೊಂದು ಮೌಲಿಕ ಕೃತಿಗಳನ್ನು ನೀಡಿರುವ ಅವರ ಮಡಿಲಿನಲ್ಲಿ ಸುಮಾರು 50ಕ್ಕೂ ಹೆಚ್ಚು ಸಾಹಿತ್ಯ ಕೃತಿಗಳಿವೆ. ಇವೆಲ್ಲವೂ ಒಂದೊಂದು ರತ್ನಗಳೇ ಆಗಿವೆ.

ಶಾಂತರಸರು ಕಥೆ, ಕಾವ್ಯ, ಕಾದಂಬರಿ, ನಾಟಕ, ಗಜಲ್, ಜೀವನಚರಿತ್ರೆ, ಲಘು ಪ್ರಬಂಧ, ಅಂಕಣ ಬರಹ, ರೂಪಕ, ಸಂಶೋಧನೆ, ಸಂಪಾದನೆ, ಅನುವಾದ ಸೇರಿದಂತೆ ಸಾಹಿತ್ಯದ ಬಹುತೇಕ ಎಲ್ಲಾ ಪ್ರಕಾರಗಳಲ್ಲೂ ಕೃಷಿ ಮಾಡಿದ್ದಾರೆ. ಅವರ ಲೇಖನಿಯಿಂದ ಸಾಹಿತ್ಯದ ಯಾವ ಪ್ರಕಾರವೂ ತಪ್ಪಿಸಿಕೊಂಡಿರಲಾರದು. ಇಷ್ಟಾದರೂ ಅವರು ಮೂಲತಃ ಕವಿಗಳೆಂದೇ ಹೆಚ್ಚುಗಾರಿಕೆ ಪಡೆದವರು. 1967ರಲ್ಲಿ ಪ್ರಕಟವಾದ ಅವರ 'ಮಾನಸಗಳ್ಳಿ' ಮತ್ತು 1985ರಲ್ಲಿ ಬಂದ 'ಬಯಲುಸೀಮೆಯ ಬಿಸಿಲು' ಅವರ ಗಮನಾರ್ಹ ಕವನ ಸಂಕಲನಗಳು. ಉರ್ದು ಕಾವ್ಯ ಪ್ರಕಾರಗಳಾದ ಗಜಲ್, ರುಬಾಯಿ, ಪರ್ದ್‌ಗಳಲ್ಲೂ ಆಳವಾದ ಪಾಂಡಿತ್ಯ ಪಡೆದಿದ್ದ ಶಾಂತರಸರು ಗಜಲ್ ಕಾವ್ಯದ ಪರಿಕಲ್ಪನೆ ಮೂಡಿಸಲು ರಾಜ್ಯದಲ್ಲೇ ಮೊದಲಿಗೆ ಪುಸ್ತಕ ರಚಿಸಿದ್ದರಲ್ಲದೆ ಉರ್ದುವಿನ ಗಜಲ್, ರುಬಾಯಿ, ಪರ್ದ್ ಕಾವ್ಯ ಪ್ರಕಾರಗಳನ್ನು ಕನ್ನಡದಲ್ಲಿ ಕಸಿ ಮಾಡಿದವರಲ್ಲಿ ಪ್ರಥಮರೆನಿಸಿದ್ದಾರೆ. ಹಾಗೆಯೇ 'ಬಾರಾಮಾಸ' ಎಂಬ ವಿಶಿಷ್ಟ ಸಾಹಿತ್ಯ ಪ್ರಕಾರವೊಂದನ್ನು ಪ್ರಪ್ರಥಮವಾಗಿ ಕನ್ನಡಕ್ಕೆ ಅನುವಾದಿಸಿದ ಹೆಗ್ಗಳಿಕೆಯನ್ನು ಅವರು ಗಳಿಸಿದ್ದು, ಶುದ್ಧ ಗಜಲ್ ಗಳನ್ನು ಕನ್ನಡದಲ್ಲಿ ಬರೆದು ಗಜಲ್ ಪರಂಪರೆಯನ್ನು ನಿರ್ಮಿಸಿದ್ದಾರೆ. ಇವರ 'ಗಜಲ್ ಮತ್ತು ದ್ವಿಪದಿಗಳು' ಮತ್ತು 'ಶರಾಬ್ ಔರ್ ಶಬಾಬ್' ಕಾವ್ಯಗಳು ಹಾಗೂ ಮಿರ್ಜಾ ರುಸ್ವಾ ಅವರ 'ಉಮ್ರಾವ್ ಜಾನ್ ಅದಾ' ಅನುವಾದಿತ ಕಾದಂಬರಿ ಅದ್ಭುತ ಕೃತಿಗಳೆನಿಸಿವೆ.

ಶಾಂತರಸರಿಗೆ ನಾನಾ ಪ್ರಶಸ್ತಿ–ಪುರಸ್ಕಾರ, ಗೌರವ ಸ್ಥಾನಗಳು ಸಂದಿವೆ. 1962ರಲ್ಲಿ ಅವರ ಮೊದಲ ಕೃತಿ 'ಸತ್ಯಸ್ನೇಹಿ' ನಾಟಕಕ್ಕೆ ಮೈಸೂರು ಸರ್ಕಾರದ ಪ್ರಶಸ್ತಿ, 1985ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ವಿದ್ಯಾವರ್ಧಕ ಸಂಘದ ಪ್ರಶಸ್ತಿ,'ನಾಯಿ ಮತ್ತು ಪಿಂಚಣಿ' ಕಥಾ ಸಂಕಲನಕ್ಕೆ ಬಹುಮಾನ, ಪಠ್ಯಪುಸ್ತಕ ಮಂಡಲಿ ಸದಸ್ಯರಾಗಿ ನೇಮಕ, 1992 ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಇದನ್ನು ಶಾಂತರಸರು ತಿರಸ್ಕರಿಸಿದರು. 1993–94ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಫೆಲೋಶಿಪ್, 1995ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಪದವಿ, 1996ರಲ್ಲಿ ಎಸ್.ಆರ್. ಪಾಟೀಲ್ ಪ್ರಶಸ್ತಿ, ಬೀದರ ಕಂಬಳಿವಾಲೆ ಪ್ರಶಸ್ತಿ, 1997 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಗೌರವ ಸದಸ್ಯತ್ವ ಕಲಬುರ್ಗಿಯ ಕಾಯಕ ಸಮ್ಮಾನ ಪ್ರಶಸ್ತಿ, 1998 ರಲ್ಲಿ ಶರಣ ಸಾಹಿತ್ಯ ಪ್ರಶಸ್ತಿ, ಅನುಭವ ಮಂಟಪದ ಚೆನ್ನಬಸವ ಪಟ್ಟದ ದೇವರ ಪ್ರಶಸ್ತಿ, 2005ರಲ್ಲಿ ಕಲಬುರ್ಗಿ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಸೇರಿದಂತೆ ಬಹಳಷ್ಟು ಪ್ರಶಸ್ತಿಗಳಿಗೆ ಇವರು ಭಾಜನರಾಗಿದ್ದಾರೆ.

ಇವೆಲ್ಲಕ್ಕೂ ಕಲಶವಿಟ್ಟಂತೆ 2006ರಲ್ಲಿ ಕನ್ನಡ ಸಾರಸ್ವತ ಲೋಕದ ಅತ್ಯುನ್ನತ ಗೌರವವಾದ ಬೀದರ್‌ನಲ್ಲಿ ಜರುಗಿದ 72ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠವನ್ನು ಶಾಂತರಸರಿಗೆ ನೀಡಿ ಸಮಸ್ತ ಕನ್ನಡನಾಡು ಅವರನ್ನು ಗೌರವಿಸಿದೆ ಮತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯವು 2007ನೇ ಸಾಲಿನ ಪ್ರತಿಷ್ಠಿತ 'ನಾಡೋಜ ಪ್ರಶಸ್ತಿ' ನೀಡಿತು. 2008 ಏಪ್ರಿಲ್ 13ರಂದು ನಿಧನರಾದ ಅವರು ನಾಡು ಮರೆಯದಂಥ ಸಾಹಿತ್ಯ ಸಂಪತ್ತನ್ನು ಸಾರಸ್ವತ ಲೋಕಕ್ಕೆ ಕಾಣಿಕೆಯಾಗಿ ನೀಡಿ ಚಿರಂಜೀವಿಯಾಗಿದ್ದಾರೆ.

ಜೆಡಿಎಸ್‌ಗೆ ಅಬ್ದುಲ್ ಅಜೀಜ್ ರಾಜೀನಾಮೆ

ಮೈಸೂರು, ಏ.7– ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರದಿಂದ ಕಳೆದ ಬಾರಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತಿದ್ದ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಬ್ದುಲ್ ಅಜೀಜ್(ಅಬ್ದುಲ್ಲಾ) ಜೆಡಿಎಸ್ ಪಕ್ಷದ ಪ್ರಾಥಮಿಕ ಸದಸ್ಯತ್ವ ಮತ್ತು ರಾಜ್ಯ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ನಾನು ಕಳೆದ ಆರು ವರ್ಷಗಳಿಂದ ಜೆಡಿಎಸ್ ನಿಷ್ಠಾವಂತ ಕಾರ್ಯಕರ್ತನಾಗಿದ್ದು, 2018ರಲ್ಲಿ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತಿದ್ದೇನೆ. ರಾಜ್ಯ ಕಾರ್ಯದರ್ಶಿ ಜವಾಬ್ದಾರಿಯನ್ನು ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ನಿರ್ವಹಿಸಿ, ಪಕ್ಷ ಸಂಘಟಿಸಿದ್ದೇನೆ. ಆದರೆ ರಾಜ್ಯಾಧ್ಯಕ್ಷ ಹಾಗೂ ಅಲ್ಪಸಂಖ್ಯಾತರ ಘಟಕದ ರಾಜ್ಯಾಧ್ಯಕ್ಷರ ವರ್ತನೆಯಿಂದ ಹಲವು ವರ್ಷಗಳಿಂದ ಪಕ್ಷ ಸಂಘಟಿಸಿರುವ ಕಾರ್ಯಕರ್ತರು ಹಾಗೂ ನನ್ನ ಬೆಂಬಲಿಗರಿಗೆ ಮನ್ನಣೆ ಸಿಗುತ್ತಿಲ್ಲ ಎಂಬ ಕಾರಣಕ್ಕೆ ರಾಜೀನಾಮೆ ನೀಡುತ್ತಿದ್ದೇನೆ. ಇದೇ ವೇಳೆ ಈವರೆಗೆ ಸಹಕರಿಸಿದ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಶಾಸಕರಾದ ಜಿ.ಟಿ.ದೇವೇಗೌಡ, ಸಾ.ರಾ.ಮಹೇಶ್, ಜೆಡಿಎಸ್‌ನ ಹಿರಿಯ ಮುಖಂಡರು, ಪಾಲಿಕೆ ಸದಸ್ಯರು, ಮೈಸೂರು ಮತ್ತು ಮಂಗಳೂರು ನಗರ–ಜಿಲ್ಲಾ ಜೆಡಿಎಸ್‌ನ ಎಲ್ಲಾ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರಿಗೆ ಧನ್ಯವಾದ ತಿಳಿಸಿದ್ದಾರೆ.



ಕಾಂಗ್ರೆಸ್ ಸೇರ್ಪಡೆ: ಜೆಡಿಎಸ್ ತೊರೆದಿರುವ ಅಬ್ದುಲ್ಲಾ ಅವರು ಕಾಂಗ್ರೆಸ್ ಸೇರುವುದು ಬಹುತೇಕ ಖಚಿತವಾಗಿದೆ. ಇದನ್ನು ಪುಷ್ಟೀಕರಿಸುವಂತೆ ವಿಪಕ್ಷ ನಾಯಕ ಸಿದ್ದರಾಮಯ್ಯ ಹಾಗೂ ಮಾಜಿ ಸಚಿವ ಯು.ಟಿ.ಖಾದರ್ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿರುವ ಫೋಟೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಆದರೆ ಅಧಿಕೃತವಾಗಿ ಯಾವಾಗ ಸೇರ್ಪಡೆಯಾಗಲಿದ್ದಾರೆ ಎಂದು ತಿಳಿದು ಬಂದಿಲ್ಲ. ಕೆಲ ದಿನಗಳ ಹಿಂದೆ ಬೆಂಬಲಿಗರ ಸಭೆ ನಡೆಸಿದ್ದ ಅಬ್ದುಲ್ಲಾ, ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಅವರು ಎನ್.ಆರ್.ಕ್ಷೇತ್ರದಲ್ಲಿ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿದರು. ಹೀಗಾಗಿ ಅವರನ್ನು ಸ್ವಾಗತಿಸಿ, ನಾನು ಸುಮ್ಮನಾದೆ. ಆದರೆ ಇಷ್ಟು ದಿನವಾದರೂ ಅವರ ಸ್ಪರ್ಧೆ ಬಗ್ಗೆ ಹೇಳುತ್ತಿಲ್ಲ ಎಂಬ ಬೇಸರವಿದೆ. ಹೀಗಾಗಿ ನಾನಂತೂ ಅಭ್ಯರ್ಥಿ ಆಗಲ್ಲ. ಯಾರಾದರೂ ಅಭ್ಯರ್ಥಿ ಆಗಲಿ. ನಾನು ತಟಸ್ಥನಾಗಿ ಇರಲು ಬಯಸಿದ್ದೇನೆ. ಕ್ಷೇತ್ರದಲ್ಲಿ ಪಕ್ಷವನ್ನು ಬಲಪಡಿಸಲು ಶ್ರಮಿಸಿದ್ದ ನನ್ನನ್ನು ಕಡೆಗಣಿಸಿರು ವುದು ನೋವು ತಂದಿದೆ. ಮುಂದಿನ ನಡೆ ಯನ್ನು ಕೆಲವೇ ದಿನಗಳಲ್ಲಿ ತಿಳಿಸುತ್ತೇನೆ ಎಂದಿದ್ದರು.

ಕಾಂಗ್ರೆಸ್‌ಗೆ 60 ಕ್ಷೇತ್ರಗಳಲ್ಲಿ ಸೂಕ್ತ ಅಭ್ಯರ್ಥಿಗಳೇ ಇಲ್ಲ: ಸಿಎಂ

ಬೆಂಗಳೂರು, ಏ.7 (ಕೆಎಂಶಿ)– ಕಾಂಗ್ರೆಸ್ ಪಕ್ಷಕ್ಕೆ 60 ಕ್ಷೇತ್ರಗಳಲ್ಲಿ ಸರಿಯಾದ ಅಭ್ಯರ್ಥಿಗಳಿಲ್ಲದೆ ಅಲ್ಲಿಂದ, ಇಲ್ಲಿಂದ ಅಭ್ಯರ್ಥಿಗಳ ಕರೆತಂದು ಟಿಕೆಟ್ ಕೊಡುವ ಪ್ರಯತ್ನ ನಡೆಸಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವ್ಯಂಗ್ಯವಾಡಿದ್ದಾರೆ.

135 ಕ್ಷೇತ್ರಗಳಲ್ಲಿ ಜಯ ಗಳಿಸಿ, ಪಕ್ಷವನ್ನು ಅಧಿಕಾರಕ್ಕೆ ತರುತ್ತೇವೆ ಎಂದು ಹೇಳುವ ಪಕ್ಷಕ್ಕೆ ಸಮರ್ಥ ಅಭ್ಯರ್ಥಿಗಳೇ ಇಲ್ಲ. ಇನ್ನು ಇವರು ಅಧಿಕಾರಕ್ಕೆ ಬರುವುದಾದರೂ ಎಲ್ಲಿ ಎಂದು ಪ್ರಶ್ನಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಎರಡನೇ ಪಟ್ಟಿ ಬಿಡುಗಡೆಗೂ ಮುನ್ನ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಬಿಜೆಪಿ ಬಹುತೇಕ ಶಾಸಕರನ್ನು ಸಂಪರ್ಕಿಸಿ, ನಿಮಗಾಗಿ ಟಿಕೆಟ್ ಕಾಯ್ದಿರಿಸಿದ್ದೇವೆ. ಬರುತ್ತೀರಾ ಎಂದು ಕೇಳಿದ್ದಾರೆ.

ಕಾಂಗ್ರೆಸ್‌ನವರು ಹೊರಗಡೆ ಶೂರತ್ವದ ಮಾತನಾಡುತ್ತಾರೆ. ಒಳಗಡೆ ಹಕ್ಕಿಕತ್ ಬೇರೆಯೇ ಇದೆ ಎಂದರು.

ಬೈಕ್‌ಗೆ ಗೂಡ್ಸ್ ವಾಹನ ಡಿಕ್ಕಿ: ಸವಾರ ಸಾವು

ಮೈಸೂರು, ಏ.7–ಬೈಕ್‌ಗೆ ಪಿಕ್‌ಅಪ್ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಕೊಡಗು ಮೂಲದ ಖಾಸಗಿ ಕಂಪನಿ ಉದ್ಯೋಗಿ ಸಾವನ್ನಪ್ಪಿದ ಘಟನೆ ಮೈಸೂರಿನ ಜಯದೇವ ಆಸ್ಪತ್ರೆ ಹಿಂಭಾಗದ ಗೇಟ್ ಬಳಿ ಸಂಭವಿಸಿದೆ.

ಮೂಲತಃ ಪೊನ್ನಂಪೇಟೆ ತಾಲೂಕು ಬೇಲೂರು ಗ್ರಾಮದವನಾಗಿದ್ದು, ಮೈಸೂರಿನ ಖಾಸಗಿ ಕಂಪನಿಯ ಉದ್ಯೋಗಿಯಾಗಿರುವ ಕೆ.ಎಸ್. ಪೊನ್ನಣ್ಣ(24) ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಇವರು ಗೋಕುಲಂನಲ್ಲಿ ಬಾಡಿಗೆ ರೂಂನಲ್ಲಿ ವಾಸವಿದ್ದರು. ಏಪ್ರಿಲ್ 5ರಂದು ಮಧ್ಯಾಹ್ನ ತಮ್ಮ ಸ್ನೇಹಿತನ ಕೆಟಿಎಂ ಬೈಕ್ (ಕೆಎ 09–ಹೆಚ್‌ಡಬ್ಲ್ಯೂ 6068) ನಲ್ಲಿ ಜಯದೇವ ಆಸ್ಪತ್ರೆ ಹಿಂಭಾಗದ ಗೇಟ್ ಮುಂದಿನ ರಸ್ತೆಯಲ್ಲಿ ತೆರಳುತ್ತಿದ್ದಾಗ ಹಿಂಬದಿಯಿಂದ ಬಂದ ಮಹೇಂದ್ರ ಪಿಕ್‌ಅಪ್ ಗೂಡ್ಸ್ ವಾಹನ (ಕೆಎ 11–ಎ 8326) ಇವರ ಬೈಕ್‌ಗೆ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯ ಗೊಂಡ ಪೊನ್ನಣ್ಣ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಫಲ ಕಾರಿಯಾಗದೇ ಅಂದು ಸಂಜೆ 5.10ರ ಸುಮಾರಿನಲ್ಲಿ ಮೃತಪಟ್ಟಿದ್ದಾರೆ. ಈ ಸಂಬಂಧ ವಿವಿ ಪುರಂ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಕಲಿ ಚಿನ್ನಾಭರಣ ಗಿರಿವಿ ಇಟ್ಟು ವಂಚನೆ

ಮೈಸೂರು, ಏ. 7– ನಕಲಿ ಚಿನ್ನಾಭರಣ ಗಿರಿವಿ ಇಟ್ಟು ಖಾಸಗಿ ಫೈನಾನ್ಸ್ ಸಂಸ್ಥೆಗೆ ವಂಚಿಸಿರುವ ಬಗ್ಗೆ ಇಬ್ಬರ ವಿರುದ್ಧ ಪ್ರಕರಣ ದಾಖಲಾಗಿದೆ. ಶ್ರೀರಂಗಪಟ್ಟಣ ತಾಲೂಕು ಮರಳಗಾಲ ಗ್ರಾಮದ ನರಸಿಂಹಮೂರ್ತಿ ಮತ್ತು ಅವರ ಸ್ನೇಹಿತ ಪ್ರೇಂಕುಮಾರ್ ಆರೋಪಕ್ಕೆ ಗುರಿಯಾಗಿರುವವರು. ನರಸಿಂಹಮೂರ್ತಿಯವರು 2022ರ ಏಪ್ರಿಲ್ 22ರಂದು ಮುತ್ತೂಟ್ ಫಿನ್‌ಕಾರ್ಪ್ ವಿಜಯನಗರ ಶಾಖೆಯಲ್ಲಿ 20 ಗ್ರಾಂ ತೂಕದ 2 ಉಂಗುರಗಳನ್ನು ಗಿರಿವಿ ಇಟ್ಟು 70,020 ರೂ. ಹಣ ಪಡೆದಿದ್ದರು. 2022ರ ಜುಲೈ 19ರಂದು ಕಂಪನಿಯ ಗೋಲ್ಡ್ ಆಡಿಟ್ ನಡೆದಾಗ ಈ ಉಂಗುರಗಳು ನಕಲಿ ಎಂಬುದು ಗೊತ್ತಾಗಿದೆ. ಈ ಹಿನ್ನೆಲೆಯಲ್ಲಿ ಸಂಸ್ಥೆಯ ಮ್ಯಾನೇಜರ್ ಜಿ. ಸತೀಶ ಅವರು ನರಸಿಂಹಮೂರ್ತಿಯವರನ್ನು ಕರೆದು ವಿಚಾರಿಸಿದಾಗ, ಸದರಿ ಉಂಗುರಗಳು ತಮ್ಮ ಸ್ನೇಹಿತ ಪ್ರೇಂಕುಮಾರ್‌ಗೆ ಸೇರಿದ್ದಾಗಿದ್ದು, 2–3 ತಿಂಗಳಲ್ಲಿ ಬಿಡಿಸಿಕೊಳ್ಳುವುದಾಗಿ ತಿಳಿಸಿದ್ದಾರೆ. ಆದರೆ, ಈವರೆವಿಗೂ ಅಡವಿಟ್ಟಿರುವ ನಕಲಿ ಉಂಗುರಗಳನ್ನು ಬಿಡಿಸಿಕೊಳ್ಳದೇ ವಂಚನೆ ಎಸಗಲಾಗಿದೆ ಎಂದು ಕಂಪನಿಯ ಮ್ಯಾನೇಜರ್ ಸತೀಶ ನೀಡಿದ ದೂರನ್ನು ದಾಖಲಿಸಿಕೊಂಡಿರುವ ವಿಜಯನಗರ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಧ್ರುವನಾರಾಯಣ ಇಹಲೋಕ ತ್ಯಜಿಸಿದ ತಿಂಗಳೊಳಗೆ ಅವರ ಪತ್ನಿ ಶ್ರೀಮತಿ ವೀಣಾ ನಿಧನ

ಇಂದು ಚಾ.ನಗರ ತಾಲೂಕು ಹೆಗ್ಗವಾಡಿಯಲ್ಲಿ ಪತಿ ಸಮಾಧಿ ಪಕ್ಕ ಅಂತ್ಯಕ್ರಿಯೆ



ಮೈಸೂರು, ಏ.7(ಎಂಟಿವೈ)– ಅನಾರೋಗ್ಯದಿಂದ ಬಳಲುತ್ತಿದ್ದ ಮಾಜಿ ಸಂಸದ ದಿ. ಆರ್.ಧ್ರುವನಾರಾಯಣ ಅವರ ಪತ್ನಿ ಶ್ರೀಮತಿ ವೀಣಾ(50) ಅವರು ಶುಕ್ರವಾರ ಬೆಳಗ್ಗೆ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಮಾರ್ಚ್ 11ರಂದು ಆರ್.ಧ್ರುವನಾರಾಯಣ ಅವರು ಹೃದಯಾಘಾತದಿಂದ ಮೃತಪಟ್ಟಿದ್ದು, ಪತಿ ನಿಧನದ ತಿಂಗಳೊಳಗೆ ಪತ್ನಿ ವೀಣಾ ಅವರೂ ಇಹಲೋಕ ತ್ಯಜಿಸಿದ್ದು, ಕುಟುಂಬ ಶೋಕ ಸಾಗರದಲ್ಲಿ ಮುಳುಗಿದೆ.

ಬದನವಾಳು ಗ್ರಾಮದ ನಿವೃತ್ತ ಅರಣ್ಯಾಧಿಕಾರಿ ಬಿ.ಎಸ್.ರಾಮಯ್ಯ ಮತ್ತು ನಾಗಮ್ಮ ದಂಪತಿಯ ಎರಡನೇ ಪುತ್ರಿ, ಬಿಎಸ್ಸಿ ಕಂಪ್ಯೂಟರ್ ಸೈನ್ಸ್ ಪದವೀಧರೆಯಾಗಿದ್ದ ವೀಣಾ ಅವರನ್ನು ಧ್ರುವನಾರಾಯಣ ವಿವಾಹವಾಗಿದ್ದರು. ವೀಣಾ ಅವರ ತಾಯಿ ನಾಗಮ್ಮ ಧ್ರುವನಾರಾಯಣ ಅವರ ಸ್ವಂತ ಅಕ್ಕ. ಇವರಿಗೆ ದರ್ಶನ್ ಮತ್ತು ಧೀರನ್ ಇಬ್ಬರು ಪುತ್ರರಿದ್ದಾರೆ. ದರ್ಶನ್ ವಕೀಲರಾಗಿದ್ದು, ಧ್ರುವನಾರಾಯಣ ನಿಧನದ ಬಳಿಕ ನಂಜನಗೂಡು ಮೀಸಲು ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಚುನಾವಣೆಗೆ ಸ್ಪರ್ಧಿಸಿದ್ದಾರೆ. ಎರಡನೇ ಪುತ್ರ ಧೀರನ್ ಬಿಎಸ್ಸಿ ವ್ಯಾಸಂಗ ಮಾಡುತ್ತಿದ್ದಾರೆ.

ಕ್ಯಾನ್ಸರ್ ರೋಗದಿಂದ ಬಳಲುತ್ತಿದ್ದ ವೀಣಾ ಅವರಿಗೆ ವಿದೇಶದಲ್ಲಿ ಚಿಕಿತ್ಸೆ ಕೊಡಿಸಲಾಗಿತ್ತು. ಧ್ರುವನಾರಾಯಣ ಮೃತರಾಗುವ ಒಂದು ವಾರದ ಮುಂಚೆಯೂ ಚೆನ್ನೈನ ಪ್ರತಿಷ್ಠಿತ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿತ್ತು. ಅವರ ಆರೋಗ್ಯದಲ್ಲಿ ಸುಧಾರಣೆ ಕಂಡಿತ್ತು. ಆದರೆ, ಪತಿಯ ಅಕಾಲಿಕ ಸಾವಿನಿಂದ ಅವರು ಖಿನ್ನತೆಗೆ ಒಳಗಾಗಿದ್ದರು. ಕಳೆದ 3–4 ದಿನಗಳಿಂದ ಅವರ ಆರೋಗ್ಯದಲ್ಲಿ ತೀವ್ರ ಏರುಪೇರಾಗಿತ್ತು. ಹಾಗಾಗಿ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಇಂದು ಅಂತ್ಯಕ್ರಿಯೆ: ವೀಣಾ ಅವರ ಅಂತ್ಯಕ್ರಿಯೆ ಏ.8ರ ಶನಿವಾರ ಬೆಳಗ್ಗೆ 11 ಗಂಟೆ ಚಾಮರಾಜನಗರ ತಾಲೂಕು ಹೆಗ್ಗವಾಡಿ ಗ್ರಾಮದಲ್ಲಿ ಧ್ರುವನಾರಾಯಣ ಅವರ ಸಮಾಧಿ ಪಕ್ಕದಲ್ಲೇ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇಂದು ಮಧ್ಯಾಹ್ನ 4 ಗಂಟೆವರೆಗೂ ವಿಜಯನಗರದ ಅವರ ನಿವಾಸದಲ್ಲಿ ವೀಣಾ ಅವರ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ಎಐಸಿಸಿ ಮಲ್ಲಿಕಾರ್ಜುನ ಖರ್ಗೆ, ಮಾಜಿ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ದೂರವಾಣಿ ಮೂಲಕ ದರ್ಶನ್ ಅವ ರೊಂದಿಗೆ ಮಾತನಾಡಿ, ಸಂತಾಪ ಸೂಚಿಸಿದ್ದಾರೆ. ಸಂಸದರಾದ ವಿ.ಶ್ರೀನಿವಾಸ ಪ್ರಸಾದ್, ಪ್ರತಾಪ್ ಸಿಂಹ, ಶಾಸಕರಾದ ತನ್ವೀರ್ ಸೇಠ್, ಅನಿಲ್ ಚಿಕ್ಕಮಾದು, ಜಿ.ಟಿ.ದೇವೇಗೌಡ, ಹರ್ಷವರ್ಧನ್, ಮಾಜಿ ಶಾಸಕ ವಾಸು, ಕಳಲೆ ಕೇಶವಮೂರ್ತಿ ಸೇರಿದಂತೆ ವಿವಿಧ ಪಕ್ಷಗಳ ಮುಖಂಡರು, ಹಿತೈಷಿಗಳು ಅಂತಿಮ ದರ್ಶನ ಪಡೆದು ಧ್ರುವನಾರಾಯಣ್ ಮಕ್ಕಳಿಗೆ ಸಾಂತ್ವನ ಹೇಳಿದರು.

ವಿಶ್ವನಾಥ್ ಸಂತಾಪ: ಧ್ರುವನಾರಾಯಣ ಅವರ ಪತ್ನಿ ವೀಣಾ ಅವರ ನಿಧನಕ್ಕೆ ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಸಂತಾಪ ಸೂಚಿಸಿದ್ದಾರೆ. ತಿಂಗಳೊಳಗೆ ತಂದೆ–ತಾಯಿ ಕಳೆದುಕೊಂಡ ನಂಜನಗೂಡು ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಅವರಿಗೆ ಅನಾಥ ಭಾವ ಕಾಡುತ್ತಿದ್ದು, ಜನರೇ ನಿಮ್ಮ ತಂದೆ–ತಾಯಿ, ಈ ಸಮಾಜವೇ ನಿಮ್ಮ ಮನೆ ಎಂದು ತಿಳಿದು ಧೈರ್ಯವಾಗಿರಿ ಎಂದು ದರ್ಶನ್‌ಗೆ ವಿಶ್ವನಾಥ್ ಸಾಂತ್ವನ ಹೇಳಿದರು.

ನಂ.ಗೂಡಲ್ಲಿ ದರ್ಶನ್ ವಿರುದ್ಧ ಜೆಡಿಎಸ್ ಅಭ್ಯರ್ಥಿ ಹಾಕಲು ಮನಸ್ಸಿಲ್ಲ

ಧ್ರುವನಾರಾಯಣ ಪುತ್ರನಿಗೆ ಜಿಟಿಡಿ ಸಾಂತ್ವನ



ಮೈಸೂರು, ಏ.7(ಎಂಟಿವೈ)– ಒಂದೇ ತಿಂಗಳಲ್ಲಿ ಆರ್.ಧ್ರುವನಾರಾಯಣ ಅವರ ಮಕ್ಕಳು ಅಪ್ಪ–ಅಮ್ಮನ ಕಳೆದುಕೊಂಡು ನೋವಿನಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ನಂಜನಗೂಡಿನಲ್ಲಿ ಜೆಡಿಎಸ್ ಸ್ಪರ್ಧೆ ಮಾಡಬೇಕೇ ಎಂಬ ಬಗ್ಗೆ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರ ಜತೆ ಚರ್ಚಿಸಿ, ತೀರ್ಮಾನ ಕೈಗೊಳ್ಳುತ್ತೇವೆ ಎಂದು ಜಿ.ಟಿ.ದೇವೇಗೌಡರು ತಿಳಿಸಿದ್ದಾರೆ.

ವೀಣಾ ಧ್ರುವನಾರಾಯಣ ಅವರ ಅಂತಿಮ ದರ್ಶನ ಪಡೆದ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನೋವಿನಲ್ಲಿರುವ ಮಕ್ಕಳಿಗೆ ಧೈರ್ಯ ಹೇಳಬೇಕು. ಜನರು ಅವರಿಗೆ ಶಕ್ತಿ ತುಂಬಬೇಕು. ದರ್ಶನ್ ಧ್ರುವನಾರಾಯಣ್ ಎದುರು ಜೆಡಿಎಸ್ ಅಭ್ಯರ್ಥಿ ಹಾಕುವುದಕ್ಕೆ ನಮ್ಮ ಮನಸ್ಸು ಒಪ್ಪುತ್ತಿಲ್ಲ. ಹಾಗಾಗಿ ನಮ್ಮ ಪಕ್ಷದಿಂದ ಏನು ಮಾಡಬೇಕು ಎಂಬುದರ ಬಗ್ಗೆ ಚರ್ಚಿಸುತ್ತೇವೆ ಎಂದರು.

ಒಂದೇ ದಿನ 2,105 ಮಂದಿಯಿಂದ 1.95 ಕೋಟಿ ತೆರಿಗೆ ಪಾವತಿ



ಮೈಸೂರಿನ ಶಾರದಾದೇವಿನಗರದಲ್ಲಿರುವ ಪಾಲಿಕೆ ವಲಯ ಕಚೇರಿ–3 ರಲ್ಲಿ ಶುಕ್ರವಾರ ತೆರಿಗೆ ಪಾವತಿಸುತ್ತಿರುವ ಸಾರ್ವಜನಿಕರು.

ಮೈಸೂರು, ಏ.7(ಆರ್‌ಕೆ)– ರಜಾ ದಿನವಾದರೂ ಇಂದು ಒಂದೇ ದಿನ ಮೈಸೂರು ನಗರಪಾಲಿಕೆಯ ಎಲ್ಲಾ 9 ವಲಯ ಕಚೇರಿಗಳಲ್ಲಿ 2,105 ಮಂದಿ ನಾಗರಿಕರಿಂದ ಒಟ್ಟು 1.95,00,000 ರೂ. ತೆರಿಗೆ ಸಂಗ್ರಹವಾಗಿದೆ ಎಂದು ಪಾಲಿಕೆ ಆಯುಕ್ತ ಜಿ. ಲಕ್ಷ್ಮಿಕಾಂತರೆಡ್ಡಿ ತಿಳಿಸಿದ್ದಾರೆ.

ವಾರಾಂತ್ಯದಲ್ಲಿ ನಿರಂತರ 3 ದಿನಗಳ ರಜೆ ಇರುವ ಕಾರಣ ಶೇ.5ರ ರಿಯಾಯಿತಿ ಹಿನ್ನೆಲೆಯಲ್ಲಿ ನೀರಿನ ತೆರಿಗೆ ಪಾವತಿಸಲು ನಾಗರಿಕರು ಆಸಕ್ತಿ ತೋರುತ್ತಿದ್ದರಿಂದ ಅವರಿಗೆ ಅನುಕೂಲವಾಗಲೆಂದು ಇಂದು (ಏ.7) ಮತ್ತು ನಾಳೆ (ಏ.8) ಪಾಲಿಕೆ 9 ವಲಯ ಕಚೇರಿಗಳ ನಗದು ಕೌಂಟರ್‌ಗಳನ್ನು ತೆರೆಯುವಂತೆ ಆಯುಕ್ತರು ಸೂಚನೆ ನೀಡಿದ್ದರು.

ಅದರಂತೆ ಮೊದಲ ದಿನವಾದ ಶುಕ್ರವಾರ 2,105 ಮಂದಿ ತಮ್ಮ ಆಸ್ತಿ ತೆರಿಗೆ, ನೀರಿನ ಶುಲ್ಕ ಸೇರಿದಂತೆ ಪಾಲಿಕೆಗೆ ಬಾಕಿ ಇದ್ದ ಇತರ ಬಾಬ್ತುಗಳ 1.95 ಕೋಟಿ ರೂ. ತೆರಿಗೆಯನ್ನು ಪಾವತಿಸಿದ್ದು, ಉತ್ತಮ ಪ್ರತಿಕ್ರಿಯೆ ಬಂದಿದೆ.

ನಾಳೆ (ಶನಿವಾರ)ಯೂ ಎಲ್ಲಾ 9 ವಲಯ ಕಚೇರಿಗಳಲ್ಲಿ ಕ್ಯಾಷ್ ಕೌಂಟರ್‌ಗಳು ಕಾರ್ಯ ನಿರ್ವಹಿಸಲಿದ್ದು, 2 ಕೋಟಿ ರೂ. ಗಳಿಗೂ ಅಧಿಕ ತೆರಿಗೆ ಹಣ ಜಮೆಯಾಗುವ ನಿರೀಕ್ಷೆ ಇದೆ ಎಂದು ಲಕ್ಷ್ಮಿಕಾಂತರೆಡ್ಡಿ ತಿಳಿಸಿದ್ದಾರೆ.

ಅಗ್ರಹಾರದ ಅಕ್ಕನಬಳಗ ಶಾಲೆ ಬಳಿ, ಜಯನಗರ ರೈಲ್ವೆ ಗೇಟ್ ಬಳಿ, ಶಾರದಾದೇವಿನಗರ ಸರ್ಕಲ್ ಬಳಿ, ಯಾದವಗಿರಿಯ ಆಕಾಶವಾಣಿ ಸರ್ಕಲ್ ಬಳಿ, ಹೆಬ್ಬಾಳು ಮುಖ್ಯರಸ್ತೆಯ ಬಸವನಗುಡಿ ಸರ್ಕಲ್ ಬಳಿ, ಶೇಷಾದ್ರಿ ಅಯ್ಯರ್ ರಸ್ತೆಯ ವಿದ್ಯಾವರ್ಧಕ ಕಾಲೇಜು ಎದುರು, ಎಫ್‌ಟಿಎಸ್ ಸರ್ಕಲ್, ಉದಯಗಿರಿ ಹಾಗೂ ಗಾಯತ್ರಿಪುರಂ ಗಳ ಪಾಲಿಕೆ ವಲಯ ಕಚೇರಿಗಳಲ್ಲಿ ನಾಗರಿಕರು ತೆರಿಗೆ ಪಾವತಿಸಲು ಸಾಲಾಗಿ ನಿಂತಿದ್ದುದು ಇಂದು ಕಂಡು ಬಂದಿತು.

ಎಲ್ಲಾ ವಲಯ ಕಚೇರಿಗಳಲ್ಲಿ ಶಾಮಿಯಾನ, ಚೇರ್‌ಗಳನ್ನು ಹಾಕಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿ ತೆರಿಗೆ ಪಾವತಿದಾರರಿಗೆ ಪಾಲಿಕೆಯು ಅನುಕೂಲ ಮಾಡಿದೆಯಲ್ಲದೆ, ಅಧಿಕಾರಿ, ಸಿಬ್ಬಂದಿ ಹಾಜರಿದ್ದು ತೆರಿಗೆ ಲೆಕ್ಕ ಹಾಕಿ ಚಲನ್ ಭರ್ತಿ ಮಾಡಿ ಬ್ಯಾಂಕ್ ಕೌಂಟರ್‌ನಲ್ಲಿ ಹಣ ಪಾವತಿಸಲು ನೆರವಾದರು.

ಪ್ರತ್ಯೇಕ ದುರಂತದಲ್ಲಿ ನಾಲ್ವರು ಜಲಸಮಾಧಿ



ಶ್ರೀರಂಗಪಟ್ಟಣ, ಏ.7– ಪ್ರತ್ಯೇಕ ಮೂರು ದುರಂತ ಪ್ರಕರಣಗಳಲ್ಲಿ ನಾಲ್ವರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ಶ್ರೀರಂಗಪಟ್ಟಣ ತಾಲೂಕಿನಲ್ಲಿ ನಡೆದಿದೆ.

ಬಲಮುರಿ: ಇಲ್ಲಿನ ಪ್ರಸಿದ್ಧ ಪ್ರವಾಸಿ ತಾಣ ಬಲಮುರಿಯಲ್ಲಿ ಇಬ್ಬರು ಯುವಕರು ಕಾವೇರಿ ನದಿಯಲ್ಲಿ ಮುಳುಗಿ ದುರಂತ ಸಾವಿಗೀಡಾಗಿದ್ದಾರೆ. ಮೈಸೂರಿನ ಸರ್ದಾರ್ ವಲ್ಲಭಭಾಯಿ ಪಟೇಲ್ ನಗರ ನಿವಾಸಿ ಧನಂಜಯ (23), ವಾಜಮಂಗಲ ಗ್ರಾಮದ ನಿವಾಸಿಯೂ ಆದ ಖಾಸಗಿ ಬ್ಯಾಂಕ್ ಉದ್ಯೋಗಿ ಪ್ರಸನ್ನ(31) ನೀರಲ್ಲಿ ಮುಳುಗಿ ಸಾವನ್ನಪ್ಪಿದವರಾಗಿದ್ದಾರೆ.

ಸಂಬಂಧಿಕರ ಮದುವೆ ಹಿನ್ನಲೆಯಲ್ಲಿ ಕುಟುಂಬ ಸಮೇತರಾಗಿ ಬಲಮುರಿಗೆ ಆಗಮಿಸಿ ಇಲ್ಲಿನ ದೇವಾಲಯದ ಮೆಟ್ಟಿಲ ಬಳಿಯ ಕಾವೇರಿ ನದಿಯಲ್ಲಿ ಆಟವಾಡುತ್ತಿದ್ದ ವೇಳೆ ಧನಂಜಯ ನೀರಿನಲ್ಲಿ ಮುಳುಗುತ್ತಿದ್ದ. ಇದನ್ನು ಕಂಡ ಪ್ರಸನ್ನ, ಧನಂಜಯನನ್ನು ರಕ್ಷಿಸಲು ನದಿಗೆ ಇಳಿದಿದ್ದಾನೆ. ಈ ವೇಳೆ ಇಬ್ಬರು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕೆಆರ್‌ಎಸ್ ಪೊಲೀಸರು ಪರಿಶೀಲನೆ ನಡೆಸಿ ಮೃತದೇಹಗಳನ್ನು ನದಿಯಿಂದ ಮೇಲೆತ್ತಿ ಮೈಸೂರಿನ ಮಣಿಪಾಲ್ ಆಸ್ಪತ್ರೆಗೆ ರವಾನಿಸಿದರು. ಈ ಸಂಬಂಧ ಕೆಆರ್‌ಎಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತರೀಪುರ: ನಾಲೆಗೆ ಕಾಲು ಜಾರಿ ಬಿದ್ದು ಬಾಲಕನೋರ್ವ ಮೃತಪಟ್ಟಿರುವ ದುರಂತ ಮಹದೇವಪುರದಲ್ಲಿ ನಡೆದಿದೆ. ಗ್ರಾಮದ ನಿವಾಸಿ ಗೋವಿಂದಚಾರ್ ಅವರ ಪುತ್ರ ಹಾಗೂ ಶ್ರೀ ವಿನಾಯಕ ಪ್ರೌಢಶಾಲೆಯ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಬಾಲು(16) ಸಾವನ್ನಪ್ಪಿದ ಬಾಲಕ. ಈತ ಸಂಬಂಧಿಕರೊಡನೆ ರಾಜಪರಮೇಶ್ವರಿ ನಾಲೆ ಬಳಿ ಹೋದ ವೇಳೆ ಕಾಲು ಜಾರಿ ಬಿದ್ದು ಸಾವನ್ನಪ್ಪಿದ್ದಾನೆ ಎನ್ನಲಾಗಿದೆ.

ಮಂಡ್ಯ ಕೊಪ್ಪಲು: ಕಾವೇರಿ ನದಿಗೆ ಕಾಲು ಜಾರಿ ಬಿದ್ದು ಬೆಂಗಳೂರು ನಿವಾಸಿ ಪ್ರಭಾಕರ್(54) ಸಾವನ್ನಪ್ಪಿರುವ ಘಟನೆ ತಾಲೂಕಿನ ಮಂಡ್ಯಕೊಪ್ಪಲು ಗ್ರಾಮದ ಬೋರೆದೇವರ ದೇವಸ್ಥಾನದ ಬಳಿ ನಡೆದಿದೆ. ಮೃತರ ಪತ್ನಿ ಕೊಡಿಯಾಲ ಗ್ರಾಮದವರಾಗಿದ್ದು, ಬುಧವಾರ ನಡೆದ ಜಾತ್ರಾ ಮಹೋತ್ಸವಕ್ಕೆ ಬಂದಿದ್ದರು. ಸಂಬಂಧಿಕರ ಜೊತೆ ಬೋರೆದೇವರ ದರ್ಶನಕ್ಕೆ ತೆರಳಿದ್ದ ವೇಳೆ ಕಾವೇರಿ ನದಿಗೆ ಕಾಲು ಜಾರಿ ಬಿದ್ದು ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಈ ಎರಡೂ ಪ್ರಕರಣಗಳು ಅರಕೆರೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿವೆ.



ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲಿ ಶುಕ್ರವಾರ ಬಿಜೆಪಿ ಸಂಸ್ಥಾಪನಾ ದಿನವನ್ನು ಆಚರಿಸಲಾಯಿತು. ಮಾಜಿ ಮೇಯರ್ ಸಂದೇಶ್ ಸ್ವಾಮಿ, ಮುಖಂಡರಾದ ಗಿರಿಧರ್, ಡಾ.ಅನಿಲ್ ಥಾಮಸ್, ಕಾರ್ಪೊರೇಟರ್ ಸಾತ್ವಿಕ್, ಪಕ್ಷದ ಪದಾಧಿಕಾರಿಗಳು, ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.



ಮೈಸೂರು ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕ ಕೆ.ಉಮಾಶಂಕರ್ ಹುಟ್ಟುಹಬ್ಬವನ್ನು ಕುಪ್ಪೇಗಾಲದ ಯುವಕರು ಆಚರಿಸಿದರು. ಚಿತ್ರದಲ್ಲಿ ಎಪಿಎಂಸಿ ಮಾಜಿ ನಿರ್ದೇಶಕ ಜವರಪ್ಪ ಹಾಗೂ ಗ್ರಾಮದ ಯುವಕರನ್ನು ಕಾಣಬಹುದು

ಹುಣಸೂರಲ್ಲಿ ಲಕ್ಷ್ಮಣತೀರ್ಥ ನದಿ ಶುದ್ಧೀಕರಿಸಲು ಆಗ್ರಹ



ಮೈಸೂರು,ಏ.7(ಪಿಎಂ)– ಹುಣಸೂರು ಪಟ್ಟಣದ ಹೃದಯಭಾಗದಲ್ಲಿ ಸುಮಾರು ಒಂದು ಕಿಲೋಮೀಟರ್ ಹರಿಯುವ ಲಕ್ಷ್ಮಣತೀರ್ಥ ನದಿಗೆ ಪಟ್ಟಣದ ಕೊಳಚೆ ನೀರು ಸೇರುತ್ತಿದ್ದು, ಇದನ್ನು ತಡೆಗಟ್ಟಿ ಶುದ್ಧೀಕರಿಸಲು ಕ್ರಮ ವಹಿಸಬೇಕೆಂದು ಹುಣಸೂರಿನ ಸತ್ಯ ಎಂಎಎಸ್ ಫೌಂಡೇಷನ್ ಅಧ್ಯಕ್ಷ ಸತ್ಯಪ್ಪ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾವೇರಿ ನದಿಯ ಉಪನದಿಗಳಲ್ಲಿ ಒಂದಾಗಿರುವ ಲಕ್ಷ್ಮಣತೀರ್ಥ ನದಿಗೆ ಧಾರ್ಮಿಕ ಹಿನ್ನೆಲೆ ಇದೆ. ಲಕ್ಷ್ಮಣನು ಮುನಿಕಾಡಿನ ಬ್ರಹ್ಮಗಿರಿ ಬೆಟ್ಟಕ್ಕೆ ತನ್ನ ಬಾಣದಿಂದ ಹೊಡೆದಾಗ ಈ ನದಿ ಹುಟ್ಟಿತು ಎಂಬ ಪ್ರತೀತಿ ಇದೆ. ಕೊಡಗಿನಲ್ಲಿ ಹುಟ್ಟುವ ಈ ನದಿಗೆ ಹುಣಸೂರು ಪಟ್ಟಣದಲ್ಲಿ ಕೊಳಚೆ ನೀರು ಸೇರ್ಪಡೆಯಾಗುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಹುಣಸೂರು ಪಟ್ಟಣದ ಹೃದಯಭಾಗದಲ್ಲೇ ಲಕ್ಷ್ಮಣತೀರ್ಥ ನದಿ ಹರಿದರೂ ಈ ನೀರು ಕುಡಿಯಲು ಯೋಗ್ಯವಾಗಿಲ್ಲದ ಕಾರಣ ಪಕ್ಕದ ಕೆಆರ್ ನಗರದಿಂದ ಹುಣಸೂರಿಗೆ ಕಾವೇರಿ ನೀರು ಸರಬರಾಜು ಮಾಡಲಾಗುತ್ತಿದೆ. ಹುಣಸೂರಿನಲ್ಲಿ ಮಲೀನಗೊಳ್ಳುವ ಲಕ್ಷ್ಮಣತೀರ್ಥ ನದಿ ನೀರು ಅಂತಿಮವಾಗಿ ಕೆಆರ್‌ಎಸ್ ಒಡಲು ಸೇರುವ ಮೂಲಕ ಕುಡಿಯುವ ನೀರಿಗೂ ಬಳಕೆಯಾಗುತ್ತಿದೆ ಎಂದರು.

ಕಳೆದ 20 ವರ್ಷಗಳಿಂದ ಸ್ಥಳೀಯ ಶಾಸಕರು, ತಾಲೂಕು ಆಡಳಿತದ ನಿರ್ಲಕ್ಷ್ಯದಿಂದ ಹುಣಸೂರಿನಲ್ಲಿ ಲಕ್ಷ್ಮಣತೀರ್ಥ ನದಿ ಕೊಳೆತು ನಾರುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ಮುಖಂಡರಾದ ಕುಮಾರ್, ಸಜ್ಜನ್‌ರಾವ್ ಪವಾರ್, ವೆಂಕೋಬರಾವ್ ಜಗತಾಪ್, ಅನಂತೇಗೌಡ ಗೋಷ್ಠಿಯಲ್ಲಿದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಏ. 7– ಮೈಸೂರಿನ ಎನ್.ಜೆ.ಎಸ್. ಚಾರಿಟೆಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘದ ವತಿಯಿಂದ ಏ. 11 ರಂದು ಬೆಳಗ್ಗೆ 9.30 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಮಂಡಿ ಮೊಹಲ್ಲಾದ ಕಬೀರ್ ರಸ್ತೆಯಲ್ಲಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ.9916155453 ಸಂಪರ್ಕಿಸಬಹುದು.

ಏ.10, 11ರಂದು ಮೈಸೂರಲ್ಲಿ ಕೆನರಾ ಬ್ಯಾಂಕ್ ನಿವೃತ್ತ ಅಧಿಕಾರಿಗಳ ಸಂಘದ ಸಮ್ಮೇಳನ

ಪಿಂಚಣಿ ಪರಿಷ್ಕರಣೆ ಬಗ್ಗೆ ವಿಶೇಷ ಚರ್ಚೆ



ಮೈಸೂರು, ಏ.7(ಪಿಎಂ)– ಕೆನರಾ ಬ್ಯಾಂಕ್ ನಿವೃತ್ತ ಅಧಿಕಾರಿಗಳ ಸಂಘದ 12ನೇ ದ್ವೈವಾರ್ಷಿಕ ಸಮ್ಮೇಳನ ಏ.10 ಮತ್ತು 11ರಂದು ಮೈಸೂರಿನಲ್ಲಿ ನಡೆಯಲಿದ್ದು, ಪಿಂಚಣಿ ಪರಿಷ್ಕರಿಸಬೇಕೆಂಬ ಪ್ರಮುಖ ಬೇಡಿಕೆ ಈಡೇರಿಸಿಕೊಳ್ಳುವ ಸಂಬಂಧ ಸಮ್ಮೇಳನದಲ್ಲಿ ಮಹತ್ವದ ಚರ್ಚೆ ನಡೆಯಲಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎ.ಎನ್.ಕೃಷ್ಣಮೂರ್ತಿ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಕುವೆಂಪುನಗರದ ಉದಯರವಿ ರಸ್ತೆಯಲ್ಲಿರುವ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಈ ಎರಡು ದಿನಗಳ ಸಮ್ಮೇಳನ ನಡೆಯಲಿದೆ. ದೇಶದ ವಿವಿಧ ಭಾಗಗಳಿಂದ ಸುಮಾರು 2 ಸಾವಿರ ಸಂಘದ ಸದಸ್ಯರು ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ಪಿಂಚಣಿ ಪರಿಷ್ಕರಣೆಯಾಬೇಕೆಂಬ ಬಗ್ಗೆ ವಿಶೇಷ ಚರ್ಚೆ ನಡೆಯಲಿದೆ ಎಂದರು.

ನಿವೃತ್ತ ಅಧಿಕಾರಿಗಳು ತಮ್ಮ ಅತ್ಯಲ್ಪ ಪಿಂಚಣಿಯಿಂದ ಆರೋಗ್ಯ ವಿಮಾ ಪ್ರೀಮಿಯಂ ಪಾವತಿಸಬೇಕಾದ ಪರಿಸ್ಥಿತಿ ಇದೆ. ಆರಂಭದಲ್ಲಿ 7 ಸಾವಿರ ರೂ. ಇದ್ದ ವಿಮಾ ಪ್ರೀಮಿಯಂ ಈಗ 48 ಸಾವಿರ ರೂ.ಗೆ ಏರಿಕೆಯಾಗಿದೆ. ಸಾಮಾನ್ಯ ಪಿಂಚಣಿದಾರರು ಮತ್ತು ಕುಟುಂಬ ಪಿಂಚಣಿದಾರರು ಇಬ್ಬರಿಗೂ ಒಂದೇ ವಿಮಾ ಪ್ರೀಮಿಯಂ ಮೊತ್ತವಿದೆ. ಕಡಿಮೆ ಪಿಂಚಣಿ ಪಡೆಯುವ ಕುಟುಂಬ ಪಿಂಚಣಿದಾರರು ವಿಮಾ ಪ್ರೀಮಿಯಂ ಮೊತ್ತ ಪಾವತಿಸಲಾಗದೇ ದುಸ್ಥಿತಿಯಲ್ಲಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಏ.10ರಂದು ಬೆಳಗ್ಗೆ 10ಕ್ಕೆ ಸಮ್ಮೇಳನದ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಎಐಬಿಪಿಎಆರ್‌ಸಿ ಅಧ್ಯಕ್ಷ ಕೆ.ವಿ.ಆಚಾರ್ಯ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಎಐಬಿಪಿಎಆರ್‌ಸಿ ಪ್ರಧಾನ ಕಾರ್ಯದರ್ಶಿ ಸುಪ್ರಿತ್ ಸರ್ಕಾರ್, ಕೆನರಾ ಬ್ಯಾಂಕ್ ಅಧಿಕಾರಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ರವಿಕುಮಾರ್, ಕೆನರಾ ಬ್ಯಾಂಕ್ ಮುಖ್ಯ ಪ್ರಧಾನ ವ್ಯವಸ್ಥಾಪಕ ಶಂಕರ್, ಪ್ರಧಾನ ವ್ಯವಸ್ಥಾಪಕ ಜಿ.ಎಸ್.ರವಿ ಸುಧಾಕರ್, ಎಐಬಿಪಿಎಆರ್‌ಸಿ ಸಲಹೆಗಾರ ಜಿ.ಡಿ.ನದಾಫ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಕೆನರಾ ಬ್ಯಾಂಕ್ ನಿವೃತ್ತ ಅಧಿಕಾರಿಗಳ ಸಂಘದ ಉಪಾಧ್ಯಕ್ಷ ಇ.ಸಂಪತ್‌ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು. ಸಂಘದ ಪದಾಧಿಕಾರಿಗಳಾದ ಎನ್.ಶ್ರೀಕಂಠಮೂರ್ತಿ, ಶಿವಪ್ರಸಾದ್, ಜಿ.ಅನಂತಯ್ಯ ಹಂಡೆ, ಡಿ.ಎ.ಸುರೇಶ್, ಪಿ.ವಿಠೋಬ ಗೋಷ್ಠಿಯಲ್ಲಿದ್ದರು.

ಆಯಿಷ್ ಟೆಕ್ನೀಷಿಯನ್ ಸಾವು

ಮೈಸೂರು, ಏ. 7(ಆರ್‌ಕೆ)– ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ (ಆಯಿಷ್) ಟೆಕ್ನೀಷಿಯನ್‌ವೊಬ್ಬರು ಸಂಶಯಾಸ್ಪದ ರೀತಿಯಲ್ಲಿ ಸಾವನ್ನಪ್ಪಿದ್ದಾರೆ.

ಸಂಸ್ಥೆಯ ಎಲೆಕ್ಟ್ರಾನಿಕ್ಸ್ ವಿಭಾಗದಲ್ಲಿ ಟೆಕ್ನೀಷಿಯನ್ ಆಗಿ ಸೇವೆ ಸಲ್ಲಿಸುತ್ತಿದ್ದ ಪ್ರಾಣೇಶ್(26) ಗುರುವಾರ ಸಾವನ್ನಪ್ಪಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ಮೂಲದವರಾದ ಪ್ರಾಣೇಶ್ ವಿಶೇಷ ಚೇತನರಾಗಿದ್ದು, ವಿಜಯಶ್ರೀಪುರದಲ್ಲಿ ಬಾಡಿಗೆಗೆ ಕೊಠಡಿಯಲ್ಲಿ ವಾಸವಾಗಿದ್ದರು. ಗುರುವಾರ ಬೆಳಗ್ಗೆ ಬಹಳ ಹೊತ್ತಿನವರೆಗೂ ಬಾಗಿಲು ತೆರೆಯದ ಕಾರಣ ನೆರೆಹೊರೆಯವರು ಗಮನಿಸಿದಾಗ ಪ್ರಾಣೇಶ್ ಅವರು ಮಲಗಿದ್ದಲ್ಲೇ ಸಾವನ್ನಪ್ಪಿರುವುದು ತಿಳಿಯಿತು. ಮಾಹಿತಿ ಬಂದ ತಕ್ಷಣ ಸ್ಥಳಕ್ಕೆ ಧಾವಿಸಿದ ಜಯಲಕ್ಷ್ಮೀಪುರಂ ಠಾಣೆ ಪೊಲೀಸರು ಮಹಜರು ನಡೆಸಿ ಯುಡಿಆರ್ ರೀತ್ಯಾ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಉಳ್ಳವರು ಇಲ್ಲದವರಿಗೆ ಸಹಾಯ ಮಾಡುವ ಮೂಲಕ ರಾಮರಾಜ್ಯದ ಕನಸು ನನಸಾಗಬೇಕು

- ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಕಿವಿಮಾತು
- ಶ್ರೀ ಕೃಷ್ಣಧಾಮದಲ್ಲಿ ಚಾತುರ್ಮಾಸ್ಯ ವ್ರತ ಸಂಬಂಧ ಪೂರ್ವಭಾವಿ ಸಭೆ



ಮೈಸೂರು, ಏ.7(ಎಂಕೆ)– ಶ್ರೀರಾಮ ಭಕ್ತಿ ಎಂದರೆ ದೇಶಭಕ್ತಿ, ರಾಮ ಸೇವೆಯೇ ದೇಶಸೇವೆ. ರಾಮ ರಾಜ್ಯದ ಕನಸು ನನಸಾಗಬೇಕಾದರೆ ಪ್ರತಿಯೊಬ್ಬರು ಕಷ್ಟದಲ್ಲಿದ್ದವರಿಗೆ ಸಹಾಯ ಮಾಡಬೇಕು ಎಂದು ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ನಗರದ ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ತಮ್ಮ 36ನೇ ಚಾತುರ್ಮಾಸ್ಯ ವ್ರತ ಆಚರಣೆ ಸಂಬಂಧ ನಡೆದ ಪೂರ್ವಭಾವಿ ಸಭೆಯಲ್ಲಿ ಆಶೀರ್ವಚನ ನೀಡಿದ ಅವರು, ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣ ಕಾರ್ಯ ನಡೆಯುತ್ತಿದ್ದು, ಮುಂದಿನ ಮಕರ ಸಂಕ್ರಾಂತಿ ಮುಗಿಯುವುದರೊಳಗೆ ಪ್ರಾಣ ಪ್ರತಿಷ್ಠಾಪನೆ ಮಾಡಲಾಗುವುದು. ಇನ್ನೂ ಮುಂದೆ ರಾಮರಾಜ್ಯದ ಕನಸು ನನಸಾಗಬೇಕಿದೆ. ರಾಮ ರಾಜ್ಯವೆಂದರೆ ಪ್ರತಿಯೊಬ್ಬರು, ಸುಖ–ನೆಮ್ಮದಿಯಿಂದ ಜೀವನ ಸಾಗಿಸುವುದು. ಈ ನಿಟ್ಟಿನಲ್ಲಿ ಉಳ್ಳವರು ಇಲ್ಲದವರಿಗೆ ಸಹಾಯ ಮಾಡುವ ಮೂಲಕ ರಾಮರಾಜ್ಯದ ಕನಸನ್ನು ನನಸು ಮಾಡಬೇಕು. ಎಲ್ಲರೂ ಶ್ರೀರಾಮನಂತಾಗಬೇಕು. ರಾಮನ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ರಾಮ ದೇವರ ಹೆಸರಿನಲ್ಲಿ ಸಾಮರ್ಥ್ಯವಿದ್ದರು ಅಶಕ್ತರಿಗೆ ಸಹಾಯ ಮಾಡಿ. ಮನೆ ಇಲ್ಲದವರಿಗೆ ಮನೆ, ಶಿಕ್ಷಣ ವಂಚಿತರಿಗೆ ಉಚಿತ ಶಿಕ್ಷಣ, ಆರೋಗ್ಯ ಸೇವೆ ನೀಡುವ ಮೂಲಕ ಭದ್ರ ನೆಲೆ ಮಾಡುವುದು ದೇಶ ಸೇವೆ ಮಾಡಿದಂತೆ. ಈ ಚಿಂತನೆ ದೇಶದ ಉದ್ದಗಲಕ್ಕೂ ವ್ಯಾಪಿಸಬೇಕು ಎಂದು ತಿಳಿಸಿದರು.

ಅಹಿಂಸೆ, ದಯೆ ಚಾತುರ್ಮಾಸ್ಯ ವ್ರತದ ಉದ್ದೇಶ: ಯತಿಗಳು, ಗೃಹಸ್ಥರು ಸೇರಿ ಮಾಡುವ ವ್ರತವೇ ಚಾತುರ್ಮಾಸ್ಯ ವ್ರತ. ಆಸ್ತಿಕರು ಬದುಕಿನಲ್ಲಿ ಯಶಸ್ಸಿನ ಜೊತೆಗೆ ಭಗವಂತನ ಅನುಗ್ರಹಕ್ಕಾಗಿ ಪ್ರಾರ್ಥನೆ ಸಲ್ಲಿಸುತ್ತಾರೆ. ಭಗವಂತನ ಆರಾಧನೆಗೆ ನಾನಾ ಬಗೆಯ ಪುಷ್ಪಗಳನ್ನು ಬಳಸುತ್ತಾರೆ. ಆದರೆ ನಿಜವಾಗಿ ಬೇಕಾಗಿರುವುದು ಭಾವ ಪುಷ್ಪಗಳು. ಅಂತರಂಗದಲ್ಲಿ ಹುಟ್ಟಿ ಬರುವ ಭಾವ ಪುಷ್ಪಗಳು ಭಗವಂತನಿಗೆ ಅಚ್ಚುಮೆಚ್ಚು. ಅದರಲ್ಲಿ ಅಹಿಂಸೆ ಪ್ರಥಮ ಪುಷ್ಪವಾಗಿದೆ. ಸರ್ವಭೂತ ದಯೆ ಮತ್ತೊಂದು ಪುಷ್ಪವಾಗಿದೆ. ಈ ರೀತಿಯ ಭಾವ ಪುಷ್ಪಗಳಿಂದ ಆರಾಧನೆ ಮಾಡಿದರೆ ದೇವರು ಸಂಪನ್ನರಾಗುತ್ತಾರೆ. ಅಹಿಂಸೆ, ದಯೆ ಎಂಬಿತ್ಯಾದಿ ಭಾವ ಪುಷ್ಪಗಳೊಂದಿಗೆ ಚಾತುರ್ಮಾಸ್ಯ ವ್ರತ ನಡೆಯಲಿದೆ ಎಂದರು.

ಎಲ್ಲರೊಡಗೂಡಿ ಚಾತುರ್ಮಾಸ್ಯ ವ್ರತ ಆಚರಣೆ: ದೇಶ ಸೇವೆಯ ಮೂಲಕ ದೇವರ ಸೇವೆ ನಡೆಯಬೇಕು. ಈ ನಿಟ್ಟಿನಲ್ಲಿ ಎಲ್ಲರ ಸಹಕಾರವನ್ನು ಬಯಸುತ್ತೇವೆ. ಬೆಂಗಳೂರಿನ ಡಾ.ನಾಯಕ್ ಎಂಬುವವರು ತಮ್ಮ ಆಸ್ಪತ್ರೆಯನ್ನು ಮಠಕ್ಕೆ ಬಿಟ್ಟುಕೊಟ್ಟಿದ್ದಾರೆ ಎಂದು ಶ್ಲಾಘಿಸಿದ ಶ್ರೀಗಳು, ಎಲ್ಲರೊಡಗೂಡಿ ಸಾಮಾಜಿಕ ಸೇವೆಗಳ ಮೂಲಕ ಚಾತುರ್ಮಾಸ್ಯ ವ್ರತ ಆಚರಣೆ ನಡೆಯಬೇಕು ಎಂದು ತಿಳಿಸಿದರು. ಇದೇ ವೇಳೆ ಸಭೆಯಲ್ಲಿ ಭಾಗವಹಿಸಿದ್ದ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಮುಖಂಡರು ಚಾತುರ್ಮಾಸ್ಯ ವ್ರತ ಸಂಬಂಧ ಜವಾಬ್ದಾರಿಗಳನ್ನು ವಹಿಸಿಕೊಂಡರು.

3 ತಿಂಗಳ ಕಾಲ ಚಾತುರ್ಮಾಸ್ಯ ವ್ರತ ಆಚರಣೆ...

ಆಷಾಢ ಶುಕ್ಲ ಪೂರ್ಣಿಮೆ ಜು.3 ರಿಂದ ಭಾದ್ರಪದ ಶುಕ್ಲ ಚತುರ್ದಶಿ ಸೆ.28 ವರೆಗೆ ಒಟ್ಟು 90 ದಿನಗಳ ಕಾಲ ಮೈಸೂರಿನ ಶ್ರೀ ಕೃಷ್ಣಧಾಮದಲ್ಲಿ ಸಾಂಸ್ಕೃತಿಕ ಹಾಗೂ ಸಾಮಾಜಿಕ ಸೇವಾ ಕಾರ್ಯಕ್ರಮಗಳೊಂದಿಗೆ ಚಾತುರ್ಮಾಸ್ಯ ವ್ರತ ನಡೆಯಲಿದೆ. ಶ್ರೀ ರಾಮ ಧಾಮ, ವಿಠ್ಠಲಧಾಮ, ಶ್ರೀ ಕೃಷ್ಣಧಾಮ, ವೆಂಕಟೇಶ್ವರ ಧ್ಯಾನಕೇಂದ್ರ, ಶ್ರೀ ಮದುತ್ತರಾದಿಮಠ, ಧನ್ವಂತರಿ ದೇವಸ್ಥಾನ, ವೆಂಕಟಾಚಲ ಧಾಮ, ತೊಣಚಿಕೊಪ್ಪಲು ರಾಯರ ಮಠ, ಸುಬ್ರಾಯನಕೆರೆ ರಾಯರ ಮಠ, ಕೃಷ್ಣಮೂರ್ತಿಪುರಂ ರಾಯರ ಮಠ, ಜಯಲಕ್ಷ್ಮಿಪುರಂ ರಾಯರ ಮಠ ಸುಬ್ರಾಯ ದಾಸರ ಶ್ರೀನಿವಾಸ ದೇವರ ಗುಡಿ, ವ್ಯಾಸತೀರ್ಥ ವಿದ್ಯಾಪೀಠ ವ್ಯಾಸರಾಜ ಮಠ ಮುಂತಾದ ಧಾರ್ಮಿಕ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಯವರ 36ನೇ ಚಾತುರ್ಮಾಸ್ಯ ವ್ರತ ನಡೆಯಲಿದೆ.

ಗಣಿಗ ರವಿಕುಮಾರ್‌ಗೆ ಮಂಡ್ಯ 'ಕೈ' ಟಿಕೆಟ್ ಘೋಷಣೆ ಹಿನ್ನಲೆ

ಮಂಡ್ಯ ಕಾಂಗ್ರೆಸ್‌ನಲ್ಲಿ ಭುಗಿಲೆದ್ದ ಬಂಡಾಯ, ಪ್ರತ್ಯೇಕ ಬಣಗಳಿಂದ ಸಭೆ

- ರಾಧಾಕೃಷ್ಣ ನಿವಾಸದ ಎದುರು ಬೆಂಬಲಿಗರ ಪ್ರತಿಭಟನೆ
- ಸಹಕಾರ ಕೇಳಲು ಬಂದ ಗಣಿಗ ರವಿ ಕಾರಿಗೆ ಮುತ್ತಿಗೆ
- ಅತ್ತ ಆತ್ಮಾನಂದ ನಿವಾಸದಲ್ಲೂ ಅತೃಪ್ತರ ಸರಣಿ ಸಭೆ
- ಪುನರ್ ಪರಿಶೀಲನೆಗೆ ರಾಧಾಕೃಷ್ಣ, ಆತ್ಮಾನಂದ ಬಣ ಒತ್ತಾಯ
- ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಚುನಾವಣೆ ಮಾಡುವೆ: ರವಿ



ಮಂಡ್ಯ, ಏ.7– ಕಳೆದ 2018ರ ವಿಧಾನಸಭೆ ಚುನಾವಣೆಯ ಪರಾಜಿತ ಅಭ್ಯರ್ಥಿ ಗಣಿಗ ರವಿಕುಮಾರ್‌ಗೆ ಕಾಂಗ್ರೆಸ್ ಟಿಕೆಟ್ ಘೋಷಣೆ ಮಾಡಿರುವ ಹಿನ್ನಲೆಯಲ್ಲಿ ಪ್ರಬಲ ಟಿಕೆಟ್ ಆಕಾಂಕ್ಷಿ ಕೀಲಾರ ರಾಧಾಕೃಷ್ಣ, ಬೆಂಬಲಿಗರು ಹಾಗೂ ಮಾಜಿ ಸಚಿವ ಎಂ.ಎಸ್.ಆತ್ಮಾನಂದ ಬಣ ಬಂಡಾಯವೆದ್ದಿದೆ. ಕೀಲಾರ ರಾಧಾಕೃಷ್ಣ ನಿವಾಸದ ಎದುರು ಬೆಂಬಲಿಗರು ಭಾರೀ ಪ್ರತಿಭಟನೆ ನಡೆಸಿದರೆ, ಆತ್ಮಾನಂದ ನಿವಾಸದಲ್ಲಿ 9 ಮಂದಿ ಟಿಕೆಟ್ ಆಕಾಂಕ್ಷಿಗಳು ಸರಣಿ ಸಭೆ ನಡೆಸಿದ್ದಾರೆ. ಜೊತೆಗೆ ಟಿಕೆಟ್ ಬದಲಿಸಬೇಕೆಂದು ಪಟ್ಟು ಹಿಡಿದಿದ್ದು, ಇತ್ತ ಅಭ್ಯರ್ಥಿ ಗಣಿಗ ರವಿಕುಮಾರ್ ಮಾತ್ರ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಚುನಾವಣೆ ಮಾಡುವುದಾಗಿ ತಿಳಿಸಿದ್ದಾರೆ.

ಗುರುವಾರ ಕಾಂಗ್ರೆಸ್ ಪ್ರಕಟಿಸಿದ 2ನೇ ಪಟ್ಟಿಯಲ್ಲಿ ಮಂಡ್ಯ ವಿಧಾನಸಭಾ ಕ್ಷೇತ್ರದಿಂದ ಗಣಿಗ ರವಿಕುಮಾರ್‌ಗೆ ಟಿಕೆಟ್ ಘೋಷಣೆ ಮಾಡಲಾಗಿತ್ತು. ಆದರೆ ರವಿ ಜೊತೆಗೆ ಕೆಪಿಸಿಸಿಗೆ ಅರ್ಜಿ ಸಲ್ಲಿಸಿದ್ದ 15 ಮಂದಿ ಪೈಕಿ ಹಲವರು ಕಾಂಗ್ರೆಸ್ ಹೈಕಮಾಂಡ್ ನಿರ್ಧಾರ ಪ್ರಶ್ನಿಸಿ ಇಂದು ಬಂಡಾಯವೆದ್ದಿದ್ದಾರೆ. ನಿನ್ನೆಯೇ ಟಿಕೆಟ್ ಆಕಾಂಕ್ಷಿ ರಾಧಾಕೃಷ್ಣ ಬೆಂಬಲಿಗರು ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದ್ದರು.

ರಾಧಾಕೃಷ್ಣ ನಿವಾಸದ ಎದುರು ಜಮಾಯಿಸಿದ ಬೆಂಬಲಿಗರು: ಶುಕ್ರವಾರ ಬೆಳಗ್ಗೆ ನಗರದ ಬಂದೀಗೌಡ ಬಡಾವಣೆಯಲ್ಲಿರುವ ಕೀಲಾರ ರಾಧಾಕೃಷ್ಣ ನಿವಾಸದ ಎದುರು ಜಮಾಯಿಸಿದ ನೂರಾರು ಬೆಂಬಲಿಗರು, ಕಾಂಗ್ರೆಸ್ ಹೈಕಮಾಂಡ್ ನಿರ್ಧಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ಈ ವೇಳೆ ಮಾತನಾಡಿದ ಹತ್ತಕ್ಕೂ ಹೆಚ್ಚು ಬೆಂಬಲಿಗರು, ಕಾಂಗ್ರೆಸ್ ಹೈಕಮಾಂಡ್ ಟಿಕೆಟ್ ವಿಚಾರದಲ್ಲಿ ಪುನರ್ ಪರಿಶೀಲಿಸಬೇಕು. ಏಕಾಏಕಿ ಟಿಕೆಟ್ ಘೋಷಣೆ ಮಾಡಲಾಗಿದೆ. ಜೊತೆಗೆ ಕ್ಷೇತ್ರದಲ್ಲಿ ಜೆಡಿಎಸ್ ಹಾಗೂ ಕಾಂಗ್ರೆಸ್‌ನ ಹಲವು ಮುಖಂಡರು ರಾಧಾಕೃಷ್ಣ ಪರ ದುಡಿಯಲು ಸಿದ್ಧರಿದ್ದಾರೆ. ಹೀಗಾಗಿ ಅವರಿಗೆ ಟಿಕೆಟ್ ಕೊಡಬೇಕೆಂದು ಒತ್ತಾಯಿಸಿದರು.

ಕಾಂಗ್ರೆಸ್ ಮುಖಂಡ ಕೀಲಾರ ರಾಧಾಕೃಷ್ಣ ಮಾತನಾಡಿ, ನಿಮ್ಮೆಲ್ಲರ ಬೆಂಬಲಕ್ಕೆ ನಾನು ಸದಾ ಚಿರಋಣಿ. ನಾನು ಹಲವು ವರ್ಷಗಳಿಂದ ಕಾಂಗ್ರೆಸ್ ಪಕ್ಷಕ್ಕಾಗಿ ದುಡಿದಿದ್ದೇನೆ. ಈ ಬಾರಿ ನನಗೆ ಟಿಕೆಟ್ ಸಿಗುವ ವಿಶ್ವಾಸವಿತ್ತು. ಆದರೆ ಟಿಕೆಟ್ ರವಿಕುಮಾರ್‌ಗೆ ಕೊಟ್ಟಿರುವುದು ಪಕ್ಷದ ನಿರ್ಧಾರ. ನಾನು ಪಕ್ಷದ ನಿರ್ಧಾರ ಪ್ರಶ್ನಿಸುವುದಿಲ್ಲ. ಆದರೆ ನಾನು ಸಹ ಆಕಾಂಕ್ಷಿಯಾಗಿದ್ದೆ. ಈ ಬಗ್ಗೆ ನಾನು ನಿಮ್ಮೊಂದಿಗೆ ಸಭೆ ನಡೆಸಿ ಅಂತಿಮ ನಿರ್ಧಾರ ಕೈಗೊಳ್ಳುವೆ ಎಂದರು.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನನ್ನ ಬೆಂಬಲಿಗರು ತೆಗೆದುಕೊಳ್ಳುವ ನಿರ್ಧಾರಕ್ಕೆ ನಾನು ಬದ್ಧ. ಬೆಂಬಲಿಗರು ಪಕ್ಷೇತರವಾಗಿ ಸ್ಪರ್ಧೆ ಮಾಡಿ ಎಂದರೆ, ಆ ಬಗ್ಗೆಯೂ ಯೋಚಿಸಬೇಕಾಗುತ್ತದೆ. ಸದ್ಯ ಕಾಂಗ್ರೆಸ್ ನಾಯಕರು ನನ್ನನ್ನು ಕರೆದು ಮಾತುಕತೆ ನಡೆಸಲಿದ್ದಾರೆ. ಆಗ ನನ್ನ ನಿರ್ಧಾರ ತಿಳಿಸುತ್ತೇನೆ. ರಾಜ್ಯ ನಾಯಕರು ಏನು ತೀರ್ಮಾನ ಕೈಗೊಳ್ಳುತ್ತಾರೆ ಎಂಬುದನ್ನು ಕಾದು ನೋಡಬೇಕೆಂದರು.

ಆತ್ಮಾನಂದ ಮನೆಯಲ್ಲಿ ಸರಣಿ ಸಭೆ: ಮತ್ತೋರ್ವ ಟಿಕೆಟ್ ಆಕಾಂಕ್ಷಿ ಮಾಜಿ ಸಚಿವ ಎಂ.ಎಸ್.ಆತ್ಮಾನಂದ ನಿವಾಸದಲ್ಲಿ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದ ಮಾಜಿ ಶಾಸಕ ಹೆಚ್.ಬಿ.ರಾಮು, ಹಿರಿಯ ಕಾಂಗ್ರೆಸ್ಸಿಗರಾದ ಸಿದ್ಧಾರೂಢ ಸತೀಶ್ ಗೌಡ, ಹಾಲಹಳ್ಳಿ ರಾಮಲಿಂಗಯ್ಯ, ಬಿ.ಸಿ.ಶಿವಾನಂದ, ಅಮರಾವತಿ ಚಂದ್ರ ಶೇಖರ್, ಹನಕೆರೆ ಶಿವರಾಮು, ಹೊಸಹಳ್ಳಿ ಶಿವು ಸೇರಿದಂತೆ ಹಲವರು ಸಭೆ ನಡೆಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಟಿಕೆಟ್ ಆಕಾಂಕ್ಷಿ ಅಮರಾವತಿ ಚಂದ್ರಶೇಖರ್, ಗಣಿಗ ರವಿಕುಮಾರ್ ಒಳ್ಳೆಯ ಅಭ್ಯರ್ಥಿ. ಕಳೆದ ಬಾರಿ ಸ್ಪರ್ಧಿಸಿ ಸೋತಿದ್ದಾರೆ. ಆದರೆ ಈ ಬಾರಿ ಅವರಿಗೆ ಗೆಲ್ಲುವ ಅವಕಾಶವಿದೆ. ಆದರೆ ಕಳೆದ ಬಾರಿ ಚುನಾವಣೆ ಸಮಯದಲ್ಲಿ ಬೂತ್‌ಗಳಿಗೆ ಚುನಾವಣಾ ಖರ್ಚಿಗೂ ಹಣ ಕೊಟ್ಟಿರಲಿಲ್ಲ. ಮತದಾನದ ಸಂದರ್ಭ ಕಾರ್ಯಕರ್ತರ ಕೈಗೆ ಸಿಕ್ಕಿರಲಿಲ್ಲ. ಈ ನಿಟ್ಟಿನಲ್ಲಿ ಈ ಬಾರಿಯೂ ಹಾಗಾದರೆ ಯಾರು ಹೊಣೆ ಅದಕ್ಕಾಗಿ ಅಭ್ಯರ್ಥಿ ಬದಲಿಸಿ ಎಂದರು.

ರಾಧಾಕೃಷ್ಣ ಮನೆಯಲ್ಲಿ ಹೈಡ್ರಾಮಾ: ಒಂದೆಡೆ ಕೀಲಾರ ರಾಧಾಕೃಷ್ಣ ನಿವಾಸಕ್ಕೆ ಬೆಂಬಲಿಗರು ಮುತ್ತಿಗೆ ಹಾಕಿ ಚುನಾವಣೆಯಲ್ಲಿ ಸ್ಪರ್ಧಿಸಬೇಕೆಂದು ಒತ್ತಡ ಹೇರಿ ಬಳಿಕ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಲು ತೆರಳಿದಾಗ ಇತ್ತ ಅಭ್ಯರ್ಥಿ ಗಣಿಗ ರವಿ, ರಾಧಾಕೃಷ್ಣ ನಿವಾಸಕ್ಕೆ ಆಗಮಿಸಿದರು.

ಈ ವೇಳೆ ಗಣಿಗ ರವಿಕುಮಾರ್ ರಾಧಾಕೃಷ್ಣ ಅವರ ಕಾಲಿಗೆ ಬಿದ್ದು ಆಶೀರ್ವಾದ ಪಡೆದು, ಹಾರ ಹಾಕಿ, ಸಿಹಿ ನೀಡಿದರು. ವಿಷಯ ತಿಳಿದು ಕಾಂಗ್ರೆಸ್ ಕಚೇರಿಯಿಂದ ಮತ್ತೆ ರಾಧಾಕೃಷ್ಣ ನಿವಾಸಕ್ಕೆ ಆಗಮಿಸಿದ ಬೆಂಬಲಿಗರು ಕಾಂಗ್ರೆಸ್ ವಿರುದ್ಧ ಘೋಷಣೆ ಕೂಗಿ, ಅಭ್ಯರ್ಥಿ ಬದಲಿಸಿ ಎಂದು ಘೋಷಣೆ ಮೊಳಗಿಸಿದರು. ಈ ಸಂದರ್ಭ ಗಣಿಗ ರವಿ ರಾಧಾಕೃಷ್ಣ ಜೊತೆಗೆ ಚರ್ಚಿಸಿ, ವಾಪಸ್ಸಾಗುವಾಗ ರವಿ ಕಾರಿಗೆ ಮುತ್ತಿಗೆ ಹಾಕಿದರು. ಆಗ ಪೊಲೀಸರು ಮಧ್ಯೆ ಪ್ರವೇಶಿಸಿ, ಗಣಿಗ ರವಿಕುಮಾರ್‌ರನ್ನು ಅಲ್ಲಿಂದ ಕಳುಹಿಸಿಕೊಟ್ಟರು.

ಒಂದು ಮಾಹಿತಿಯ ಪ್ರಕಾರ ಸ್ವತಃ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರೇ ಮಂಡ್ಯಗೆ ಆಗಮಿಸಿ, ಬಂಡಾಯಗಾರರ ಜೊತೆಗೆ ಮಾತುಕತೆ ನಡೆಸಿ, ಬಂಡಾಯ ಶಮನಕ್ಕೆ ಮದ್ದು ಅರೆಯಬಹುದೆಂಬ ಮಾಹಿತಿ ಲಭ್ಯವಾಗಿದೆ.

ಯಾರಿಗೆ ಟಿಕೆಟ್ ನೀಡಿದ್ದರೂ ಅವರ ಪರ ದುಡಿಯುತ್ತಿದ್ದೆ: ಗಣಿಗ



ಮಂಡ್ಯ: ನನ್ನ ಮೇಲೆ ವಿಶ್ವಾಸವಿಟ್ಟು ಕಾಂಗ್ರೆಸ್ ಹೈಕಮಾಂಡ್ ನನಗೆ ಮತ್ತೊಮ್ಮೆ ಟಿಕೆಟ್ ನೀಡಿದೆ. ಇದಕ್ಕೆ ನಾನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖಂಡ ರಾಹುಲ್ ಗಾಂಧಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಜೊತೆಗೆ ನನ್ನನ್ನು ಬಿಟ್ಟು ಉಳಿದ 15 ಮಂದಿ ಪೈಕಿ ಯಾರಿಗೆ ಟಿಕೆಟ್ ನೀಡಿದ್ದರೂ, ನಾನು ಅವರ ಪರ ದುಡಿಯುತ್ತಿದೆ ಎಂದು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಗಣಿಗ ರವಿಕುಮಾರ್ ಹೇಳಿದರು.

ನಗರದ ಬಂದೀಗೌಡ ಬಡಾವಣೆಯಲ್ಲಿರುವ ತಮ್ಮ ನಿವಾಸದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣೆಗೆ ಒಬ್ಬರಿಗೆ ಟಿಕೆಟ್ ನೀಡಿದಾಗ ಮತ್ತೊಬ್ಬರು ಮುನಿಸಿಕೊಳ್ಳುವುದು. ಅವರ ಬೆಂಬಲಿಗರು ಘೋಷಣೆ ಕೂಗುವುದು ಸಹಜ. ಅದನ್ನು ದೊಡ್ಡದು ಮಾಡುವ ಅಗತ್ಯವಿಲ್ಲ. ಈಗಾಗಲೇ ನಾನು 15 ಮಂದಿ ಟಿಕೆಟ್ ಆಕಾಂಕ್ಷಿಗಳ ಪೈಕಿ ಕೀಲಾರ ರಾಧಾಕೃಷ್ಣ, ಅಸಾದುಲ್ಲಾ ಖಾನ್ ಸೇರಿದಂತೆ ಹಲವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದಿದ್ದೇನೆ. ಮುಂದೆ ಆತ್ಮಾನಂದ, ಅಮರಾವತಿ ಚಂದ್ರಶೇಖರ್ ಸೇರಿದಂತೆ ಎಲ್ಲರನ್ನು ಭೇಟಿ ಮಾಡಿ ಆಶೀರ್ವಾದ ಪಡೆಯುವೆ ಎಂದರು.

ಟಿಕೆಟ್ ಆಕಾಂಕ್ಷಿಗಳಾದ ಎಲ್ಲರೂ ಪ್ರಬಲರೇ. ಎಲ್ಲರ ಹಿಂದೆ ತನ್ನದೇ ಆದ ಓಟ್ ಬ್ಯಾಂಕ್ ಇದೆ. ಯಾರ ಶಕ್ತಿಯೂ ಕಡಿಮೆ ಇಲ್ಲ. ರಾಧಾಕೃಷ್ಣ, ಅಮರಾವತಿ ಚಂದ್ರಶೇಖರ್ ಯಾರಿಗೆ ಟಿಕೆಟ್ ಸಿಕ್ಕಿದ್ದರೂ, ಸಂತೋಷದಿಂದ ಅವರ ಪರ ದುಡಿಯುತ್ತಿದ್ದೆ. ಆದರೆ ಹೈಕಮಾಂಡ್ ನನಗೆ ಟಿಕೆಟ್ ನೀಡಿದೆ. ಎಲ್ಲರೂ ಒಗ್ಗಟ್ಟಿನಿಂದ ನನಗೆ ಬೆಂಬಲ ನೀಡಿದರೆ ನಾನು ಈ ಬಾರಿ ಗೆದ್ದೇ ಗೆಲ್ಲುತ್ತೇನೆ ಎಂದು ಹೇಳಿದರು.

ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸೇರಿದಂತೆ ಎಲ್ಲರ ಸರ್ವೆಯಲ್ಲಿ ನನ್ನ ಹೆಸರೇ ಮುಂಚೂಣಿಯಲ್ಲಿದೆ. ಕೋವಿಡ್ ಸಂದರ್ಭ ಜನರ ಮಧ್ಯೆ ಇದ್ದು, ಕ್ಷೇತ್ರದ ಮತದಾರರು ಕಷ್ಟ ಎಂದಾಗ ಅವರ ಪರ ನಿಂತಿದ್ದೇನೆ. ಈ ನಿಟ್ಟಿನಲ್ಲಿ ನನಗೆ ಟಿಕೆಟ್ ಸಿಕ್ಕಿದೆ. ನಾನು ಯಾರ ಬಗ್ಗೆಯೂ ಮಾತನಾಡುವುದಿಲ್ಲ. ಜನ ಈ ಬಾರಿ ನನ್ನ ಕೈ ಹಿಡಿಯಲಿದ್ದಾರೆ ಎಂಬ ವಿಶ್ವಾಸವಿದೆ ಎಂದರು.

ಕಳೆದ ಬಾರಿ ಚುನಾವಣೆ ಸಮೀಪಿಸುತ್ತಿದ್ದಂತೆ ಕ್ಷೇತ್ರದಿಂದ ಪಲಾಯನ ಮಾಡಿದ್ದು ಎಂದು ನನ್ನ ವಿರುದ್ಧ ಆರೋಪ ಮಾಡುತ್ತಿದ್ದಾರೆ ನಾನು ಅಂದು ಮತದಾನ ಮುಗಿಯುವವರೆಗೂ ಕ್ಷೇತ್ರದಲ್ಲೇ ಇದ್ದೆ. ನನ್ನ ಬಗ್ಗೆ ಮಾಡಿರುವ ಆರೋಪ ಶುದ್ಧ ಸುಳ್ಳು. ನನ್ನ ಬಗ್ಗೆ ಎಲ್ಲಾ ರೀತಿಯ ಮಾಹಿತಿ ಪಡೆದುಕೊಂಡೆ ರಾಜ್ಯ ಕಾಂಗ್ರೆಸ್ ನನಗೆ ಟಿಕೆಟ್ ಕೊಡಿಸಿದೆ. ಜಿಲ್ಲಾ ಕಾಂಗ್ರೆಸ್ ನನ್ನ ಪರ ಇದ್ದು, ಎಲ್ಲಾ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಚುನಾವಣೆ ಎದುರಿಸುವೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ನಹೀಂ, ವಿಜಯ್‌ಕುಮಾರ್, ರುದ್ರಪ್ಪ ಇತರರಿದ್ದರು.

ಚಿಕ್ಕರಸಿನಕೆರೆ ಬಸಪ್ಪನ ಮೊರೆ ಹೋದ ರೋಹಿಣಿ ಸಿಂಧೂರಿ



ಭಾರತೀನಗರ, ಏ.7– ಇಲ್ಲಿಗೆ ಸಮೀಪದ ಚಿಕ್ಕರಸಿನಕೆರೆ ಕಾಲಭೈರವೇಶ್ವರ ದೇವಾಲಯದ ಬಸಪ್ಪನ ಬಳಿ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಇಷ್ಟಾರ್ಥ ನೆರವೇರಲು ಪಾದ ಕೇಳಿದ್ದಾರೆ.

ಇತಿಹಾಸ ಪ್ರಸಿದ್ಧ ಚಿಕ್ಕರಸಿನಕೆರೆ ಬಸಪ್ಪ ಇಷ್ಟಾರ್ಥ ಸಿದ್ದಿಗೆ ಪಾದ ಕೊಟ್ಟರೆ ಅಂದುಕೊಂಡ ಕೆಲಸ ನೆರವೇರಲಿದೆ ಎಂಬುದು ನಂಬಿಕೆ. ಈ ಹಿನ್ನಲೆಯಲ್ಲಿ ರೋಹಿಣಿ ಸಿಂಧೂರಿ ಶುಕ್ರವಾರ ಚಿಕ್ಕರಸಿನಕೆರೆ ಕಾಲಭೈರವೇಶ್ವರ ದೇಗುಲಕ್ಕೆ ಭೇಟಿ ನೀಡಿ, ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ರೋಹಿಣಿ ಇಷ್ಟಾರ್ಥ ನೆರವೇರಲು ಪಾದ ಕೇಳಲು ಬಸಪ್ಪನ ಮುಂದೆ ಕುಳಿತರು. ಆದರೆ 10 ನಿಮಿಷ ಕುಳಿತರೂ ಬಸಪ್ಪ ಪಾದ ನೀಡಲಿಲ್ಲ. ಬಳಿಕ ರೋಹಿಣಿ ಸಿಂಧೂರಿ ಮನಸ್ಸಿನಲ್ಲಿ ಇಷ್ಟಾರ್ಥ ಸಿದ್ಧಿಸುವಂತೆ ಬೇಡಿಕೊಂಡು ಪಾದ ಕೇಳಿದರು. ಈ ವೇಳೆ ಬಸಪ್ಪ ಪಾದ ನೀಡಿ ಆಶೀರ್ವದಿಸಿದ.

ಬಳಿಕ ಮಾತನಾಡಿದ ರೋಹಿಣಿ, ಇಷ್ಟಾರ್ಥ ಸಿದ್ಧಿಗಾಗಿ ದೇವಾಲಯಕ್ಕೆ ಆಗಮಿಸಿ ಬಸವನಲ್ಲಿ ಪ್ರಾರ್ಥಿಸಿದ್ದೇನೆ. ಮುಂಬರುವ ದಿನಗಳಲ್ಲಿ ದೇವಾಲಯಕ್ಕೆ ಆಗಮಿಸಿ ಕೈಲಾಸ ಸೇವೆ ಮಾಡುವುದಾಗಿ ತಿಳಿಸಿದರು. ಇತ್ತೀಚೆಗೆ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಹಾಗೂ ಐಪಿಎಸ್ ಅಧಿಕಾರಿ ರೂಪಾ ಮುದ್ಗಲ್ ನಡುವೆ ಬಹಿರಂಗ ಆರೋಪ–ಪ್ರತ್ಯಾರೋಪ ನಡೆದಿತ್ತು. ಈ ವಿಚಾರವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ರೋಹಿಣಿ ಹಾಗೂ ರೂಪಾರನ್ನು ಸ್ಥಳ ತೋರಿಸದೇ ವರ್ಗಾವಣೆ ಮಾಡಿತ್ತು.

ಏ.10ರಿಂದ ಬೇಸಿಗೆ ಶಿಬಿರ

ಮಂಡ್ಯ, ಏ.7– ರಾಜ್ಯ ಬಾಲ ಭವನ ಸೊಸೈಟಿ, ಜಿಲ್ಲಾಡಳಿತ, ಜಿಪಂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ 2023–24ನೇ ಸಾಲಿನಲ್ಲಿ 6 ರಿಂದ 16 ವರ್ಷ ವಯಸ್ಸಿನೊಳಗಿನ ಮಕ್ಕಳಿಗೆ ಉಚಿತ ಬೇಸಿಗೆ ಶಿಬಿರವನ್ನು ಏ.10 ರಿಂದ 29 ರವರೆಗೆ ಜಿಲ್ಲಾ ಬಾಲ ಭವನದಲ್ಲಿ ಆಯೋಜಿಸಲಾಗಿದೆ. ಆಸಕ್ತ ಮಕ್ಕಳು ಏ.8ರೊಳಗೆ ಜಿಲ್ಲಾ ಕಾರ್ಯಕ್ರಮ ಸಂಯೋಜಕರಾದ ಪಿ.ಕೋಮಲ ಅವರನ್ನು ಸಂಪರ್ಕಿಸಬಹುದು. ಮಾಹಿತಿಗಾಗಿ ಮೊ.ನಂ: 9036801065 ಅನ್ನು ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಾಖಲೆ ಇಲ್ಲದ 3.85 ಲಕ್ಷ ರೂ. ವಶ



ಕೆ.ಆರ್.ಪೇಟೆ, ಏ.7– ದಾಖಲೆ ಇಲ್ಲದೇ ಸಾಗಿಸುತ್ತಿದ್ದ 3.85 ಲಕ್ಷ ರೂ.ಗಳನ್ನು ತಾಲೂಕಿನ ಸಿಂಗನಹಳ್ಳಿ ಚೆಕ್‌ಪೋಸ್ಟ್‌ನಲ್ಲಿ ಚುನಾವಣಾಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.


ತಾಲೂಕಿನ ಕಿಕ್ಕೇರಿ ಹೋಬಳಿ ಬಸವನಹಳ್ಳಿ ನಿವಾಸಿಗಳಾದ ಶಿವಣ್ಣ ಹಾಗೂ ರಾಜು ಅವರು ಕೆ.ಆರ್.ನಗರ ತಾಲೂಕಿನ ಭೇರ್ಯ ಕಡೆಯಿಂದ ಬೈಕ್‌ನಲ್ಲಿ ಆಗಮಿಸುತ್ತಿದ್ದರು. ಈ ವೇಳೆ ಸಿಂಗನಹಳ್ಳಿ ಚೆಕ್‌ಪೋಸ್ಟ್ ಬಳಿ ಪೊಲೀಸರನ್ನು ಕಂಡ ಇವರಿಬ್ಬರು ಬೈಕ್ ಬಿಟ್ಟು ಓಡಲಾರಂಭಿಸಿದರು. ಈ ವೇಳೆ ಬೆನ್ನತ್ತಿದ ಚುನಾವಣಾ ಕರ್ತವ್ಯ ನಿರತ ಪೊಲೀಸರು ಶಿವಣ್ಣ ಹಾಗೂ ರಾಜು ಅವರನ್ನು ವಶಕ್ಕೆ ಪಡೆದು ಪರಿಶೀಲಿಸಲಾಗಿ ದಾಖಲೆ ಇಲ್ಲದ 3,85,500 ರೂ. ಪತ್ತೆಯಾಗಿದೆ. ತಕ್ಷಣ ಹಣ ವಶಕ್ಕೆ ಪಡೆದು ಸೂಕ್ತ ದಾಖಲೆ ನೀಡಿ ಹಣ ಪಡೆಯುವಂತೆ ತಿಳಿಸಿ ಅವರಿಬ್ಬರನ್ನು ಬಿಡುಗಡೆಗೊಳಿಸಿದ್ದಾರೆ. ಈ ವೇಳೆ ಕೆ.ಆರ್.ಪೇಟೆ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಜಗದೀಶ್, ಅಕ್ಕಿ ಹೆಬ್ಬಾಳು ಪಿಡಿಓ ವಿ.ಎಂ.ರವಿಕುಮಾರ್, ಪೊಲೀಸ್ ಸಿಬ್ಬಂದಿಗಳಾದ ಗೌಸ್ ಖಾನ್, ವಿರೂಪಾಕ್ಷ, ಅರೆಸೇನಾ ಪಡೆ ತಂಡದ ಸಿಬ್ಬಂದಿ ಇದ್ದರು.



ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಲಕ್ನೋ	3	2	1	0	4
ಗುಜರಾತ್	2	2	0	0	4
ಪಂಜಾಬ್	2	2	0	0	4
ಕೋಲ್ಕತ್ತಾ	2	1	1	0	2
ರಾಜಸ್ಥಾನ್	2	1	1	0	2
ಸಿಎಸ್‌ಕೆ	2	1	1	0	2
ಆರ್‌ಸಿಬಿ	2	1	1	0	2
ಡೆಲ್ಲಿ	2	0	2	0	0
ಮುಂಬೈ	1	0	1	0	0
ಎಸ್‌ಆರ್‌ಹೆಚ್	2	0	2	0	0











ಎಸ್‌ಆರ್‌ಹೆಚ್ ಕದನ ಗೆದ್ದು, ಗೆಲುವಿನ ಲಯಕ್ಕೆ ಮರಳಿದ ಲಖನೌ



ಲಖನೌ, ಏ.7– ಕೃನಾಲ್ ಪಾಂಡ್ಯ ಅವರ ಆಲ್‌ರೌಂಡ್ ಆಟದ ನೆರವಿನಿಂದ ಲಖನೌ ಸೂಪರ್ ಜೈಂಟ್ಸ್ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ 5 ವಿಕೆಟ್ ಜಯ ಸಾಧಿಸಿದೆ.

ಈ ಮೂಲಕ ಸಿಎಸ್‌ಕೆ ವಿರುದ್ಧದ ಪಂದ್ಯದಲ್ಲಿ ಮುಗ್ಗರಿಸಿದ್ದ ಲಖನೌ, ಎಸ್‌ಆರ್‌ಹೆಚ್ ವಿರುದ್ಧದ ಪಂದ್ಯದಲ್ಲಿ ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಉತ್ತಮ ನಿರ್ವಹಣೆ ತೋರುವ ಮೂಲಕ ಗೆಲುವಿನ ಲಯಕ್ಕೆ ಮರಳಿದೆ. ಅಲ್ಲದೇ ಅಂಕ ಪಟ್ಟಿಯಲ್ಲಿ 4 ಅಂಕಗಳೊಂದಿಗೆ ಅಗ್ರಸ್ಥಾನಕ್ಕೆ ಏರಿದೆ. ಇತ್ತ ಪ್ರಸಕ್ತ ಟೂರ್ನಿಯಲ್ಲಿ ಸತತ 2 ಸೋಲಿನಿಂದ ಕಂಗೆಟ್ಟಿರುವ ಹೈದರಾಬಾದ್ ಅಂಕಪಟ್ಟಿಯಲ್ಲಿ ಕೊನೆ ಸ್ಥಾನದಲ್ಲಿದೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಸನ್‌ರೈಸರ್ಸ್ ಹೈದರಾಬಾದ್ ಕೃನಾಲ್ ಪಾಂಡ್ಯ ಸ್ಪಿನ್ ಮೋಡಿಗೆ ತತ್ತರಿಸಿ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 121 ರನ್‌ಗಳ ಸಾಧಾರಣ ಮೊತ್ತ ದಾಖಲಿಸಿತು. ತಂಡದ ಮೊತ್ತ 55 ರನ್ ಆಗುವಷ್ಟರಲ್ಲೇ ಅನ್ಮೋಲ್‌ಪ್ರೀತ್ ಸಿಂಗ್ 31, ಮಯಾಂಕ್ ಅಗರ್ವಾಲ್ 8, ಹೆನ್ರಿ ಬ್ರೂಕ್ 3, ಏಡನ್ ಮಾಕ್ರಮ್ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರು. ಈ ವೇಳೆ ರಾಹುಲ್ ತ್ರಿಪಾಠಿ 35, ವಾಷಿಂಗ್‌ಟನ್ ಸುಂದರ್ 16 ಹಾಗೂ ಅಬ್ದುಲ್ ಸಮದ್ 21 ರನ್ ಗಳಿಸುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಅಲ್ಲದೇ ತಂಡ ಅಲ್ಪ ಮೊತ್ತಕ್ಕೆ ಕುಸಿಯುವುದರಿಂದ ಪಾರು ಮಾಡಿದರು. ಲಖನೌ ಸೂಪರ್ ಜೈಂಟ್ಸ್ ಪರ ಕೃನಾಲ್ ಪಾಂಡ್ಯ 3, ಅಮಿತ್ ಮಿಶ್ರಾ 2, ರವಿ ಬಿಷ್ಣೋಯಿ ಹಾಗೂ ಯಶ್ ಠಾಕೂರ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

122 ರನ್‌ಗಳ ಸುಲಭ ಗುರಿ ಬೆನ್ನತ್ತಿದ ಲಖನೌ ನಿರೀಕ್ಷಿತ ಆರಂಭ ಪಡೆಯಲು ವಿಫಲವಾಯಿತು. ತಂಡದ ಮೊತ್ತ 35 ರನ್ ಆಗುವಷ್ಟರಲ್ಲೇ ಕೈಲ್ ಮೇಯರ್ಸ್ 13 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಇವರ ಹಿಂದೆಯೇ ನಂತರ ಬಂದ ದೀಪಕ್ ಹೂಡಾ 7 ರನ್ ಗಳಿಸಿ ನಿರ್ಗಮಿಸಿದರು. ಈ ವೇಳೆ ಮೂರನೇ ವಿಕೆಟ್‌ಗೆ ಒಂದಾದ ಕೃನಾಲ್ ಪಾಂಡ್ಯ ಹಾಗೂ ಕೆ.ಎಲ್.ರಾಹುಲ್ ಅವರ 55 ರನಗಗಳ ಜೊತೆಯಾಟದಿಂದ ಲಖನೌ ಸೂಪರ್ ಜೈಂಟ್ಸ್ ಚೇತರಿಸಿಕೊಂಡು ಗೆಲುವಿನತ್ತ ಸಾಗಿತು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ 23 ಎಸೆತಗಳಲ್ಲಿ 1 ಸಿಕ್ಸರ್, 4 ಬೌಂಡರಿ ಒಳಗೊಂಡ 34 ರನ್ ಗಳಿಸಿದ್ದ ಕೃನಾಲ್ ಪಾಂಡ್ಯ ವಿಕೆಟ್ ಒಪ್ಪಿಸಿದರು. ಇವರ ಹಿಂದೆಯೇ 35 ರನ್ ಗಳಿಸಿದ್ದ ನಾಯಕ ಕೆ.ಎಲ್.ರಾಹುಲ್ ಹಾಗೂ ರೋಮಿಯೋ ಶಫರ್ಡ್ ವಿಕೆಟ್‌ಗಳನ್ನು ಆದೀಲ್ ರಶೀದ್ ಉರುಳಿಸಿದರು. ಬಳಿಕ ಕ್ರೀಸ್‌ಗೆ ಆಗಮಿಸಿದ ಮಾರ್ಕಸ್ ಸ್ಟೊಯ್ನಿಸ್ ಹಾಗೂ ನಿಕೋಲಸ್ ಪೂರನ್ ತಂಡಕ್ಕೆ ಜಯ ತಂದಿತ್ತರು. ಸ್ಟೊಯ್ನಿಸ್ 10ರನ್ ಗಳಿಸಿದರೇ, ಪೂರನ್ 11 ರನ್ ಗಳಿಸಿ ಅಜೇಯರಾಗಿ ಉಳಿದರು. ಅಂತಿಮವಾಗಿ ಲಖನೌ ಸೂಪರ್ ಜೈಂಟ್ಸ್ ಇನ್ನೂ 24 ಎಸೆತ ಬಾಕಿ ಉಳಿದಿರುವಂತೆಯೇ 16 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 127 ರನ್ ಗಳಿಸುವ ಮೂಲಕ ಜಯ ಗಳಿಸಿತು. ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಆದೀಲ್ ರಶಿದ್ 2, ಭುವನೇಶ್ವರ್ ಕುಮಾರ್, ಫಜಲ್ಹಕ್ ಫಾರೂಕಿ ಹಾಗೂ ಉಮ್ರಾನ್ ಮಲ್ಲಿಕ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಲಖನೌ ಪರ ಕೃನಾಲ್ ಪಾಂಡ್ಯ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



[ಏಪ್ರಿಲ್ 08]

ರಾಜಸ್ಥಾನ್ V/S ಡೆಲ್ಲಿ
ಸ್ಥಳ: ಬರ್ಸಾಪರ ಕ್ರಿಕೆಟ್ ಮೈದಾನ, ಗುವಾಹಟಿ
ಸಮಯ: ಮಧ್ಯಾಹ್ನ 3.30

ಮುಂಬೈ V/S ಚೆನ್ನೈ
ಸ್ಥಳ: ವಾಂಖೆಡೆ ಮೈದಾನ, ಮುಂಬೈ
ಸಮಯ: ರಾತ್ರಿ 7.30

ರಂಗಾಯಣ 'ಚಿಣ್ಣರ ಮೇಳ'ದಲ್ಲಿ ಪಕ್ಷಪಾತ; ಅಕ್ರಮ



- ಜಿಲ್ಲಾಧಿಕಾರಿಗಳಿಗೆ ಪೋಷಕರ ದೂರು
- ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪರಿಂದಲೂ ಚುನಾವಣಾಧಿಕಾರಿಗೆ ಪತ್ರ

ಮೈಸೂರು, ಏ.7(ಎಂಕೆ)– ಮೈಸೂರು ರಂಗಾಯಣ ಆಯೋಜಿಸುವ 'ಚಿಣ್ಣರ ಮೇಳ'ದ ಅರ್ಜಿ ವಿತರಣೆಯಲ್ಲಿ ಸ್ವಜನ ಪಕ್ಷಪಾತ ಹಾಗೂ ಅಕ್ರಮ ನಡೆದಿದೆ ಎಂದು ಜಿಲ್ಲಾಧಿಕಾರಿಗಳಿಗೆ ದೂರು ನೀಡಲಾಗಿದೆ.

ರಂಗಾಯಣದಲ್ಲಿ ಆಯೋಜಿಸುವ ಬೇಸಿಗೆ ಚಿಣ್ಣರ ಮೇಳದಲ್ಲಿ ನಿಗದಿತ 250 ಅರ್ಜಿಗಳು ಪೂರ್ಣಗೊಂಡಿದ್ದರೂ ಯಾವುದೇ ಮಾಹಿತಿ ನೀಡದೆ ಹೆಚ್ಚುವರಿಯಾಗಿ 50 ಅರ್ಜಿಗಳನ್ನು, ಅಧಿಕಾರಿಗಳು ತಮಗೆ ಬೇಕಾದವರಿಗೆ ನೀಡಿದ್ದಾರೆ. ಈ ಮೂಲಕ ತಮ್ಮ ಅಧಿಕಾರ ಹಾಗೂ ಹಣ ದುರುಪಯೋಗ ಮಾಡಿಕೊಳ್ಳುವ ಯತ್ನ ನಡೆದಿದೆ. ಅಧಿಕಾರ ದುರುಪಯೋಗ ಮಾಡಿಕೊಂಡಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಪೋಷಕರು ದೂರು ನೀಡಿದ್ದಾರೆ.

7 ರಿಂದ 14 ವರ್ಷದೊಳಗಿನ ಮಕ್ಕಳಿಗೆ ನಡೆಸುವ ಚಿಣ್ಣರಮೇಳಕ್ಕೆ ಅರ್ಜಿ ಶುಲ್ಕ 100 ರೂ. ಹಾಗೂ ಶಿಬಿರ ಶುಲ್ಕ 3000 ರೂ. ಇದೆ. ಏ.1 ರಂದು ಅರ್ಜಿ ವಿತರಣೆಯಾಗಿದ್ದು, ಅಂದು ಬೆಳಗ್ಗೆ 9 ಗಂಟೆಯಿಂದಲೇ ಸರತಿ ಸಾಲಿನಲ್ಲಿ ನಿಂತಿದ್ದರೂ 11.30ರ ವರೆಗೆ ನಿಗದಿತ 250 ಅರ್ಜಿಗಳು ಮುಕ್ತಾಯವಾಗಿವೆ ಎಂದು ಎಲ್ಲರನ್ನೂ ಕಳುಹಿಸಿದರು. ಆದರೆ, ನಂತರವೂ 50 ಅರ್ಜಿಗಳನ್ನು ಅಧಿಕಾರಿ ಗಳು ತಮಗೆ ಬೇಕಾದವರಿಗೆ ನೀಡಿದ್ದಾರೆ. ಈ ಕುರಿತು ಯಾವುದೇ ಮಾಹಿತಿ ನೀಡಿಲ್ಲ. ಚಿಣ್ಣರ ಮೇಳಕ್ಕೆ ಮಕ್ಕಳಿಂದಲೇ 9 ರಿಂದ 10 ಲಕ್ಷ ರೂ., ಸಂಗ್ರಹವಾಗಲಿದ್ದು, ಹಣ ದುರುಪಯೋಗ ಮಾಡಿಕೊಳ್ಳಲು ಯತ್ನಿಸಿದ್ದಾರೆ ಎಂದು ಪೋಷಕರಾದ ಹೆಚ್.ಎಸ್. ಮಂಜುನಾಥ್, ಪ್ರವೀಣ್ ಎಂಬುವರು ಜಿಲ್ಲಾಧಿಕಾರಿಗಳಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಹಣಕಾಸಿನ ವ್ಯವಹಾರಕ್ಕೆ ತಡೆ ನೀಡಿ: ಜಿಲ್ಲಾ ಚುನಾವಣಾಧಿಕಾರಿಗಳಿಗೆ ಪತ್ರ ಬರೆದಿರುವ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ಮೈಸೂರು ರಂಗಾಯಣ ಕರ್ನಾಟಕ ಸರ್ಕಾರದ ಸಾಂಸ್ಕೃತಿಕ ಸ್ವಾಯತ್ತ ಸಂಸ್ಥೆಯಾಗಿದೆ. ಸಾಂಸ್ಕೃತಿಕ ಕ್ಷೇತ್ರದಲ್ಲಿನ ಸೇವೆ ಗುರ್ತಿಸಿ, ಸರ್ಕಾರ ನನ್ನನ್ನು ರಂಗಾಯಣ ನಿರ್ದೇಶಕನನ್ನಾಗಿ ನೇಮಕ ಮಾಡಿದ್ದು, ಅದರಂತೆ ಕಳೆದ ಮೂರು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದೇನೆ. ಆಡಳಿತಾಧಿಕಾರಿಯಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪ ನಿರ್ದೇಶಕರು ಇರುತ್ತಾರೆ. ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಎಲ್ಲಾ ರಂಗಾಯಣದ ಆಡಳಿತ ವ್ಯವಹಾರಗಳು ಅಧಿಕಾರಿಗಳ ಮಟ್ಟದಲ್ಲಿ ನಡೆಯುತ್ತಿದ್ದು, 9 ರಿಂದ 10 ಲಕ್ಷ ರೂ ವೆಚ್ಚದ 'ಚಿಣ್ಣರ ಮೇಳ' ಕಾರ್ಯಕ್ರಮವನ್ನು ಏಕಪಕ್ಷೀಯವಾಗಿ ನಡೆಸಲು ತೀರ್ಮಾನಿಸಿ, ಈಗಾಗಲೇ ಹಣಕಾಸಿನ ವ್ಯವಹಾರಗಳನ್ನು ನಡೆಸಿದ್ದಾರೆ. ನಿರ್ದೇಶಕನಾಗಿ ಕರ್ತವ್ಯದಲ್ಲಿರುವ ನನಗೂ ಯಾವುದೇ ಮಾಹಿತಿ ನೀಡಿಲ್ಲ. ಆದ್ದರಿಂದ ರಂಗಾಯಣದಲ್ಲಿ ನಡೆಯಬಹುದಾದ ಹಣಕಾಸು ವ್ಯವಹಾರಕ್ಕೆ ಚುನಾವಣೆ ಮುಗಿಯುವವರೆಗೆ ತಡೆ ನೀಡಬೇಕು ಎಂದು ಮನವಿ ಮಾಡಿರುವುದಲ್ಲದೆ ರಂಗಾಯಣ ಆವರಣದಲ್ಲಿ ಕ್ಯಾಂಟೀನ್ ತೆರೆಯುವುದು, ಅಧಿಕಾರಿಯೊಬ್ಬರೆ ವಿವಿಧ ಕಾರ್ಯಕ್ರಮಗಳಿಗೆಂದು ಹಣಕಾಸಿನ ತೀರ್ಮಾನ ತೆಗೆದುಕೊಳ್ಳುವ ಮೂಲಕ ಪಕ್ಷಪಾತ, ಹಣ ಮತ್ತು ಅಧಿಕಾರ ದುರುಪಯೋಗಕ್ಕೆ ಆಸ್ಪದವಾಗುತ್ತಿದೆ ಎಂದು ದೂರು ನೀಡಿದ್ದಾರೆ.

> **ಟಿಕೆಟ್‌ಗಾಗಿ ಯಾರಿಗೂ ಶಿಫಾರಸ್ಸು ಮಾಡಿಲ್ಲ...**
> ಮೈಸೂರು ರಂಗಾಯಣ ನಡೆಸುವ ಚಿಣ್ಣರ ಮೇಳಕ್ಕೆ ಅರ್ಜಿ ಕೋರಿ ಅನೇಕರು ನನಗೆ ಕರೆ ಮಾಡಿ ವಿನಂತಿ ಮಾಡಿದ್ದಾರೆ. ಆದರೆ ನಾನು ಎಲ್ಲರಿಗೂ ಪಾರದರ್ಶಕವಾಗಿ ಇದು ನಡೆಯಲಿದ್ದು ಕಚೇರಿಯಲ್ಲಿ ನೀಡಲಾಗುವುದು ಎಂದು ತಿಳಿಸಿದ್ದೇನೆಯೇ ಹೊರತು ಅರ್ಜಿ ಕೊಡಲು ನನ್ನಿಂದ ಯಾರ ಹೆಸರನ್ನೂ ಶಿಫಾರಸ್ಸು ಮಾಡಿಲ್ಲ.
> - ಅಡ್ಡಂಡ ಸಿ.ಕಾರ್ಯಪ್ಪ, ರಂಗಾಯಣ ನಿರ್ದೇಶಕ

ಥಟ್ ಅಂತ ಉತ್ತರಿಸಿ ಕಾರ್ಯಕ್ರಮದಲ್ಲಿ ಡಾ. ಚಿದಾನಂದ ಕುಡ್ಡನ್‌ಗೆ ಬಹುಮಾನ



ಮೈಸೂರು, ಏ.7– ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ವಚನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅಂತರ್ಜಾಲದ ಮೂಲಕ ನಡೆದ ಥಟ್ ಅಂತ ಉತ್ತರಿಸಿ 46ನೇ ವಚನ ಸಾಹಿತ್ಯ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಕಲಬುರಗಿ ಜಿಲ್ಲೆ ಆಳಂದ ತಾ. ಹಡಲಗಿಯ ಡಾ. ಚಿದಾನಂದ ಕುಡ್ಡನ್ ಅವರು ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುವುದರ ಮೂಲಕ ಬಹುಮಾನಕ್ಕೆ ಭಾಜನರಾಗಿದ್ದಾರೆ ಎಂದು ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ ತಿಳಿಸಿದ್ದಾರೆ.

ವಿಧಾನಸಭಾ ಚುನಾವಣೆ–2023

ಗುಂಡ್ಲುಪೇಟೆಯಲ್ಲಿ ಸಾಂಪ್ರದಾಯಿಕ ಎದುರಾಳಿಗಳ ಪೈಪೋಟಿ!



■ ಎಸ್.ಬಿ.ದೇವರಾಜ

ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರವೂ ಸಾಂಪ್ರದಾಯಿಕ ಎದುರಾಳಿಗಳ ಕಣ. ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ದ್ವಿಸದಸ್ಯ ಕ್ಷೇತ್ರವಾಗಿದ್ದ ಗುಂಡ್ಲುಪೇಟೆ, ನಂತರದಲ್ಲಿ ಏಕ ಸದಸ್ಯ ಕ್ಷೇತ್ರವಾಯಿತು. ಉಪ ಚುನಾವಣೆ ಸೇರಿ ಒಟ್ಟು 16 ಚುನಾವಣೆಗಳು ನಡೆದಿದ್ದು, ಕೆ.ಎಸ್.ನಾಗರತ್ನಮ್ಮ 7 ಬಾರಿ ಹಾಗೂ ಹೆಚ್.ಎಸ್.ಮಹದೇವಪ್ರಸಾದ್ 5 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ಇನ್ನು ಹೆಚ್.ಕೆ.ಶಿವರುದ್ರಪ್ಪ, ಸಿದ್ದಯ್ಯ, ಡಾ.ಗೀತಾ ಮಹದೇವಪ್ರಸಾದ್ ಹಾಗೂ ಸಿ.ಎಸ್.ನಿರಂಜನ ಕುಮಾರ್‌ಗೆ ಒಮ್ಮೆ ಜನಾಶೀರ್ವಾದ ಸಿಕ್ಕಿದೆ. ಮಹಿಳಾ ನಾಯಕಿಯನ್ನು ಹೆಚ್ಚು ಬಾರಿ ಶಾಸಕಿಯಾಗಿ ಆಯ್ಕೆ ಮಾಡಿದ ಹಾಗೂ ಮೊದಲ ಮಹಿಳಾ ಸ್ಪೀಕರ್ ನೀಡಿದ ಹೆಗ್ಗಳಿಕೆ ಈ ಕ್ಷೇತ್ರಕ್ಕಿದೆ.

ರಾಜ್ಯದ ಮೊದಲ ವಿಧಾನಸಭಾ ಸಾರ್ವತ್ರಿಕ ಚುನಾವಣೆಯಿಂದಲೂ ಗುಂಡ್ಲುಪೇಟೆ ಕ್ಷೇತ್ರ ಅಸಿತ್ವದಲ್ಲಿದೆ. 1952ರ ಚುನಾವಣೆಯಲ್ಲಿ ದ್ವಿಸದಸ್ಯ ಕ್ಷೇತ್ರವಾಗಿದ್ದ ಇಲ್ಲಿಂದ ಪಕ್ಷೇತರರಾದ ಹೆಚ್.ಕೆ.ಶಿವರುದ್ರಪ್ಪ ಹಾಗೂ ಸಿದ್ದಯ್ಯ(ಕುನ್ನಯ್ಯ) ಶಾಸಕರಾಗಿ ಆಯ್ಕೆಯಾದರು. ಆ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಎಂ.ಡಿ.ಶಿವಪ್ಪ ಹಾಗೂ ಪಿ.ವೆಂಕಟರಮಣ ಸ್ಪರ್ಧಿಸಿ ಪರಾಭವಗೊಂಡರು. ಗುಂಡ್ಲುಪೇಟೆ ಏಕ ಸದಸ್ಯ ಕ್ಷೇತ್ರವಾದ ಬಳಿಕ 1957 ಹಾಗೂ 1968ರಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಕೆ.ಎಸ್.ನಾಗರತ್ನಮ್ಮ ಸತತವಾಗಿ ಗೆಲುವಿನೊಂದಿಗೆ ಶಾಸಕರಾದರು. ಆ ಎರಡೂ ಚುನಾವಣೆಗಳಲ್ಲಿ ಕಾಂಗ್ರೆಸ್‌ನ ಕೆ.ಶಿವರುದ್ರಪ್ಪನವರು ತೀವ್ರ ಪೈಪೋಟಿ ನೀಡಿ, ಸೋತಿದ್ದರು. ಬಳಿಕ ಕಾಂಗ್ರೆಸ್ ಸೇರಿದ ಕೆ.ಎಸ್.ನಾಗರತ್ನಮ್ಮ, 1967ರ ಚುನಾವಣೆಯಲ್ಲಿ ಹ್ಯಾಟ್ರಿಕ್ ಗೆಲುವು ದಾಖಲಿಸಿದರು. ಆ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿ ಕೆ.ಬಿ.ಜಯದೇವಪ್ಪ ಪೈಪೋಟಿ ನೀಡಿದ್ದರು. 1972ರಲ್ಲಿ ಕಾಂಗ್ರೆಸ್‌ನಿಂದಲೇ ಸ್ಪರ್ಧಿಸಿ, ಸಂಸ್ಥಾ ಕಾಂಗ್ರೆಸ್‌ನ ಬಿ.ಬಸಪ್ಪ ವಿರುದ್ಧ ಪುನರಾಯ್ಕೆಯಾದರು. 1978ರಲ್ಲಿ ಮತ್ತೆ ಸಾಂಪ್ರದಾಯಿಕ ಎದುರಾಳಿಗಳಾದ ನಾಗರತ್ನಮ್ಮ ಹಾಗೂ ಹೆಚ್.ಕೆ.ಶಿವರುದ್ರಪ್ಪ ನಡುವಿನ ಹಣಾಹಣಿಯಲ್ಲಿ ಶಿವರುದ್ರಪ್ಪ ಗೆಲುವು ದಾಖಲಿಸಿ ನಾಗರತ್ನಮ್ಮ ಅವರಿಗೆ ಮೊದಲ ಬಾರಿ ಸೋಲಿನ ರುಚಿ ತೋರಿಸಿದರು. ಆ ಚುನಾವಣೆಯಲ್ಲಿ ಈ ಇಬ್ಬರೂ ಪಕ್ಷೇತರ ಅಭ್ಯರ್ಥಿಗಳಾಗಿ ಸೆಣೆಸಾಡಿದ್ದು ವಿಶೇಷ. ಆಗ ಇಂದಿರಾ ಕಾಂಗ್ರೆಸ್‌ನಿಂದ ಹೆಚ್.ಎನ್.ಶ್ರೀಕಂಠಶೆಟ್ಟಿ ಸ್ಪರ್ಧಿಸಿದ್ದರು. ಮತ್ತೆ ಕಾಂಗ್ರೆಸ್ ಸೇರಿದ ನಾಗರತ್ನಮ್ಮ, 1983ರಲ್ಲಿ ಜನತಾಪಕ್ಷದ ಹೆಚ್.ಎನ್.ಶ್ರೀಕಂಠ ಶೆಟ್ಟರು, 1985 ಹಾಗೂ 1989ರ ಚುನಾವಣೆಗಳಲ್ಲಿ ಹೆಚ್.ಎನ್.ಶ್ರೀಕಂಠ ಶೆಟ್ಟರ ಪುತ್ರ ಹೆಚ್.ಎಸ್.ಮಹದೇವ ಪ್ರಸಾದ್(ಜನತಾ ಪಕ್ಷ ನಂತರ ಜನತಾ ದಳ) ವಿರುದ್ಧ ಗೆದ್ದು ಶಾಸಕರಾದರು.

ನಾಗರತ್ನಮ್ಮ ಅವರು 1993 ಅಕ್ಟೋಬರ್ 17ರಂದು ನಿಧನರಾದರು. ಬಳಿಕ 1994ರ ಚುನಾವಣೆಯಲ್ಲಿ ಜನತಾದಳದ ಅಭ್ಯರ್ಥಿ ಹೆಚ್.ಎಸ್.ಮಹದೇವ ಪ್ರಸಾದ್, ಕಾಂಗ್ರೆಸ್‌ನ ಸಿ.ಎಂ.ಶಿವಮಲ್ಲಪ್ಪ ಅವರನ್ನು ಸೋಲಿಸಿ ವಿಧಾನಸಭೆ ಪ್ರವೇಶಿಸಿದರು. 1999ರಲ್ಲಿ ಮಹದೇವಪ್ರಸಾದ್ ಜೆಡಿಯು ಅಭ್ಯರ್ಥಿಯಾಗಿ ಸ್ಪರ್ಧಿಸಿ ಶಾಸಕರಾಗಿ ಆಯ್ಕೆಯಾದರು. ಆ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಹೆಚ್.ಎಸ್.ನಂಜಪ್ಪ ಹಾಗೂ ಬಂಡಾಯ ಅಭ್ಯರ್ಥಿಯಾಗಿ ಸಿ.ಎಂ.ಶಿವಮಲ್ಲಪ್ಪ ಸ್ಪರ್ಧಿಸಿ ಪರಾಜಿತರಾದರು. 2004ರಲ್ಲಿ ಮಹದೇವ ಪ್ರಸಾದ್ ಜೆಡಿಎಸ್‌ನಿಂದ ಸ್ಪರ್ಧಿಸಿ, ಕಾಂಗ್ರೆಸ್‌ನ ಹೆಚ್.ಎಸ್.ನಂಜಪ್ಪ ಅವರನ್ನು ಮಣಿಸಿ, ಹ್ಯಾಟ್ರಿಕ್ ಗೆಲುವು ದಾಖಲಿಸಿದರು. ನಂತರದಲ್ಲಿ ಸಿ.ಎಂ.ಶಿವಮಲ್ಲಪ್ಪ ಅವರ ಪುತ್ರ ಸಿ.ಎಸ್.ನಿರಂಜನ ಕುಮಾರ್(ಹಾಲಿ ಶಾಸಕ) ಚುನಾವಣಾ ಅಖಾಡಕ್ಕಿಳಿದರು. 2008ರಲ್ಲಿ ಬಿಜೆಪಿಯಿಂದ ಹಾಗೂ 2013ರಲ್ಲಿ ಕೆಜೆಪಿಯಿಂದ ಸ್ಪರ್ಧಿಸಿ, ಕಾಂಗ್ರೆಸ್ ಅಭ್ಯರ್ಥಿ ಹೆಚ್.ಎಸ್.ಮಹದೇವಪ್ರಸಾದ್ ವಿರುದ್ಧ ಸೋತರು. ಆದರೆ 2017ರ ಜನವರಿ 3ರಂದು ಹೆಚ್.ಎಸ್.ಮಹದೇವಪ್ರಸಾದ್ ಅಕಾಲಿಕ ನಿಧನದಿಂದ ಆ ವರ್ಷದ ಏಪ್ರಿಲ್‌ನಲ್ಲಿ ಉಪ ಚುನಾವಣೆ ನಡೆಯಿತು. ಆ ಚುನಾವಣೆಯಲ್ಲಿ ಮಹದೇವಪ್ರಸಾದ್ ಅವರ ಪತ್ನಿ ಡಾ.ಗೀತಾ ಮಹದೇವಪ್ರಸಾದ್ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿತು. ಬಿಜೆಪಿ ಅಭ್ಯರ್ಥಿಯಾಗಿದ್ದ ನಿರಂಜನ ಕುಮಾರ್ ಅವರನ್ನು ಸುಮಾರು 10 ಸಾವಿರ ಮತಗಳ ಅಂತರದಿಂದ ಸೋಲಿಸಿ, ಗೀತಾ ಅವರು ಶಾಸಕಿಯಾದರು. ನಂತರ 2018ರ ಸಾರ್ವತ್ರಿಕ ಚುನಾವಣೆಯಲ್ಲೂ ಇವರಿಬ್ಬರ ನಡುವಿನ ಜಿದ್ದಾಜಿದ್ದಿ ಹೋರಾಟದಲ್ಲಿ ನಿರಂಜನ ಕುಮಾರ್ ಸುಮಾರು 16 ಸಾವಿರ ಮತಗಳ ಅಂತರದಲ್ಲಿ ಗೀತಾ ಮಹದೇವಪ್ರಸಾದ್ ಅವರನ್ನು ಸೋಲಿಸಿ, ಶಾಸಕರಾಗಿ ಆಯ್ಕೆಯಾದರು.

ಗಮನಾರ್ಹ ಸಂಗತಿಗಳು: ಎರಡು ಬಾರಿ ಪಕ್ಷೇತರರಾಗಿ ಹಾಗೂ 2 ಬಾರಿ ಕಾಂಗ್ರೆಸ್‌ನಿಂದ ಸತತ 4 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದ ನಾಗರತ್ನಮ್ಮ ಅವರು 5ನೇ ಚುನಾವಣೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿ ಸೋತರು. ನಂತರ ಕಾಂಗ್ರೆಸ್‌ನಿಂದ ಸತತ ಮೂರು ಬಾರಿ ಗೆಲುವು ಸಾಧಿಸಿದರು. ನಾಗರತ್ನಮ್ಮ ವಿರುದ್ಧ ಸತತ 2 ಬಾರಿ ಸೋತಿದ್ದ ಹೆಚ್.ಎಸ್.ಮಹದೇವಪ್ರಸಾದ್, ನಂತರದಲ್ಲಿ 5 ಬಾರಿ ಶಾಸಕರಾಗಿ ಆಯ್ಕೆಯಾದರು. ಕೆ.ಎಸ್.ನಾಗರತ್ನಮ್ಮ ಅವರು ಬದುಕಿರುವವರೆಗೂ ಶ್ರೀಕಂಠಶೆಟ್ಟರು ಹಾಗೂ ಅವರ ಪುತ್ರ ಹೆಚ್.ಎಸ್.ಮಹದೇವಪ್ರಸಾದ್ ಗೆಲ್ಲಲು ಸಾಧ್ಯವಾಗಲಿಲ್ಲ. ಹಾಗೆಯೇ ಹೆಚ್.ಎಸ್.ಮಹದೇವಪ್ರಸಾದ್ ಅವರು ಇರುವವರೆಗೂ ಸಿ.ಎಂ.ಶಿವಮಲ್ಲಪ್ಪ ಹಾಗೂ ಅವರ ಪುತ್ರ ಸಿ.ಎಸ್.ನಿರಂಜನಕುಮಾರ್ ಗೆಲ್ಲಲಿಲ್ಲ. ಮಹದೇವಪ್ರಸಾದ್ ನಿಧನದ ನಂತರ ನಡೆದ ಉಪ ಚುನಾವಣೆಯಲ್ಲೂ ಸೋತಿದ್ದ ನಿರಂಜನ ಕುಮಾರ್‌ಗೆ 2018ರ ಚುನಾವಣೆಯಲ್ಲಿ ಜನಾಶೀರ್ವಾದ ಸಿಕ್ಕಿತು. ಆ ಮೂಲಕ ಗುಂಡ್ಲುಪೇಟೆ ಕ್ಷೇತ್ರದಲ್ಲಿ ಬಿಜೆಪಿ ಖಾತೆ ತೆರೆಯಿತು.

ಕ್ಷೇತ್ರದ ಶಾಸಕರ ವರ್ಚಸ್ಸು: ಈ ಕ್ಷೇತ್ರದ ಶಾಸಕಿಯಾಗಿದ್ದ ಕೆ.ಎಸ್.ನಾಗರತ್ನಮ್ಮ ಅವರು ರಾಜ್ಯದ ಮೊದಲ ಮಹಿಳಾ ಸ್ಪೀಕರ್ ಹಾಗೂ ಮೊದಲ ಪ್ರತಿಪಕ್ಷ ನಾಯಕಿಯಾಗಿದ್ದರು. ಅಲ್ಲದೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯಾಗಿಯೂ ಕೆಲಸ ಮಾಡಿದ್ದರು. ಬೇರೆ ಬೇರೆ ಪಕ್ಷಗಳಿಂದ 5 ಬಾರಿ ಗೆದ್ದಿದ್ದ ಹೆಚ್.ಎಸ್.ಮಹದೇವಪ್ರಸಾದ್, ಆಹಾರ ಮತ್ತು ನಾಗರಿಕ ಪೂರೈಕೆ, ಕನ್ನಡ ಮತ್ತು ಸಂಸ್ಕೃತಿ, ಸಹಕಾರ ಹಾಗೂ ಸಕ್ಕರೆ ಖಾತೆ ಸಚಿವರಾಗಿದ್ದರು. ಉಪ ಚುನಾವಣೆಯಲ್ಲಿ ಶಾಸಕಿಯಾಗಿ ಆಯ್ಕೆಯಾಗಿದ್ದ ಡಾ.ಗೀತಾ ಮಹದೇವಪ್ರಸಾದ್ ಕೂಡ ಸಣ್ಣ ಕೈಗಾರಿಕೆ ಮತ್ತು ಸಕ್ಕರೆ ಸಚಿವರಾಗಿ ಕೆಲಸ ಮಾಡಿದರು.

ವರ್ಷ	ಗೆದ್ದವರು	ಪಕ್ಷ	ಪಡೆದ ಮತ
1952 (ದ್ವಿಸದಸ್ಯ)	ಹೆಚ್.ಕೆ.ಶಿವರುದ್ರಪ್ಪ ಮತ್ತು ಸಿದ್ದಯ್ಯ(ಕುನ್ನಯ್ಯ)	ಪಕ್ಷೇತರರು	....
1957	ಕೆ.ಎಸ್.ನಾಗರತ್ನಮ್ಮ	ಪಕ್ಷೇತರ	24955
1962	ಕೆ.ಎಸ್.ನಾಗರತ್ನಮ್ಮ	ಪಕ್ಷೇತರ	22,765
1967	ಕೆ.ಎಸ್.ನಾಗರತ್ನಮ್ಮ	ಕಾಂಗ್ರೆಸ್	30,778
1972	ಕೆ.ಎಸ್.ನಾಗರತ್ನಮ್ಮ	ಕಾಂಗ್ರೆಸ್	30,055
1978	ಹೆಚ್.ಕೆ.ಶಿವರುದ್ರಪ್ಪ	ಪಕ್ಷೇತರ	27,141
1983	ಕೆ.ಎಸ್.ನಾಗರತ್ನಮ್ಮ	ಕಾಂಗ್ರೆಸ್	44,085
1985	ಕೆ.ಎಸ್.ನಾಗರತ್ನಮ್ಮ	ಕಾಂಗ್ರೆಸ್	40,857
1989	ಕೆ.ಎಸ್.ನಾಗರತ್ನಮ್ಮ	ಕಾಂಗ್ರೆಸ್	50,643
1994	ಹೆಚ್.ಎಸ್.ಮಹದೇವಪ್ರಸಾದ್	ಜ.ದಳ	53,724
1999	ಹೆಚ್.ಎಸ್.ಮಹದೇವಪ್ರಸಾದ್	ಜೆಡಿಯು	46,757
2004	ಹೆಚ್.ಎಸ್.ಮಹದೇವಪ್ರಸಾದ್	ಜೆಡಿಎಸ್	55,076
2008	ಹೆಚ್.ಎಸ್.ಮಹದೇವಪ್ರಸಾದ್	ಕಾಂಗ್ರೆಸ್	64,824
2013	ಹೆಚ್.ಎಸ್.ಮಹದೇವಪ್ರಸಾದ್	ಕಾಂಗ್ರೆಸ್	73,723
2017(ಉ.ಚು)	ಗೀತಾ ಮಹದೇವಪ್ರಸಾದ್	ಕಾಂಗ್ರೆಸ್	90,260
2018	ಸಿ.ಎಸ್.ನಿರಂಜನ ಕುಮಾರ್	ಬಿಜೆಪಿ	94,151



ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರ

ಈ ಬಾರಿಯೂ ಹಣಾಹಣಿ ನಿರೀಕ್ಷೆ

ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಾತ್ರ ಘೋಷಣೆಯಾಗಿದ್ದು, ಬಿಜೆಪಿ, ಜೆಡಿಎಸ್ ಇನ್ನಿತರ ಪಕ್ಷಗಳ ಅಭ್ಯರ್ಥಿಗಳು ಇನ್ನೂ ಅಂತಿಮವಾಗಿಲ್ಲ. ಹೆಚ್.ಎಸ್.ಮಹದೇವಪ್ರಸಾದ್ ಹಾಗೂ ಗೀತಾ ದಂಪತಿ ಪುತ್ರ ಹೆಚ್.ಎಂ.ಗಣೇಶ್ ಪ್ರಸಾದ್ ಕಾಂಗ್ರೆಸ್ ಹುರಿಯಾಳಾಗಿ ಕಣಕ್ಕಿಳಿದಿದ್ದಾರೆ. ಸತತ ನಾಲ್ಕು ಬಾರಿ ಸೋಲಿನ ನಂತರ ಶಾಸಕರಾದ ನಿರಂಜನಕುಮಾರ್ ಮತ್ತೆ ಸ್ಪರ್ಧಿಸಲು ಅವಕಾಶ ಕೋರಿದ್ದಾರೆ. ಚಾಮುಲ್ ನಿರ್ದೇಶಕ ಎಂ.ಪಿ.ಸುನೀಲ್ ಮತ್ತಿತರರೂ ಬಿಜೆಪಿ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ. ಜೆಡಿಎಸ್ ಪಕ್ಷದ ಟಿಕೆಟ್‌ಗೂ ಭಾರೀ ಪೈಪೋಟಿ ನಡೆದಿದ್ದು, ಎಲ್ಲಾ ಪಕ್ಷಗಳ ಅಭ್ಯರ್ಥಿಗಳ ಘೋಷಣೆಯಾದ ಬಳಿಕ ಅಖಾಡ ರಂಗೇರಲಿದೆ.

ಈಗಿನ ಮತದಾರರ ವಿವರ	
ಪುರುಷರು	1,03418
ಮಹಿಳೆಯರು	1,07,008
ಇತರೆ	16
ಒಟ್ಟು	2,09,933
ಮತಗಟ್ಟೆಗಳು	249

ಕಳೆದ ಚುನಾವಣೆ(2018)ಯಲ್ಲಿ ಶೇ.87.50 ಮತದಾನವಾಗಿತ್ತು.

ಕಾಂಗ್ರೆಸ್‌ಗೆ ಸೇರಿದವರೆಲ್ಲರಿಗೂ ಟಿಕೆಟ್ ಕೊಡಲು ಆಗುವುದಿಲ್ಲ



ಬೆಂಗಳೂರು, ಏ.7–ಕಾಂಗ್ರೆಸ್‌ಗೆ ಸೇರಿದವರೆಲ್ಲರಿಗೂ ಟಿಕೆಟ್ ಕೊಡಬೇಕು ಎಂದರೆ ಆಗುವುದಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಶುಕ್ರವಾರ ಹೇಳಿದರು. ಟಿಕೆಟ್ ಆಕಾಂಕ್ಷಿಗಳ ಅಸಮಾಧಾನ ಸ್ಫೋಟಗೊಂಡಿರುವ ಸಂದರ್ಭದಲ್ಲೇ ಆ ಕುರಿತು ಪ್ರತಿಕ್ರಿಯಿಸಿದ ಅವರು, ರಾಜಕಾರಣ ಎಂದರೆ ಫುಟ್ಬಾಲ್ ಅಲ್ಲ, ಚೆಸ್ ಗೇಮ್ ಇದ್ದಂತೆ. ಕಾಂಗ್ರೆಸ್‌ಗೆ ಸೇರಿಸಿಕೊಳ್ಳುವಾಗ ಟಿಕೆಟ್ ಕೊಡುವುದಾಗಿ ಯಾರಿಗೂ ಹೇಳಿರಲಿಲ್ಲ.

ಬೇಷರತ್ ಆಗಿ ಪಕ್ಷಕ್ಕೆ ಸೇರಿಸಿಕೊಂಡಿದ್ದೆವು. ಪಕ್ಷಕ್ಕೆ ಸೇರಿದವರೆಲ್ಲರಿಗೂ ಟಿಕೆಟ್ ಕೊಡಲು ಆಗುವುದಿಲ್ಲ. ಅಸಮಾಧಾನ ಇರುವವರನ್ನು ಕರೆದು ಮಾತನಾಡುತ್ತೇವೆ, ಅಸಮಾಧಾನ ಸರಿಪಡಿಸುತ್ತೇವೆ ಎಂದು ಅವರು ಹೇಳಿದರು. ಚಿಕ್ಕಮಗಳೂರಿನ ಕಡೂರು ಕ್ಷೇತ್ರದಲ್ಲಿ ಜೆಡಿಎಸ್ ತೊರೆದು ಇತ್ತೀಚೆಗೆ ಕಾಂಗ್ರೆಸ್ ಸೇರಿರುವ ವೈಎಸ್‌ವಿ ದತ್ತಾ ಅವರಿಗೆ ಕಾಂಗ್ರೆಸ್ ಟಿಕೆಟ್ ದೊರೆಯಬಹುದು ಎಂಬ ನಿರೀಕ್ಷೆ ಇತ್ತು. ಆದರೆ, ಕಾಂಗ್ರೆಸ್ ಎರಡನೇ ಪಟ್ಟಿಯಲ್ಲಿ ಕಡೂರು ಕ್ಷೇತ್ರದಿಂದ ಆನಂದ್ ಅವರಿಗೆ ಟಿಕೆಟ್ ಘೋಷಿಸಲಾಗಿತ್ತು. ಇದಕ್ಕೆ ದತ್ತಾ ಅವರೂ ಅಸಮಾಧಾನ ವ್ಯಕ್ತಪಡಿಸಿದ್ದರು.

ಬಿಜೆಪಿ ನಾಯಕರ ವಿಷಯದಲ್ಲಿ ಚುನಾವಣಾ ಆಯೋಗ ಮೃದು ಧೋರಣೆ: ಕಾಂಗ್ರೆಸ್ ವಕ್ತಾರರ ಆರೋಪ

80 ವರ್ಷ ಮೇಲ್ಪಟ್ಟವರಿಗೆ ಮನೆಯಲ್ಲೇ ಮತದಾನ ನಿರ್ಧಾರ ಹಿಂಪಡೆಯಲು ಆಗ್ರಹ

ಮೈಸೂರು, ಏ.7(ಎಂಟಿವೈ)– ಕೇಂದ್ರದ ಬಿಜೆಪಿ ಸರ್ಕಾರದ ಕೈಗೊಂಬೆಯಂತೆ ವರ್ತಿಸುತ್ತಿರುವ ಚುನಾವಣಾ ಆಯೋಗ ವಿರೋಧ ಪಕ್ಷಗಳ ನಾಯಕರ ವಿರುದ್ಧ ರಾಕೆಟ್ ವೇಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಬಿಜೆಪಿ ನಾಯಕರ ವಿರುದ್ಧ ಮೃದು ಧೋರಣೆ ಅನುಸರಿಸುತ್ತಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಕಿಡಿಕಾರಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣಾ ನೀತಿ ಸಂಹಿತೆ ಜಾರಿಗೆ ಬರುವ ಮುನ್ನವೇ ಮಾಜಿ ಸಿಎಂ ಸಿದ್ದರಾಮಯ್ಯ ಅವರು ತಮ್ಮನ್ನು ಸ್ವಾಗತ ಕೋರಿದ ಕಲಾವಿದರಿಗೆ 1 ಸಾವಿರ ರೂ. ನೀಡಿದರು. ವೇದಿಕೆ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಅವರನ್ನು ಪೆದ್ದ ಎಂದು ಟೀಕಿಸಿದ್ದರು. ಈ ಸಂಬಂಧ ಚುನಾವಣಾ ಆಯೋಗ ತಾನು ಬಿಜೆಪಿ ಪರ ಇರುವುದಾಗಿ ತೋರಿಸಿಕೊಳ್ಳಲು ಪ್ರಕರಣ ದಾಖಲಿಸಿದೆ. ಏಕಪಕ್ಷೀಯವಾಗಿ ವರ್ತಿಸುತ್ತಿರುವ ಆಯೋಗ ಮತ್ತು ಅಧಿಕಾರಿಗಳ ಕರ್ತವ್ಯವನ್ನು ಶ್ಲಾಘಿಸಬೇಕು. ಎರಡು ಪ್ರಕರಣಗಳಲ್ಲಿ ತ್ವರಿತವಾಗಿ ಕರ್ತವ್ಯ ನಿರ್ವಹಿಸಿದ ಅಧಿಕಾರಿಗಳು, ಸಿದ್ದರಾಮಯ್ಯ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಇದನ್ನು ನಾವು ವಿರೋಧಿಸುವುದಿಲ್ಲ. ಜಿಲ್ಲಾಧಿಕಾರಿಗಳಿಗೆ ಮೇಲಿನ ಅಧಿಕಾರಿಗಳಿಂದ ಒತ್ತಡ ಇರಬಹುದು ಎಂದರು.

ಚಲನಚಿತ್ರ ನಟಿ ಶ್ರುತಿ ನಿಮ್ಮ ವಂಶ ಬಿಟ್ಟು ಬೇರೆಯವರ ವಂಶಕ್ಕೆ ಮತ ನೀಡಬೇಡಿ ಎಂದು ಹೇಳುವ ಮೂಲಕ ವಿರೋಧ ಪಕ್ಷವನ್ನು ಹಗುರವಾದ ಪದ ಬಳಸಿ ಟೀಕಿಸಿದ್ದಾರೆ. ಇವರ ವಿರುದ್ಧ ಯಾಕೆ ಪ್ರಕರಣ ದಾಖಲಿಸಿಲ್ಲ. ಕೇಂದ್ರ ಸಚಿವೆ ಸ್ಮೃತಿ ಇರಾನಿ ವಂಶಸ್ಥರಂತೆ ಶ್ರುತಿ ಮಾತಾಡಿದ್ದಾರೆ. ಇವರ ವಿರುದ್ಧ ನಾವು ಪ್ರಕರಣ ದಾಖಲಿಸುತ್ತೇವೆ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ಮನೆಯಲ್ಲಿ ಮತದಾನ ಹಿಂಪಡೆಯಿರಿ: ಚುನಾವಣಾ ಆಯೋಗ ಕರ್ನಾಟಕ ವಿಧಾನಸಭೆಯಲ್ಲಿ ಹೊಸ ಪ್ರಯೋಗಕ್ಕೆ ಮುಂದಾಗಿದೆ. 80 ವರ್ಷ ಮೇಲ್ಪಟ್ಟವರು, ವಿಶೇಷಚೇತನರು ಮನೆಯಿಂದಲೇ ಮತದಾನ ಮಾಡುವ ಅವಕಾಶ ನೀಡಿದೆ. ಕುಟುಂಬದ ಸದಸ್ಯರ ಮೂಲಕ ಮತದಾರರನನ್ನು ಬುಕ್ ಮಾಡಿಕೊಳ್ಳಲಾಗಿದ್ದು, ಇದನ್ನು ಹಿಂಪಡೆಯಬೇಕು.

ಕೇಂದ್ರ ಸರ್ಕಾರ ಆಧಾರ್ ಪ್ಯಾನ್ ಕಾರ್ಡ್ ಲಿಂಕ್ ಮಾಡಿಸಲು ಸಾವಿರ ರೂ. ದಂಡ ಪಾವತಿಸಲು ಹೇಳಿರುವುದು ದುರಂತ. ಉಚಿತವಾಗಿ ಲಿಂಕ್ ಮಾಡಿಸಬೇಕು. ನಿರ್ಮಲಾ ಸೀತಾರಾಮನ್ ಅವರು ಕಾಂಗ್ರೆಸ್ ಗ್ಯಾರಂಟಿ ಸುಳ್ಳು ಎಂದಿದ್ದಾರೆ. ಶೇ.40 ಕಮಿಷನ್ ಉಳಿಸಿದರೆ ಈ ಯೋಜನೆಗಳನ್ನು ಜನರಿಗೆ ತಲುಪಿಸಬಹುದು ಎಂದು ನುಡಿದರು.

ಕೆಎಂಎಫ್ ಅಮುಲ್ ವಿಲೀನ ಮಾಡುವುದಿಲ್ಲ ಎಂದು ಬಿಜೆಪಿಯವರು ಹೇಳಿದ್ದರು. ಇದನ್ನು ತದ್ವಿರುದ್ಧವಾಗಿ ಅರ್ಥ ಮಾಡಿಕೊಳ್ಳಬೇಕು. ನಂದಿನಿ ಉತ್ಪನ್ನಗಳ ಕೃತಕ ಅಭಾವ ಸೃಷ್ಟಿಸಿ ಅಮುಲ್ ಉತ್ಪನ್ನಗಳ ಮಾರಾಟಕ್ಕೆ ಸರ್ಕಾರವೇ ಮುಂದಾಗಿದೆ. ಇದರಿಂದ ವಿರುದ್ಧ ಜನರು ಪ್ರತಿಭಟಿಸಬೇಕು ಎಂದರು. ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಗಿರೀಶ್, ಮಾಧ್ಯಮ ವಕ್ತಾರ ಮಹೇಶ್ ಇದ್ದರು.

ಅಧಿಕ ಹಣ: ಎಟಿಎಂಗೆ ಹಣ ತುಂಬುವ ವಾಹನಗಳು ಜಪ್ತಿ

ಬೆಂಗಳೂರು, ಏ. 7–ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಆರೋಪದಡಿ ಹೆಬ್ಬಗೋಡಿ ಠಾಣೆ ಪೊಲೀಸರು ಎಟಿಎಂಗೆ ಹಣ ಸಾಗಿಸುವ 3 ವಾಹನಗಳನ್ನು ಜಪ್ತಿ ಮಾಡಿ ಪ್ರಕರಣ ದಾಖಲಿಸಿದ್ದಾರೆ. ಪೊಲೀಸರು ವಾಹನ ತಪಾಸಣೆ ವೇಳೆ ಎಟಿಎಂಗೆ ಹಣ ಸಾಗಿಸುತ್ತಿದ್ದ ವಾಹನ ಸಿಬ್ಬಂದಿಯಿಂದ ದಾಖಲೆಗಳನ್ನು ಕೇಳಿದ್ದಾರೆ. ಒಂದು ವಾಹನದಲ್ಲಿ 10 ಲಕ್ಷ ರೂ. ಹೆಚ್ಚುವರಿಯಾಗಿ ಇದ್ದದ್ದು ಪತ್ತೆಯಾದ ಹಿನ್ನೆಲೆಯಲಿ ಮೂರೂ ವಾಹನಗಳನ್ನು ವಶಪಡಿಸಿಕೊಂಡು ರೈಟರ್ಸ್ ಕಂಪನಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಕಾಂಗ್ರೆಸ್ 2ನೇ ಪಟ್ಟಿ ಪ್ರಕಟಗೊಂಡ ಬೆನ್ನ ಹಿಂದೆಯೇ 'ಭಿನ್ನಮತ' ಸ್ಫೋಟ

ಕಡೂರಲ್ಲಿ ದತ್ತ, ಚಿತ್ರದುರ್ಗದಲ್ಲಿ ರಘು ಆಚಾರ್, ಕಿತ್ತೂರಲ್ಲಿ ಇನಾಮದಾರ್ ಕುಟುಂಬ, ಹಾನಗಲ್‌ನಲ್ಲಿ ಮನೋಹರ್ ತಹಸೀಲ್ದಾರ್, ತುಮಕೂರಲ್ಲಿ ಶಫಿ ಅಹಮದ್ ಕುಟುಂಬದಿಂದ ಭಿನ್ನ ರಾಗ; ಪಕ್ಷೇತರರಾಗಿ ಸ್ಪರ್ಧೆ ಇಲ್ಲವೇ ಪಕ್ಷ ತೊರೆಯುವ ನಿರ್ಧಾರ

ಮೈಸೂರು, ಏ.7–ಕಾಂಗ್ರೆಸ್ ಅಭ್ಯರ್ಥಿಗಳ 2ನೇ ಪಟ್ಟಿ ಪ್ರಕಟವಾದ ಬೆನ್ನಲ್ಲೇ ಹಲವು ಕ್ಷೇತ್ರಗಳಲ್ಲಿ ಬಂಡಾಯ ಭುಗಿಲೆದ್ದಿದೆ. ಕೆಲವೆಡೆ ಆಕಾಂಕ್ಷಿಗಳು ಪಕ್ಷ ತೊರೆದರೆ, ಮತ್ತೆ ಕೆಲವರು ಬೆಂಬಲಿಗರ ಸಭೆ ಕರೆದು ತೀರ್ಮಾನ ಕೈಗೊಳ್ಳುವುದಾಗಿ ಘೋಷಿಸಿದ್ದಾರೆ.

ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡ ಮಾಜಿ ಶಾಸಕ ವೈಎಸ್‌ವಿ ದತ್ತಾ ಅವರು ಕಡೂರು ಟಿಕೆಟ್‌ನ ಪ್ರಬಲ ಆಕಾಂಕ್ಷಿಯಾಗಿದ್ದರು. ಆದರೆ, ಈ ಕ್ಷೇತ್ರದಲ್ಲಿ ಆನಂದ್ ಅವರಿಗೆ ಟಿಕೆಟ್ ಘೋಷಣೆಯಾಗಿದ್ದರಿಂದ ತೀವ್ರ ಅಸಮಾಧಾನಗೊಂಡಿರುವ ಅವರು, ಇದೇ ಭಾನುವಾರ ಬೆಂಬಲಿಗರ ಸಭೆ ಕರೆದಿದ್ದಾರೆ. ನಾನೇನು ಟಿಕೆಟ್ ಕೇಳಿರಲಿಲ್ಲ. ಬೇರೆಯವರಿಗೆ ಟಿಕೆಟ್ ದೊರೆತಿರುವುದಕ್ಕೆ ಅಸಮಾಧಾನವೂ ಇಲ್ಲ. ಅವರಿಗೆ ಒಳ್ಳೆಯದಾಗಲಿ ಎಂದಿರುವ ದತ್ತಾ, ಕಾಂಗ್ರೆಸ್ ವರಿಷ್ಠರು ಆಂತರಿಕ ಸಮೀಕ್ಷೆಯ ವರದಿ ಆಧಾರದ ಮೇರೆಗೆ ಟಿಕೆಟ್ ಕೊಡುತ್ತಾರೆ ಎಂದು ಭಾವಿಸಿದ್ದೆ. ಆದರೆ ಅದಾಗಲಿಲ್ಲ. ನನಗೆ ಟಿಕೆಟ್ ಕೈತಪ್ಪಿದ್ದರಿಂದ ನನ್ನ ಅಭಿಮಾನಿಗಳಿಗೆ ತೀವ್ರ ಅಸಮಾಧಾನವಾಗಿದೆ. ಮಹಿಳೆಯರು ಕಣ್ಣೀರಿಡುತ್ತಿದ್ದಾರೆ. ಪಕ್ಷೇತರರಾಗಿ ಸ್ಪರ್ಧಿಸುವಂತೆ ಒತ್ತಡ ಹೇರುತ್ತಿದ್ದಾರೆ. ಭಾನುವಾರ ಅಭಿಮಾನಿಗಳ ಸಭೆ ಕರೆದಿದ್ದು, ಅವರು ಹೇಳಿದಂತೆ ನಿರ್ಧಾರ ಕೈಗೊಳ್ಳುತ್ತೇನೆ ಎಂದು ದತ್ತಾ ತಿಳಿಸಿದರು. ಇದೇ ವೇಳೆ ಕಾಂಗ್ರೆಸ್ ಟಿಕೆಟ್ ಪಡೆದಿರುವ ಆನಂದ್ ಅವರು ದತ್ತಾ ಅವರ ಮನೆಗೆ ಆಗಮಿಸಿ, ಮನವೊಲಿಸಲು ಪ್ರಯತ್ನಿಸಿದರು. ಆದರೆ, ಅದಾಗಲೇ ದತ್ತಾ ಮನೆ ಮುಂದೆ ನೆರೆದಿದ್ದ ಅಪಾರ ಸಂಖ್ಯೆಯ ಬೆಂಬಲಿಗರು. ಆನಂದ್ ಸಮ್ಮುಖದಲ್ಲೇ ದತ್ತಾ ಅವರನ್ನು ಪಕ್ಷೇತರರಾಗಿ ಸ್ಪರ್ಧಿಸುವಂತೆ ಒತ್ತಾಯಿಸಿದರು.



ರಘು ಆಚಾರ್

ರಘು ಆಚಾರ್ ಶೀಘ್ರ ಜೆಡಿಎಸ್ ಸೇರ್ಪಡೆ: ಚಿತ್ರದುರ್ಗ ವಿಧಾನಸಭಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದ ವಿಧಾನಪರಿಷತ್ ಮಾಜಿ ಸದಸ್ಯ ರಘು ಆಚಾರ್ ಅವರು ಟಿಕೆಟ್ ತಪ್ಪಿದ್ದರಿಂದ ಜೆಡಿಎಸ್ ಸೇರಲು ನಿರ್ಧರಿಸಿದ್ದಾರೆ. ರಘು ಆಚಾರ್‌ಗೆ ಟಿಕೆಟ್ ತಪ್ಪುತ್ತಿದ್ದಂತೆಯೇ ಜೆಡಿಎಸ್‌ನ ವಿಧಾನಪರಿಷತ್ ಸದಸ್ಯ ಶರವಣ ಅವರು ರಘು ಆಚಾರ್ ಮನೆಗೆ ಭೇಟಿ ನೀಡಿ ಚರ್ಚಿಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ರಘು ಆಚಾರ್, ತಾವು ಏಪ್ರಿಲ್ 14ರಂದು ಜೆಡಿಎಸ್ ಸೇರಲಿರುವುದಾಗಿ ಘೋಷಿಸಿದರು. ಕಾಂಗ್ರೆಸ್‌ನಿಂದ ತಮಗೆ ಅನ್ಯಾಯವಾಗಿದೆ ಎಂದು ಆರೋಪಿಸಿದ ಅವರು ಚಿತ್ರದುರ್ಗ ಜಿಲ್ಲೆಯ ಎಲ್ಲಾ ಆರು ಕ್ಷೇತ್ರಗಳಲ್ಲೂ ಕಾಂಗ್ರೆಸ್ ಸೋಲಲಿದೆ ಎಂದು ಭವಿಷ್ಯ ನುಡಿದರು.

ಮತ್ತೊಂದೆಡೆ ಹಾನಗಲ್ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್ ಬಯಸಿದ್ದ ಮಾಜಿ ಸಚಿವ ಮನೋಹರ ತಹಸೀಲ್ದಾರ್, ತಾವು ಜೆಡಿಎಸ್ ಸೇರ್ಪಡೆಯಾಗುವುದಾಗಿ ಘೋಷಿಸಿದರು. ಇದೇ ವೇಳೆ ಮಾತನಾಡಿದ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ, ಕ್ಷೇತ್ರದ ಜನತೆ ತಹಸೀಲ್ದಾರ್ ಅವರನ್ನು ಗೆಲ್ಲಿಸುವಂತೆ ಮನವಿ ಮಾಡಿದರು. ನರಗುಂದ ಕ್ಷೇತ್ರದಲ್ಲಿ ಟಿಕೆಟ್ ಕೈತಪ್ಪಿದ್ದರಿಂದ ಡಾ. ಸಂಗಮೇಶ ಕೊಳ್ಳಿಯವರು ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ತೀವ್ರ ಅಸಮಾಧಾನ ಹೊರ ಹಾಕಿದ್ದು, ಮುಂದಿನ ರಾಜಕೀಯ ನಿರ್ಧಾರ ಕೈಗೊಳ್ಳಲು ನಾಳೆ (ಶನಿವಾರ) ಬೆಂಬಲಿಗರ ಸಭೆ ಕರೆದಿರುವುದಾಗಿ ತಿಳಿಸಿದ್ದಾರೆ.



ವೈಎಸ್‌ವಿ ದತ್ತಾ

ಕಿತ್ತೂರು ಕ್ಷೇತ್ರದಲ್ಲಿ ಬಾಬಾ ಸಾಹೇಬ್ ಪಾಟೀಲ ಅವರನ್ನು ಅಭ್ಯರ್ಥಿಯನ್ನಾಗಿ ಕಾಂಗ್ರೆಸ್ ಘೋಷಿಸಿದ್ದರಿಂದ ಪಕ್ಷದ ಹಿರಿಯ ನಾಯಕ ಡಿ.ಬಿ. ಇನಾಮ್‌ದಾರ್ ಕುಟುಂಬಸ್ಥರು ಕಾಂಗ್ರೆಸ್‌ಗೆ ರಾಜೀನಾಮೆ ನೀಡಲು ನಿರ್ಧರಿಸಿದ್ದಾರೆ. ಈ ಸಂಬಂಧ ಬೆಳಗಾವಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಇನಾಮ್‌ದಾರ್ ಸೊಸೆ ಲಕ್ಷ್ಮೀ, ತಮ್ಮ ಮಾವ ಡಿ.ಬಿ. ಇನಾಮ್‌ದಾರ್ ಕಳೆದ 40 ವರ್ಷದಿಂದ ಕಾಂಗ್ರೆಸ್ ಪಕ್ಷ ಕಟ್ಟಿದ್ದಾರೆ. ಈಗ ಅವರಿಗೆ ಹುಷಾರಿಲ್ಲ. ಕಾಂಗೆಸ್ ಮುಖಂಡರು ಕಷ್ಟ ಕಾಲದಲ್ಲಿ ನಮ್ಮನ್ನು ಕೈಬಿಟ್ಟಿದ್ದಾರೆ. ಇನಾಮ್‌ದಾರ್ ಅವರಿಗೆ ಟಿಕೆಟ್ ತಪ್ಪಿರುವುದು ಕೆಟ್ಟ ಅನುಭವವಾಗಿದೆ. ನಮ್ಮ ಕುಟುಂಬದವರೆಲ್ಲರೂ ಕಾಂಗ್ರೆಸ್ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಲಿದ್ದೇವೆ ಎಂದು ತಿಳಿಸಿದರು. ತುಮಕೂರು ನಗರ ವಿಧಾನಸಭಾ ಕ್ಷೇತ್ರದಿಂದ ಮಾಜಿ ಶಾಸಕರೂ ಆದ ತಮ್ಮ ಅಳಿಯ ರಫೀಕ್ ಅಹಮದ್ ಅವರಿಗೆ ಟಿಕೆಟ್ ಕೈತಪ್ಪಿದ್ದರಿಂದ ಬೇಸತ್ತು ಮಾಜಿ ಶಾಸಕ ಶಫಿ ಅಹಮದ್ ಕಾಂಗ್ರೆಸ್ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ನಾವು 50 ವರ್ಷ ಕಾಲ ಪಕ್ಷಕ್ಕೆ ದುಡಿದಿದ್ದೇನೆ. ಎರಡು ಬಾರಿ ಶಾಸಕನಾಗಿದ್ದೆ. ನನ್ನ ಅಳಿಯ ಒಮ್ಮೆ ಶಾಸಕರಾಗಿದ್ದರು. ಆದರೆ ನಮ್ಮನ್ನು ಕಡೆಗಣಿಸಲಾಗಿದೆ ಎಂದು ತಮ್ಮ ರಾಜೀನಾಮೆ ಪತ್ರದಲ್ಲಿ ಅವರು ತಿಳಿಸಿದ್ದಾರೆ. ಕಳೆದ 4 ದಶಕಗಳಿಂದ ಶಫಿ ಅಹಮದ್ ಕುಟುಂಬದವರಿಗೆ ಟಿಕೆಟ್ ನೀಡುತ್ತಾ ಬಂದಿದ್ದ ಕಾಂಗ್ರೆಸ್ ಈ ಬಾರಿ ವಕ್ಫ್ ಬೋರ್ಡ್ ಮಾಜಿ ಅಧ್ಯಕ್ಷ ಇಕ್ಬಾಲ್ ಅಹಮದ್ ಅವರಿಗೆ ಟಿಕೆಟ್ ನೀಡಿದೆ.

ಕೊಳ್ಳೇಗಾಲದಲ್ಲಿ ಚುನಾವಣಾ ತಂತ್ರವೋ... ಅಭಿವೃದ್ಧಿ ಮಂತ್ರವೋ...!



■ ಮೋಹನ್ ಕಾಯಕ

ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣಾ ತಂತ್ರವೋ... ಅಭಿವೃದ್ಧಿ ಮಂತ್ರವೋ...! ಪರಿಶಿಷ್ಟ ಜಾತಿಗೆ ಮೀಸಲಾಗಿರುವ ಕೊಳ್ಳೇಗಾಲ ಕ್ಷೇತ್ರವು ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಮದ್ರಾಸ್ ಪ್ರಾಂತ್ಯಕ್ಕೆ ಸೇರಿತ್ತು. ಇದುವರೆಗೆ 15 ಚುನಾವಣೆಗಳು ನಡೆದಿದ್ದು, ಕಾಂಗ್ರೆಸ್ 9 ಬಾರಿ ತನ್ನ ಪ್ರಾಬಲ್ಯ ಸಾಧಿಸಿದರೆ, ಜನತಾಪಕ್ಷ 2, ಜನತಾದಳ, ಬಿಜೆಪಿ ಹಾಗೂ ಪಕ್ಷೇತರ ಅಭ್ಯರ್ಥಿಗಳು ತಲಾ ಒಮ್ಮೆ ಜಯಗಳಿಸಿದ್ದಾರೆ.

1957ರ 2ನೇ ಸಾರ್ವತ್ರಿಕ ಚುನಾವಣೆಯಲ್ಲಿ ದ್ವಿಸದಸ್ಯ ಕ್ಷೇತ್ರವಾಗಿತ್ತು. ಈ ಚುನಾವಣೆಯಲ್ಲಿ ಕಾಂಗ್ರೆಸ್‌ನ ಟಿ.ಪಿ.ಬೋರಯ್ಯ ಹಾಗೂ ಕೆಂಪಮ್ಮ ಆಯ್ಕೆಯಾದರು. 1962 ಮತ್ತು 1967ರಲ್ಲಿ ಕಾಂಗ್ರೆಸ್‌ನ ಬಿ.ಬಸವಯ್ಯ ಸತತವಾಗಿ ವಿಧಾನಸಭೆ ಪ್ರವೇಶ ಪಡೆದರು. ನಂತರ 1972ರಲ್ಲಿ ಕಾಂಗ್ರೆಸ್, 1978ರಲ್ಲಿ ಇಂದಿರಾ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ ಎಂ.ಸಿದ್ದಮಾದಯ್ಯ ಕೂಡ ಸತತ ಎರಡೂ ಭಾರಿ ಆಯ್ಕೆಯಾದರೂ ಹ್ಯಾಟ್ರಿಕ್ ಗೆಲುವು ಸಾಧ್ಯವಾಗಲಿಲ್ಲ. ಕಾಂಗ್ರೆಸ್ ತೊರೆದು ಜನತಾಪಕ್ಷದಿಂದ ಸ್ಪರ್ಧಿಸಿದ ಬಿ.ಬಸವಯ್ಯ, 1983 ಹಾಗೂ 1985ರಲ್ಲಿ ಆಯ್ಕೆಯಾಗುವ ಮೂಲಕ 4 ಬಾರಿ ಶಾಸಕರಾದ ಹೆಗ್ಗಳಿಕೆಗೆ ಪಾತ್ರರಾದರು. 1989ರಲ್ಲಿ ಕಾಂಗ್ರೆಸ್‌ನಿಂದ ಎಂ ಸಿದ್ದಮಾದಯ್ಯ ಮೂರನೇ ಬಾರಿ ಆಯ್ಕೆಯಾದರೆ, 1994ರಲ್ಲಿ ಜನತಾದಳದ ಅಭ್ಯರ್ಥಿ ಎಸ್.ಜಯಣ್ಣ ಜಯಗಳಿಸಿದರು. 1999ರಲ್ಲಿ ಕಾಂಗ್ರೆಸ್‌ನ ಜಿ.ಎನ್.ನಂಜುಂಡಸ್ವಾಮಿ ಆಯ್ಕೆಯಾದರು.

ಹ್ಯಾಟ್ರಿಕ್ ಸೋಲಿನ ನಂತರ ಗೆಲುವು: 2004ರಲ್ಲಿ ಪಕ್ಷೇತರ ಅಭ್ಯರ್ಥಿ ಎಸ್.ಬಾಲರಾಜ್ ಗೆದ್ದರೆ, 2008 ಕಾಂಗ್ರೆಸ್‌ನ ಆರ್.ಧ್ರುವನಾರಾಯಣ ಜಯಗಳಿಸಿದರು. ಆದರೆ, 2009ರಲ್ಲಿ ಆರ್.ಧ್ರುವನಾರಾಯಣ ಲೋಕಸಭೆಗೆ ಆಯ್ಕೆಯಾದ ಹಿನ್ನೆಲೆ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿಯಿಂದ ಜಿ.ಎನ್.ನಂಜುಂಡಸ್ವಾಮಿ ಸ್ಪರ್ಧಿಸಿ ಜಯಗಳಿಸುವ ಮೂಲಕ ಕ್ಷೇತ್ರದಲ್ಲಿ ಬಿಜೆಪಿಗೆ ಮೊದಲ ಗೆಲುವನ್ನು ತಂದುಕೊಟ್ಟರು. 2013ರಲ್ಲಿ ಕಾಂಗ್ರೆಸ್‌ನ ಎಸ್.ಜಯಣ್ಣ ಗೆದ್ದರು. 2004, 2008 ಹಾಗೂ 2013ರಲ್ಲಿ ಹ್ಯಾಟ್ರಿಕ್ ಸೋಲು ಅನುಭವಿಸಿದ್ದ ಬಿಸ್ಪಿಯ ಎನ್. ಮಹೇಶ್, 2018ರಲ್ಲಿ ಭರ್ಜರಿ ಗೆಲುವಿನೊಂದಿಗೆ ರಾಜ್ಯದಲ್ಲಿ ಬಿಎಸ್ಪಿಯ ಖಾತೆ ತೆರೆದರು.

ಚುನಾವಣಾ ಅಖಾಡದಲ್ಲಿ ನಿವೃತ್ತ ಐಎಎಸ್, ಐಪಿಎಸ್ ಅಧಿಕಾರಿಗಳು: 1972ರಲ್ಲಿ ಸಂಸ್ಥಾ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ನಿವೃತ್ತ ಐಎಎಸ್ ಅಧಿಕಾರಿ ಆರ್.ಭರಣಯ್ಯ, 2009ರ ಉಪ ಚುನಾವಣೆಯಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ಡಾ.ಸುಭಾಷ್ ಭರಣಿ ನಿಂತು ಸೋತಿದ್ದರು. ನಿವೃತ್ತ ಉನ್ನತ ಅಧಿಕಾರಿಗಳು ಚುನಾವಣಾ ಅಖಾಡದಲ್ಲಿ ಸ್ಪರ್ಧಿಸಿದರಾದರೂ ಗೆಲುವು ಮಾತ್ರ ಸಾಧ್ಯವಾಗಲಿಲ್ಲ.

ಕಾಂಗ್ರೆಸ್ ಅಭ್ಯರ್ಥಿಗಳ ಸತತ ಆಯ್ಕೆ: ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಲ್ಲಿ 1957 ರಿಂದ 1978ರವರೆಗೆ ನಡೆದ 5 ಚುನಾವಣೆಗಳಲ್ಲಿ ಸತತವಾಗಿ ಕಾಂಗ್ರೆಸ್ ಅಭ್ಯರ್ಥಿಗಳೇ ಆಯ್ಕೆಯಾಗಿದ್ದಾರೆ. 1957ರಲ್ಲಿ ಟಿ.ಪಿ.ಬೋರಯ್ಯ, ಕೆಂಪಮ್ಮ, 1962 ಮತ್ತು 1967ರಲ್ಲಿ ಬಿ.ಬಸವಯ್ಯ, 1972 ಮತ್ತು 1978ರಲ್ಲಿ ಎಂ.ಸಿದ್ದಮಾದಯ್ಯ ಆಯ್ಕೆಯಾಗಿದ್ದಾರೆ.

ಮೊದಲ ಆಯ್ಕೆಯಲ್ಲೇ ಮಂತ್ರಿ: 2018ರ ಚುನಾವಣೆಯಲ್ಲಿ ಮೊದಲ ಬಾರಿಗೆ ವಿಧಾನಸಭೆಗೆ ಬಿಎಸ್‌ಪಿಯಿಂದ ಆಯ್ಕೆಯಾದ ಎನ್.ಮಹೇಶ್, ಮೊದಲ ಆಯ್ಕೆಯಲ್ಲೇ ಮಂತ್ರಿ ಸ್ಥಾನ ಪಡೆದರು. ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಮಂತ್ರಿಯಾಗಿದ್ದ ಎನ್.ಮಹೇಶ್, ನಂತರದಲ್ಲಾದ ರಾಜಕೀಯ ಬದಲಾವಣೆಗಳಲ್ಲಿ ಬಿಎಸ್‌ಪಿಯಿಂದ ಉಚ್ಚಾಟನೆಗೊಳಪಟ್ಟ ಅವರು, ಬಿಜೆಪಿ ಸೇರಿದರು.

ವರ್ಷ	ಗೆದ್ದವರು	ಪಕ್ಷ	ಪಡೆದ ಮತ
1957	(ದ್ವಿಸದಸ್ಯ)		
	ಟಿ.ಪಿ.ಬೋರಯ್ಯ, ಕೆಂಪಮ್ಮ	ಕಾಂಗ್ರೆಸ್	27147
1962	ಬಿ.ಬಸವಯ್ಯ	ಕಾಂಗ್ರೆಸ್	12721
1967	ಬಿ.ಬಸವಯ್ಯ	ಕಾಂಗ್ರೆಸ್	16893
1972	ಎಂ.ಸಿದ್ದಮಾದಯ್ಯ	ಕಾಂಗ್ರೆಸ್	21455
1978	ಎಂ.ಸಿದ್ದಮಾದಯ್ಯ	ಕಾಂಗ್ರೆಸ್	28188
1983	ಬಿ.ಬಸವಯ್ಯ	ಜನತಾಪಕ್ಷ	28485
1985	ಬಿ.ಬಸವಯ್ಯ	ಜನತಾಪಕ್ಷ	27149
1989	ಎಂ.ಸಿದ್ದಮಾದಯ್ಯ	ಕಾಂಗ್ರೆಸ್	46998
1994	ಎಸ್.ಜಯಣ್ಣ	ಜನತಾದಳ	39568
1999	ಜಿ.ಎನ್.ನಂಜುಂಡಸ್ವಾಮಿ	ಕಾಂಗ್ರೆಸ್	29671
2004	ಎಸ್.ಬಾಲರಾಜ್	ಪಕ್ಷೇತರ	27736
2008	ಆರ್.ಧ್ರುವನಾರಾಯಣ	ಕಾಂಗ್ರೆಸ್	37384
2009	(ಉ.ಚು.)ಜಿ.ಎನ್.ನಂಜುಂಡಸ್ವಾಮಿ	ಬಿಜೆಪಿ	......
2013	ಎಸ್.ಜಯಣ	ಕಾಂಗ್ರೆಸ್	47402
2018	ಎನ್.ಮಹೇಶ್	ಬಿಎಸ್‌ಪಿ	71792



ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರ

ಆಕಾಂಕ್ಷಿಗಳು
ಕಾಂಗ್ರೆಸ್ ಎ.ಆರ್.ಕೃಷ್ಣಮೂರ್ತಿ
ಬಿಜೆಪಿ ಎನ್.ಮಹೇಶ್
ಜೆಡಿಎಸ್ ಓಲೆ ಮಹದೇವ್, ಪುಟ್ಟಸ್ವಾಮಿ

ಮತದಾರರ ವಿವರ...	
ಪುರುಷರು	– 104794
ಮಹಿಳೆಯರು	– 107286
ಇತರೆ	– 19
ಒಟ್ಟು	– 212081
ಮತಗಟ್ಟೆ	– 241

ಕೊಡವ ಕುಟುಂಬಗಳ 'ಅಪ್ಪಚೆಟ್ಟೋಳಂಡ' ಹಾಕಿ ಉತ್ಸವ

ಕುಲ್ಲೇಟಿರ, ಕುಪ್ಪಂಡ ತಂಡಗಳು ಫೈನಲ್‌ಗೆ

ನಾಳೆ ಚಾಂಪಿಯನ್ ಪಟ್ಟಕ್ಕಾಗಿ ಸೆಣಸಾಟ





ನಾಪೋಕ್ಲು, ಏ.7– ನಾಪೋಕ್ಲುವಿನಲ್ಲಿ ನಡೆಯುತ್ತಿರುವ 23ನೇ ವರ್ಷದ ಕೊಡವ ಕೌಟುಂಬಿಕ 'ಅಪ್ಪಚೆಟ್ಟೋಳಂಡ ಹಾಕಿ ಉತ್ಸವ'ದ ಸೆಮಿಫೈನಲ್‌ಗಳಲ್ಲಿ ವೀರೋಚಿತ ಗೆಲುವು ಸಾಧಿಸಿದ ಕುಲ್ಲೇಟಿರ ಮತ್ತು ಕುಪ್ಪಂಡ (ಕೈಕೇರಿ) ತಂಡಗಳು ಭಾನುವಾರ ನಡೆಯುವ ಫೈನಲ್ಸ್ ಪಂದ್ಯದಲ್ಲಿ 'ಚಾಂಪಿಯನ್' ಪಟ್ಟಕ್ಕಾಗಿ ಸೆಣಸಲಿವೆ.

ಕಿಕ್ಕಿರಿದು ತುಂಬಿದ್ದ ಪ್ರೇಕ್ಷಕರ ಸಮ್ಮುಖದಲ್ಲಿ ನಡೆದ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಕುಲ್ಲೇಟಿರ ತಂಡ 'ಟೈ ಬ್ರೇಕರ್' ಮೂಲಕ ಬಲಿಷ್ಠ ನೆಲ್ಲಮಕ್ಕಡ ತಂಡವನ್ನು 4–3 ಗೋಲುಗಳ ಅಂತರದಿಂದ ಮಣಿಸುವ ಮೂಲಕ ಮೊದಲ ತಂಡವಾಗಿ ಫೈನಲ್ ಪ್ರವೇಶಿಸಿತು.

ಕುಲ್ಲೇಟಿರ ಫೈನಲ್‌ಗೆ: ಅತ್ಯಂತ ಕುತೂಹಲಕಾರಿಯಾಗಿದ್ದ ಪಂದ್ಯದ ಮೊದಲಾರ್ಧದ 24ನೇ ನಿಮಿಷದಲ್ಲಿ ಕುಲ್ಲೇಟಿರ ತಂಡಕ್ಕೆ ದೊರೆತ ಪೆನಾಲ್ಟಿ ಕಾರ್ನರ್ ಅನ್ನು ತಂಡದ ಯಾಶಿಕ್ ಅವರು ಗೋಲಾಗಿ ಪರಿವರ್ತಿಸಿ ತಂಡಕ್ಕೆ 1–0 ಗೋಲಿನ ಮುನ್ನಡೆಯನ್ನು ದೊರಕಿಸಿಕೊಟ್ಟರು. ದ್ವಿತೀಯಾರ್ಧದ 52ನೇ ನಿಮಿಷದಲ್ಲಿ ನೆಲ್ಲಮಕ್ಕಡ ತಂಡದ ಮೊಣ್ಣಪ್ಪ ಅವರು ಸೊಗಸಾದ ಗೋಲು ಬಾರಿಸುವ ಮೂಲಕ ಪಂದ್ಯ 1–1 ಗೋಲಿನಿಂದ 'ಡ್ರಾ' ಕಂಡಿತು.

ನಂತರ ವಿಜೇತ ತಂಡವನ್ನು ನಿರ್ಧರಿಸಲು ನಡೆದ 'ಟೈ ಬ್ರೇಕರ್'ನಲ್ಲಿ ಕುಲ್ಲೇಟಿರ ತಂಡದ ನಾಚಪ್ಪ, ಯತಿನ್, ಚಿಟ್ಟಿಯಪ್ಪ ಅವರು ಗೋಲು ಗಳಿಸಿದರೆ, ನೆಲ್ಲಮಕ್ಕಡ ತಂಡದ ಪರವಾಗಿ ಆಶಿಕ್ ಮತ್ತು ಪೂವಣ್ಣ ಮಾತ್ರ ಗೋಲು ಗಳಿಸಲು ಸಾಧ್ಯವಾಯಿತು. ಇದರಿಂದ ಕುಲ್ಲೇಟಿರ ತಂಡ ರೋಚಕ ಗೆಲುವು ದಾಖಲಿಸಿ ಫೈನಲ್ ತಲುಪಿತು.

ಕುಪ್ಪಂಡ ತಂಡಕ್ಕೆ ಗೆಲುವು: ದ್ವಿತೀಯ ಸೆಮಿಫೈನಲ್‌ನಲ್ಲಿ ಕುಪ್ಪಂಡ(ಕೈಕೇರಿ) ತಂಡವು ಕೊಡವ ಹಾಕಿ ಉತ್ಸವದಲ್ಲಿ ಈ ಹಿಂದೆ ಚಾಂಪಿಯನ್ ಪಟ್ಟಕ್ಕೇರಿದ್ದ ಬಲಿಷ್ಠ ಪಳಂಗಂಡ ತಂಡಕ್ಕೆ ಸೋಲಿನ ಕಹಿ ಉಣಿಸಿ ಫೈನಲ್ ಪ್ರವೇಶಿಸುವ ಮೂಲಕ ತನ್ನ ಆಟದ ಛಾಪು ಮೂಡಿಸಿತು. ಕುಪ್ಪಂಡ ತಂಡ 'ಟೈ ಬ್ರೇಕರ್' ಮೂಲಕ ಪಳಂಗಂಡ ತಂಡವನ್ನು 4–2 ಗೋಲುಗಳ ಅಂತರದಿಂದ ಸೋಲಿಸಿತು.

ನಿಗದಿತ ಅವಧಿಯಲ್ಲಿ ಉಭಯ ತಂಡಗಳು ಪ್ರಬಲ ಪೈಪೋಟಿ ನೀಡಿ ಗೋಲಿಗಾಗಿ ಸಾಕಷ್ಟು ಪ್ರಯತ್ನ ನಡೆಸಿದವು. ಅದರಲ್ಲಿ ಯಶ ಕಾಣದೆ ಪಂದ್ಯ 'ಡ್ರಾ'ನಲ್ಲಿ ಮುಕ್ತಾಯವಾಯಿತು. ವಿಜೇತ ತಂಡವನ್ನು ನಿರ್ಧರಿಸುವ 'ಟೈ ಬ್ರೇಕರ್'ನಲ್ಲಿ ಕುಪ್ಪಂಡ ತಂಡದ ಸೋಮಯ್ಯ, ಜಗತ್, ನಾಚಪ್ಪ ಮತ್ತು ಮಂದಣ್ಣ ಅವರುಗಳು ತಲಾ ಒಂದೊಂದು ಗೋಲು ಗಳಿಸಿದರು. ಪಳಂಗಂಡ ಪರವಾಗಿ ಅಜಯ್ ಮತ್ತು ಪ್ರಜ್ವಲ್ ಮಾತ್ರ ಒಟ್ಟು 2 ಗೋಲು ಗಳಿಸಲು ಶಕ್ತರಾಗುವುದರೊಂದಿಗೆ ಕುಪ್ಪಂಡ ಫೈನಲ್‌ಗೆ ತಲುಪಿತು. 3ನೇ ಮತ್ತು 4ನೇ ಸ್ಥಾನಕ್ಕಾಗಿ ಭಾನುವಾರ ನೆಲ್ಲಮಕ್ಕಡ ಮತ್ತು ಪಳಂಗಂಡ ತಂಡಗಳ ನಡುವೆ ಪೈಪೋಟಿ ನಡೆಯಲಿದೆ.

ಉದ್ಘಾಟನೆ: ಸಾವಿರಾರು ಸಂಖ್ಯೆಯಲ್ಲಿ ನೆರೆದಿದ್ದ ಕ್ರೀಡಾ ಪ್ರೇಮಿಗಳ ಸಮ್ಮುಖದಲ್ಲಿ ಸೆಮಿಫೈನಲ್ ಪಂದ್ಯವನ್ನು ಭಾರತ ಹಾಕಿ ತಂಡದ ಮಾಜಿ ನಾಯಕ ಮನೆಯಪಂಡ ಎಂ.ಸೋಮಯ್ಯ ಉದ್ಘಾಟಿಸಿದರು. ಈ ಸಂದರ್ಭ ಯುಕೋ ಸಂಘಟನೆಯ ಅಧ್ಯಕ್ಷ ಕೊಕ್ಕಲೆಮಾಡ ಮಂಜು ಚಿಣ್ಣಪ್ಪ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಅಜ್ಜಮಾಡ ರಮೇಶ್ ಕುಟ್ಟಪ್ಪ, ಪೂಮಾಲೆ ಕೊಡವ ಪತ್ರಿಕೆಯ ಸಂಪಾದಕ ಅಜ್ಜಿನಿಕಂಡ ಮಹೇಶ್ ನಾಚಯ್ಯ ಮೊದಲಾದ ಗಣ್ಯರು ಹಾಜರಿದ್ದರು.

ಸನ್ಮಾನ: ಸಮಾರಂಭದಲ್ಲಿ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ಪಾಲೇಕಂಡ ಬೋಪಯ್ಯ, ಪಾಲೇಕಂಡ ಬೆಳ್ಳಿಯಪ್ಪ ಮತ್ತು ಮಾರಮಾಡ ಮಾಚಮ್ಮ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭ ಉತ್ಸವ ಸಮಿತಿಯ ಪ್ರಮುಖರಾದ ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ, ಪಟ್ಟೆದಾರ ಅಪ್ಪಚೆಟ್ಟೋಳಂಡ ಮಿಟ್ಟು ಈರಪ್ಪ ಹಾಗೂ ಇತರ ಅತಿಥಿ ಗಣ್ಯರು ಉಪಸ್ಥಿತರಿದ್ದರು.

ವಿಶ್ವಾಸವಿಟ್ಟು ನನಗೆ ಟಿಕೆಟ್ ನೀಡಿದ ಪಕ್ಷದ ಎಲ್ಲಾ ನಾಯಕರಿಗೂ ಧನ್ಯವಾದ

ಮಡಿಕೇರಿ ಕಾಂಗ್ರೆಸ್ ಅಭ್ಯರ್ಥಿ ಮಂಥರ್‌ಗೌಡ ಪ್ರತಿಕ್ರಿಯೆ



ಮಡಿಕೇರಿ, ಏ.7– ವಿಧಾನಸಭಾ ಚುನಾವಣೆಗೆ ಮಡಿಕೇರಿ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಯುವ ಮುಖಂಡ ಡಾ.ಮಂಥರ್ ಗೌಡ ಅವರ ಹೆಸರನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಘೋಷಿಸಿ, ಕಾಂಗ್ರೆಸ್ ಅಭ್ಯರ್ಥಿ ಯಾರಾಗಬಹುದೆಂಬ ರಾಜಕೀಯಾಸಕ್ತರ ಕುತೂಹಲಕ್ಕೆ ತೆರೆ ಎಳೆದಿದೆ.

ಮಡಿಕೇರಿ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ತಮ್ಮ ಹೆಸರು ಘೋಷಣೆಯಾದ ಕುರಿತು ಪ್ರಥಮ ಪ್ರತಿಕ್ರಿಯೆ ನೀಡಿದ ಡಾ.ಮಂಥರ್ ಗೌಡ ಅವರು, ಕಿರಿಯ ವಯಸ್ಸಿನಲ್ಲಿ ತಮ್ಮ ಮೇಲೆ ವಿಶ್ವಾಸವಿಟ್ಟು ತಮ್ಮನ್ನು ಅಭ್ಯರ್ಥಿಯನ್ನಾಗಿ ಘೋಷಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಪ್ರತಿಪಕ್ಷ ನಾಯಕರಾದ ಸಿದ್ದರಾಮಯ್ಯ, ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಪಕ್ಷದ ಎಲ್ಲಾ ಮುಖಂಡರಿಗೆ ಧನ್ಯವಾದ ಸಲ್ಲಿಸಿದರು. ಕಳೆದ 25 ವರ್ಷಗಳಿಂದ ಮಡಿಕೇರಿ ಕ್ಷೇತ್ರದಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯದ ಹಿನ್ನೆಲೆಯಲ್ಲಿ ಕ್ಷೇತ್ರ ಮತದಾರರು ಹಾಗೂ ಪಕ್ಷದ ಹಿರಿಯರು ಈ ಬಾರಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲೇಬೇಕೆಂಬ ಬಯಕೆ ಹೊಂದಿದ್ದು, ಕ್ಷೇತ್ರದ ಮತದಾರರು, ಯುವ ಸಮುದಾಯ ಈ ಬಾರಿ ತಮ್ಮನ್ನು ಆಶೀರ್ವದಿಸಬೇಕೆಂದು ಡಾ.ಮಂಥರ್‌ಗೌಡ ಮನವಿ ಮಾಡಿದರು.

ಮಡಿಕೇರಿ ಕ್ಷೇತ್ರದಿಂದ ಈ ಬಾರಿ ಏಳು ಮಂದಿ ಪಕ್ಷದ ಟಿಕೆಟ್ ಆಕಾಂಕ್ಷಿಗಳಾಗಿದ್ದು, ಯಾರಿಗೆ ಟಿಕೆಟ್ ದೊರೆತರೂ ಎಲ್ಲರೂ ಒಗ್ಗೂಡಿ ಪಕ್ಷದ ಗೆಲುವಿಗೆ ಶ್ರಮಿಸಬೇಕೆಂಬ ಅಭಿಪ್ರಾಯ ಎಲ್ಲರಿಂದಲೂ ವ್ಯಕ್ತವಾಗಿತ್ತು.

ಈ ಹಿನ್ನೆಲೆಯಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಕಾಂಗ್ರೆಸ್ ಗೆಲುವಿಗೆ ಶ್ರಮಿಸುತ್ತಾರೆಂದು ಡಾ.ಮಂಥರ್‌ಗೌಡ ಅವರು ವಿಶ್ವಾಸ ವ್ಯಕ್ತಪಡಿಸಿದರು.

ಈಶ್ವರ ದೇವರ ಉತ್ಸವ ಸಂಪನ್ನ

ಗೋಣಿಕೊಪ್ಪ, ಏ.7– ಬೇಗೂರು ಗ್ರಾಮದ ಪೊಳೆಮಾಡ್ ಈಶ್ವರ ದೇವರ ಉತ್ಸವ ಆರು ದಿನ ನಡೆಯಿತು. ಶುಕ್ರವಾರ ಆರಾತ ಕಲಶ ಆಚರಣೆಯೊಂದಿಗೆ ಸಂಪನ್ನಗೊಂಡಿತು. ಬುಧವಾರ ದೇವರ ನೀಲಕೊಡಿ ನಿಲ್ಲಿಸುವ ಆಚರಣೆಯೊಂದಿಗೆ ಆರಂಭವಾದ ಹಬ್ಬದಲ್ಲಿ ನಾಡ್‌ಬೊಳಕ್, ಹರಕೆ ಬೊಳಕ್, ನೆರ್ಪು, ದೇವರ ಅವಭೃತ ಸ್ನಾನ, ತಡುಂಬು ಪ್ರದಕ್ಷಿಣೆ ನಡೆಯಿತು. ಗ್ರಾಮದ ಭಕ್ತರು ದೇವರ ಕೃಪೆಗೆ ಪಾತ್ರರಾದರು.

ಶ್ರೀ ರಾಮ ಪಟ್ಟಾಭಿಷೇಕ ಅಂಗವಾಗಿ ಪೌರಾಣಿಕ ಪ್ರಸಂಗ ಪ್ರದರ್ಶನ

ಕುಶಾಲನಗರ, ಏ.7– ಪಟ್ಟಣದ ಬ್ರಾಹ್ಮಣ ಕ್ಷೇಮಾಭಿವೃದ್ಧಿ ಸಂಘ ಮತ್ತು ಶ್ರೀ ರಾಮ ಸೇವಾ ಸಮಿತಿ ಆಶ್ರಯದಲ್ಲಿ ರಾಮೋತ್ಸವದ ಅಂಗವಾಗಿ ಶುಕ್ರವಾರ ಶ್ರೀರಾಮ ಪಟ್ಟಾಭಿಷೇಕ ಕಾರ್ಯಕ್ರಮ ನಡೆಯಿತು.

ಮಹಾಗಣಪತಿ ಹೋಮ, ವಿಶೇಷ ಅಭಿಷೇಕಗಳು, ಶ್ರೀರಾಮತಾರಕ ಹೋಮ, ಗಾಯತ್ರಿ, ಮೃತ್ಯುಂಜಯ ಹೋಮಗಳು ನಡೆದವು. ನಂತರ ಅನ್ನಸಂತರ್ಪಣೆ ನಡೆಯಿತು.



ಸಂಜೆ ಶ್ರೀ ಪಟ್ಟಾಭಿರಾಮನ ಭವ್ಯ ಮೆರವಣಿಗೆ ನಡೆಯಿತು. ರಾಮೋತ್ಸವ ಅಂಗವಾಗಿ 10 ದಿನಗಳ ಕಾಲ ವಿಶೇಷ ಪೂಜೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಸೇರಿದಂತೆ ರಾಮನವಮಿ, ಸೀತಾಕಲ್ಯಾಣ ಮತ್ತಿತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ರಥಬೀದಿಯಲ್ಲಿರುವ ಸಂಘದ ಕಛೇರಿಯಲ್ಲಿ ವೇದ ಬ್ರಹ್ಮ ಕೆ.ಕೆ.ಸುಬ್ಬುರಾಮು ಅವರ ನೇತೃತ್ವದಲ್ಲಿ ಪ್ರತಿದಿನ ಮಧ್ಯಾಹ್ನ, ಸಂಜೆ ಮಹಾಮಂಗಳಾರತಿ ಕಾರ್ಯಕ್ರಮ ನಡೆಯುತ್ತಿದೆ. ಶ್ರೀರಾಮ ಪಟ್ಟಾಭಿಷೇಕ ಕಾರ್ಯಕ್ರಮ ಸಂದರ್ಭ ಸಂಘದ ಅಧ್ಯಕ್ಷ ಕೆ.ಎಸ್.ರಾಜಶೇಖರ್, ಖಜಾಂಚಿ ಶ್ರೀದೇವಿ ವೆಂಕಟರಮಣ ರಾವ್, ಕಾರ್ಯದರ್ಶಿ ಅನಿಲ್ ಶೇಷಾದ್ರಿ, ರಾಮೋತ್ಸವ ಸಮಿತಿ ಅಧ್ಯಕ್ಷ ಬಿ.ಆರ್.ಶಶಿಧರ್, ಕಾರ್ಯದರ್ಶಿ ಸತೀಶ್, ಖಜಾಂಚಿ ಕೆ.ವಿ.ಉದಯ, ಪ್ರಮುಖರಾದ ಎಂ.ವಿ.ನಾರಾಯಣ, ಡಾ.ರಾಧಾಕೃಷ್ಣ, ರಮಾ ವಿಜಯೇಂದ್ರ, ಶರ್ಮಿಳ ಮಂಜುನಾಥ್, ದೀಪಿಕ ರಾಘವೇಂದ್ರ, ಸೀತಾಲಕ್ಷ್ಮಿ, ವಿಜಯಶ್ರೀ, ರಜನಿ ಪ್ರದೀಪ್ ಮತ್ತಿತರರು ಇದ್ದರು. ಶನಿವಾರ ಹನುಮಂತೋತ್ಸವ ಬಳಿಕ ಸಮಾರೋಪ ಸಮಾರಂಭ ನಡೆಯಲಿದೆ.

ಸಾಂಸ್ಕೃತಿಕ ಕಾರ್ಯಕ್ರಮ: ದಕ್ಷಿಣ ಕನ್ನಡ ಖ್ಯಾತಿಯ ತಾಳಮದ್ದಳೆ ಕಾರ್ಯಕ್ರಮವನ್ನು ಎಲ್ಲರ ಗಮನ ಸೆಳೆಯಿತು. ಪುತ್ತೂರಿನ ಧೀಶಕ್ತಿ ಯಕ್ಷಗಾನ ಬಳಗದಿಂದ ಶ್ರೀರಾಮ ಪಟ್ಟಾಭಿಷೇಕ ಎಂಬ ಪೌರಾಣಿಕ ಪ್ರಸಂಗವನ್ನು ಸ್ವಾರಸ್ಯಕರವಾಗಿ ಮಂಡಿಸಲಾಯಿತು. ಸುಬ್ರಾಯ ಸಂಪಾಜೆ ಅವರ ಕಂಚಿನ ಕಂಠದ ಭಾಗವತಿಕೆಗೆ ಪದ್ಮಶ್ರೀ ತಂಡದ ಕಲಾವಿದರು ಪೂರಕವಾದ ಅರ್ಥ ವಿವರಣೆ ನೀಡಿದರು.

ಮಡಿಕೇರಿ ಕಾಂಗ್ರೆಸ್‌ನಲ್ಲಿ ಬಂಡಾಯದ ಕಹಳೆ...

ಟಿಕೆಟ್ ಆಕಾಂಕ್ಷಿ ಹರಪ್ಪಳ್ಳಿ ರವೀಂದ್ರ ಕಾಂಗ್ರೆಸ್ ಅಭ್ಯರ್ಥಿ ಮಂಥರ್‌ಗೌಡ ವಿರುದ್ಧ ಸ್ಪರ್ಧೆಗೆ ನಿರ್ಧಾರ

ಮಡಿಕೇರಿ, ಏ.7– ಮಡಿಕೇರಿ ಕಾಂಗ್ರೆಸ್ ವಲಯದಲ್ಲಿ ಬಂಡಾಯದ ಕಹಳೆ ಮೊಳಗಿದ್ದು, ಕಾಂಗ್ರೆಸ್ ಅಭ್ಯರ್ಥಿ ಮಂಥರ್‌ಗೌಡ ಸ್ಪರ್ಧೆಗೆ ಭಾರೀ ವಿರೋಧ ವ್ಯಕ್ತವಾಗಿದೆ.

ಮಡಿಕೇರಿ ಕ್ಷೇತ್ರದಿಂದ ಸ್ಪರ್ಧಾಕಾಂಕ್ಷಿಯಾಗಿದ್ದ ಹರಪ್ಪಳ್ಳಿ ರವೀಂದ್ರ ಅವರು ಕಾಂಗ್ರೆಸ್ ಟಿಕೆಟ್ ತಪ್ಪಿರುವ ಹಿನ್ನೆಲೆಯಲ್ಲಿ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿಯುವ ನಿರ್ಧರಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಹರಪ್ಪಳ್ಳಿ ರವೀಂದ್ರ ಅವರು, ಜಿಲ್ಲೆಯ ಸರ್ವತೋಮುಖ ಪ್ರಗತಿಯ ಚಿಂತನೆಯಡಿ ಕೊಡಗಿನ ಚಿತ್ರಣವನ್ನೇ ಬದಲಿಸಬೇಕೆನ್ನುವ ಉದ್ದೇಶದಿಂದ ರಾಜಕೀಯ ಅಧಿಕಾರವನ್ನು ಪಡೆಯಲು ಕಾಂಗ್ರೆಸ್ ಪಕ್ಷದಿಂದ ಈ ಕ್ಷೇತ್ರದಲ್ಲಿ ಸ್ಪರ್ಧಿಸಲು ಉದ್ದೇಶಿಸಿದ್ದೆ. ಕೊನೆಯ ಕ್ಷಣಗಳಲ್ಲಿ ಪಕ್ಷದ ಟಿಕೆಟ್ ವಂಚಿತನಾಗಿದ್ದೇನೆ. ಶನಿವಾರ ಶನಿವಾರ ಸಂತೆಯಲ್ಲಿ ಬೆಂಬಲಿಗರ ಸಭೆ ನಡೆಯಲಿದ್ದು, ಅಲ್ಲಿನ ನಿರ್ಧಾರದಂತೆ ಮುಂದಿನ ಹೆಜ್ಜೆ ಇಡುವುದಾಗಿ ತಿಳಿಸಿದರಲ್ಲದೇ, ಪಕ್ಷೇತರರಾಗಿ ಕಣಕ್ಕಿಳಿಯುವ ಸಾಧ್ಯತೆಗಳನ್ನು ತೆರೆದಿಟ್ಟು, ಏ.17ರಂದು ನಾಮಪತ್ರ ಸಲ್ಲಿಕೆ ಮಾಡಬೇಕೆನ್ನುವ ಉದ್ದೇಶವಿದೆ ಎಂದು ತಿಳಿಸಿದರು.

ಕಳೆದ ಎರಡೂವರೆ ದಶಕಗಳಿಂದ ಪ್ರಚಾರದ ಹಂಗಿಲ್ಲದೆ ಸಾಮಾಜಿಕ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡು ಬರುತ್ತಿದ್ದೇನೆ. ತಾನು



ಒಕ್ಕಲಿಗರ ಸಂಘದ ಪದಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಹಂತದಲ್ಲಿ ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ಅವರು, ಮಡಿಕೇರಿ ಕ್ಷೇತ್ರದಿಂದ ಟಿಕೆಟ್ ನೀಡುವ ಭರವಸೆ ನೀಡಿ ತನ್ನನ್ನು ಕಾಂಗ್ರೆಸ್‌ಗೆ ಕರೆ ತಂದರು. ಇದೀಗ ಅವರು ನೀಡಿದ ಭರವಸೆಗಳು ಹುಸಿಯಾಗಿದ್ದು, ಟಿಕೆಟ್ ವಂಚಿತನಾಗಿರುವುದಾಗಿ ಬೇಸರ ವ್ಯಕ್ತಪಡಿಸಿದರು.

ಮಡಿಕೇರಿ ಕ್ಷೇತ್ರದಿಂದ ಸ್ಪರ್ಧಿಸಲು ಆರಂಭಿಕ ಹಂತದಲ್ಲಿ ಏಳು ಮಂದಿ ಆಕಾಂಕ್ಷಿಗಳಿದ್ದರು. ಕೊನೆಯ ಹಂತದಲ್ಲಿ ಪಕ್ಷದ ವರಿಷ್ಠರ ಮುಂದೆ ತನ್ನ ಮತ್ತು ಮಂಥರ್ ಗೌಡ ಅವರ ಹೆಸರು ಮಾತ್ರ ಇತ್ತು. ತನಗೆ ಟಿಕೆಟ್ ದೊರಕಿಯೇ ತೀರುತ್ತದೆನ್ನುವ ವಿಶ್ವಾಸವಿತ್ತಾದರು, ಟಿಕೆಟ್ ಮಂಥರ್ ಗೌಡ ಅವರಿಗೆ ದೊರಕಿದೆ ಎಂದು ತಿಳಿಸಿದರು.

ಅಭಿವೃದ್ಧಿಯ ಚಿಂತನೆ ಹೊಂದಿದ್ದೆ: ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸುವ ಉದ್ದೇಶದ ಹಿಂದೆ ಕೊಡಗಿನ ಸಮಗ್ರ ಅಭಿವೃದ್ಧಿಯ ವಿಶಾಲ ಚಿಂತನೆ ಇತ್ತು. ರಾಜಕೀಯ ಅಧಿಕಾರದ ಮೂಲಕ ಅದನ್ನು ಸಾಧಿಸುವ ಉದ್ದೇಶ ಹೊಂದಿದ್ದೆ. ಮುಂದೆ ಯಾರೇ ಶಾಸಕರಾಗಿ ಆಯ್ಕೆಯಾಗಿ ಬಂದರು ಜಿಲ್ಲೆಯ ಜನತೆಗೆ ಅತ್ಯವಶ್ಯವಾಗಿ ಬೇಕಾಗಿರುವ 'ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ'ಗೆ ಒತ್ತು ನೀಡಬೇಕು ಮತ್ತು ಪ್ರಾಕೃತಿಕ ಸಂಪತ್ತು ಹೊಂದಿರುವ ಕೊಡಗಿನಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಬೇಕು ಎನ್ನುವ ಆಶಯವನ್ನು ವ್ಯಕ್ತಪಡಿಸಿದರು.

ಜಿಲ್ಲೆಯ ಪ್ರತಿ ತಾಲೂಕಿನಲ್ಲಿ ಸೈನಿಕ ಮತ್ತು ಕ್ರೀಡಾ ಶಾಲೆಯ ನಿರ್ಮಾಣ ಮಾಡಬೇಕು, ಜಿಲ್ಲೆಯ ಪ್ರತಿಭಾನ್ವಿತ ಯುವ ಸಮೂಹ ಐಎಎಸ್, ಐಪಿಎಸ್‌ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಅಗತ್ಯವಾದ ತರಬೇತಿ ಕೇಂದ್ರವನ್ನು ತೆರೆಯುವ ಹೊಣೆಗಾರಿಕೆಯನ್ನು ಮುಂದೆ ಶಾಸಕರಾಗಿ ಆಯ್ಕೆಯಾಗುವವರು ಹೊರಬೇಕೆಂದು ತಿಳಿಸಿದರು. ಪಕ್ಷೇತರ ಅಭ್ಯರ್ಥಿಯಾಗಿ ತಾನು ಕಣಕ್ಕಿಳಿದು ಗೆಲುವು ಸಾಧಿಸಿದಲ್ಲಿ ಕೊಡಗಿನ ಯುವ ಸಮೂಹಕ್ಕೆ ಅನುಕೂಲಕರವಾದ ಕಾರ್ಯಕ್ರಮಗಳನ್ನು ಜಾರಿಗೆ ತರುವುದು, ಅಭಿವೃದ್ಧಿ ಕಾರ್ಯಗಳ ಮೂಲಕ ಜಿಲ್ಲೆಯಲ್ಲಿ ಹೊಸ ಶಕೆಯನ್ನೆ ಆರಂಭಿಸುವುದು ನನ್ನ ಗುರಿಯಾಗಿದೆ ಎಂದು ಸ್ಪಷ್ಟಪಡಿಸಿದರು. ಗೋಷ್ಠಿಯಲ್ಲಿ ಕೆ.ಎಂ.ವೆಂಕಟೇಶ್ ಇದ್ದರು.

ರಾಷ್ಟ್ರೀಯ ಶಿಶಿಕ್ಷು ಮೇಳ ಮುಂದೂಡಿಕೆ

ಚಾಮರಾಜನಗರ, ಏ.7– ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ವತಿಯಿಂದ ಏ.10ರಂದು ನಿಗದಿಪಡಿಸಲಾಗಿದ್ದ ರಾಷ್ಟ್ರೀಯ ಶಿಶಿಕ್ಷು ಮೇಳವನ್ನು ಮುಂದೂಡಲಾಗಿದೆ. ಮೇಳದ ಮುಂದಿನ ದಿನಾಂಕವನ್ನು ತರಬೇತುದಾರರು ಹಾಗೂ ಉದ್ದಿಮೆದಾರರಿಗೆ ತಿಳಿಸಲಾಗುವುದೆಂದು ಜಿಲ್ಲಾ ಶಿಶಿಕ್ಷು ನೋಡಲ್ ಅಧಿಕಾರಿ ಹೆಚ್.ಪಿ. ಶ್ರೀಕಂಠಾರಾಧ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾರಂಭಕ್ಕೆ ನಿರಾಪೇಕ್ಷಣಾ ಪ್ರತಿ ಕಡ್ಡಾಯ

ಚಾಮರಾಜನಗರ, ಏ.7– ಜಿಲ್ಲೆಯಲ್ಲಿ ಹೊಸದಾಗಿ ಯಾವುದೇ ವ್ಯಕ್ತಿ, ಸಂಸ್ಥೆಯವರು ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾರಂಭಿಸಬೇಕಾದಲ್ಲಿ ಎನ್.ಸಿ.ವಿ.ಟಿ ನಿಯಮಾವಳಿ ಅನ್ವಯ ಅಗತ್ಯ ಮೂಲ ಸೌಕರ್ಯ ಹೊಂದಿದ್ದು ನವದೆಹಲಿಯ ಎನ್.ಸಿ.ವಿ.ಟಿ ಯಿಂದ ಸಂಯೋಜನೆ ಪಡೆಯಲು ಇಲಾಖೆಯಿಂದ ನಿರಾಪೇಕ್ಷಣಾ ಪ್ರತಿ ಪಡೆಯುವುದು ಕಡ್ಡಾಯವಾಗಿದ್ದು, ಎನ್.ಸಿ.ವಿ.ಟಿ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಏ.25 ವರೆಗೆ ಅವಕಾಶವಿದೆ. ಹೆಚ್ಚಿನ ಮಾಹಿತಿಗಾಗಿ ಗುಂಡ್ಲುಪೇಟೆಯ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾಚಾರ್ಯರು ಮೊ.ಸಂಖ್ಯೆ: 9980895590 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಅರಕಲವಾಡಿಯಲ್ಲಿ ಶಾಸಕ ಪುಟ್ಟರಂಗಶೆಟ್ಟಿಗೆ ಬೆಂಬಲ

ಶಾಸಕರಿಗೆ ಹಾರ ಹಾಕಿ ವೀಳ್ಯನೀಡಿ ಸ್ವಾಗತ



ಚಾಮರಾಜನಗರ, ಏ.7– ತಾಲೂಕಿನ ಅರಕಲವಾಡಿ ಗ್ರಾಮದಲ್ಲಿ ಚುನಾವಣಾ ಪ್ರಚಾರ ಮಾಡುತ್ತಿದ್ದ ಕಾಂಗ್ರೆಸ್ ಅಭ್ಯರ್ಥಿ ಹಾಗೂ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರನ್ನು ಜಿಪಂ ಮಾಜಿ ಸದಸ್ಯ ಎಸ್.ಸೋಮನಾಯಕ ಅವರ ನೇತೃತ್ವದಲ್ಲಿ ಸಮುದಾಯದ ಮುಖಂಡರು ಭಾರೀ ಗಾತ್ರದ ಹಾರ ಹಾಕಿ ವೀಳ್ಯದ ಜೊತೆಗೆ ವೈಯುಕ್ತಿಕ 10 ಸಾವಿರ ರೂ.ನೀಡಿ ಸಂಪೂರ್ಣ ಬೆಂಬಲ ಘೋಷಿಸಿದರು.

ಗ್ರಾಮದ ನಾಯಕ ಬೀದಿಯ ಚಾವಡಿಗೆ ಆಗಮಿಸುತ್ತಿದ್ದಂತೆ ಮುಖಂಡರು ಪುಟ್ಟರಂಗಶೆಟ್ಟಿ ಪರ ಕಾಂಗ್ರೆಸ್ ಪರ ಘೋಷಣೆ ಕೂಗಿದರು. ಜಿಪಂ ಸದಸ್ಯ ಎಸ್.ಸೋಮನಾಯಕ ಮಾತನಾಡಿ, ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಸರಳ ವ್ಯಕ್ತಿಯಾಗಿದ್ದು, ಮೂರು ಬಾರಿ ಶಾಸಕರಾಗಿ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಮಾಡಿದ್ದಾರೆ. ವಿಶೇಷವಾಗಿ ನಾಯಕ ಸಮಾಜದ ಬಗ್ಗೆ ಅಪಾರ ಕಾಳಜಿ ಹೊಂದಿದ್ದಾರೆ. ನಾಲ್ಕನೆಯ ಬಾರಿಯು ಗೆಲುವು ಖಚಿತವಾಗಿದ್ದು ಇಐ ಚುನಾವಣೆಯಲ್ಲಿ ಗ್ರಾಮದ ನಾಯಕ ಸಮಾಜ ಸಂಪೂರ್ಣ ಇದೆ ಘೋಷಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಎಸ್‌ಟಿ ವಿಭಾಗದ ಜಿಲ್ಲಾ ಅಧ್ಯಕ್ಷ ಮಹದೇವ ನಾಯಕ, ರಾಜ್ಯ ಪ್ರಧಾನ ಕಾರ್ಯದರ್ಶಿ ಪು.ಶ್ರೀನಿವಾಸನಾಯಕ, ವಕೀಲ ಮಾಧು, ಗ್ರಾಮ ಯ. ಗುರುಸಿದ್ದನಾಯಕ, ಗುಜ್ಜನಾಯಕ, ವೆಂಕಟನಾಯಕ, ಸಿದ್ದನಾಯಕ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅರಕಲವಾಡಿ ಗುರುಸ್ವಾಮಿ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಎಪಿಎಂಸಿ ನಿರ್ದೇಶಕ ಆಲೂರು ಪ್ರದೀಪ ಇತರರು ಹಾಜರಿದ್ದರು.

ಚಾಮರಾಜನಗರ: 15,23,900 ರೂ. ಮೌಲ್ಯದ ಮದ್ಯ ವಶ



ಚಾಮರಾಜನಗರ, ಏ.7– ಕಂಟ್ರೋಲಿಂಗ್ ಅಬಕಾರಿ ಭದ್ರತಾ ಚೀಟಿಗಳು ಇಲ್ಲದೇ ಇರುವುದು ಕಂಡುಬಂದ ಕಾರಣದಿಂದ 15,23,900 ರೂ. ಮೌಲ್ಯದ 4320 ಲೀಟರ್ ಮದ್ಯವನ್ನು ಅಬಕಾರಿ ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆದು ಮದ್ಯ ಪೂರೈಸಿದ ಡಿಸ್ಟಿಲರಿ ಸನ್ನದುದಾರರು ಹಾಗೂ ಚಾಲಕರ ವಿರುದ್ಧ ಮೊಕದ್ದಮೆ ದಾಖಲಿಸಿದ್ದಾರೆ.

ಇಂದು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ಮೈಸೂರು ವಿಭಾಗದ ಅಬಕಾರಿ ಜಂಟಿ ಆಯುಕ್ತರು (ಜಾರಿ ಮತ್ತು ತನಿಖೆ) ಹಾಗೂ ಚಾಮರಾಜನಗರ ಜಿಲ್ಲಾ ಅಬಕಾರಿ ಉಪ ಆಯುಕ್ತರ ನಿರ್ದೇಶನದ ಮೇರೆಗೆ ಚಾಮರಾಜನಗರದ ಅಬಕಾರಿ ಉಪ ಅಧೀಕ್ಷಕರ ಮಾರ್ಗದರ್ಶನದಲ್ಲಿ ಜಿಲ್ಲಾದಳದ ನಿರೀಕ್ಷಕರು ಹಾಗೂ ಸಿಬ್ಬಂದಿ ಚಾಮರಾಜನಗರದ ಕೆ.ಎಸ್.ಬಿ.ಸಿ.ಎಲ್ ಡಿಪೋ ಇಲ್ಲಿಗೆ ಹಾಸನದ ವುಡ್ ಪೆಕ್ಕರ್ ಡಿಸ್ಟಿಲರಿಯಿಂದ ಸರಬರಾಜಾದ ಮದ್ಯದಲ್ಲಿ ಕಂಟ್ರೋಲಿಂಗ್ ಅಬಕಾರಿ ಭದ್ರತಾ ಚೀಟಿಗಳು ಇಲ್ಲದೇ ಇರುವುದು ಕಂಡುಬಂದ ಮೇರೆಗೆ 15,23,900 ರೂ. ಮೌಲ್ಯದ 4320 ಲೀಟರ್ ಮದ್ಯವನ್ನು ವಶಕ್ಕೆ ಪಡೆದು ಡಿಸ್ಟಿಲರಿ ಸನ್ನದುದಾರರು ಹಾಗೂ ಚಾಲಕರ ಮೇಲೆ ಮೊಕದ್ದಮೆ ದಾಖಲಿಸಲಾಗಿದೆ.

ಕಾರ್ಯಾಚರಣೆಯಲ್ಲಿ ಅಬಕಾರಿ ಉಪ ಆಯುಕ್ತರಾದ ಆರ್. ನಾಗಶಯನ, ಅಬಕಾರಿ ಉಪ ಅಧೀಕ್ಷಕರಾದ ಎಂ.ಡಿ. ಮೋಹನ್ ಕುಮಾರ್, ಅಬಕಾರಿ ನಿರೀಕ್ಷಕರಾದ ಮೀನಾ, ಕೆಎಸ್‌ಬಿಸಿಎಲ್ ಡಿಪೋ ವ್ಯವಸ್ಥಾಪಕರಾದ ಬಸವರಾಜು, ಅಬಕಾರಿ ನಿರೀಕ್ಷಕರಾದ ಗುರುನಾಥಶೆಟ್ಟಿ ಸಿಬ್ಬಂದಿ ಇದ್ದರು ಎಂದು ಪ್ರಕಟಣೆ ತಿಳಿಸಿದೆ.

ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕರ ಕೇಂದ್ರ ಸಂಘದ ಜಿಲ್ಲಾಧ್ಯಕ್ಷರಾಗಿ ಡಿ.ಎಲ್.ಕುಮಾರಚಾರಿ ನೇಮಕ

ಚಾಮರಾಜನಗರ, ಏ.7– ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕರ ಕೇಂದ್ರ ಸಂಘದ ಜಿಲ್ಲಾಧ್ಯಕ್ಷರಾಗಿ ಡಿ.ಎಲ್.ಕುಮಾರಚಾರಿ ನೇಮಕಗೊಂಡಿದ್ದಾರೆ.



ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕರ ಕೇಂದ್ರ ಸಂಘದ ಚಾಮರಾಜನಗರ ಜಿಲ್ಲಾಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದು, ಸಂತಸವಾಗಿದೆ. ತಮಗೆ ದೊರೆತಿರುವ ಈ ಹುದ್ದೆಯ ಮೂಲಕ ನೋಂದಾಯಿತ ಕಟ್ಟಡ ಕಾರ್ಮಿಕರ ಕುಂದು–ಕೊರತೆಗಳನ್ನು ಆಲಿಸಿ ಕಾರ್ಮಿಕರು ಹಾಗೂ ಕಾರ್ಮಿಕ ಇಲಾಖೆಗೆ ಸೇತುವೆಯಾಗಿ ಕಾರ್ಯವನ್ನು ಯಶಸ್ವಿಗೊಳಿಸಬೇಕು. ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕರ ಕೇಂದ್ರ ಸಂಘದ ನೀತಿ, ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಹೆಚ್ಚಿನ ನೋಂದಾಯಿತ ಕಟ್ಟಡ ಕಾರ್ಮಿಕರ ವಿವರನ್ನು ಪಡೆದು ಅವರ ಕ್ಷೇಮಾಭಿವೃದ್ಧಿ ಶ್ರಮಿಸುವಂತೆ ಸಂಘದ ರಾಜ್ಯಾಧ್ಯಕ್ಷ ಪಿ.ರಾಜು ನೇಮಕಾತಿ ಆದೇಶಪತ್ರದಲ್ಲಿ ತಿಳಿಸಿದ್ದಾರೆ.

ವೀಣಾ ಧ್ರುವನಾರಾಯಣರಿಗೆ ಕಾಂಗ್ರೆಸ್ ಕಚೇರಿಯಲ್ಲಿ ಶ್ರದ್ಧಾಂಜಲಿ



ಚಾಮರಾಜನಗರ, ಏ.7– ಮಾಜಿ ಸಂಸದ ದಿವಂಗತ ಆರ್.ಧ್ರುವನಾರಾಯಣ್ ಅವರ ಪತ್ನಿ ವೀಣಾ ಧ್ರುವನಾರಾಯಣ್ ನಿಧನದ ಸುದ್ದಿ ತಿಳಿಯುತ್ತಿದಂತೆ ಕಾಂಗ್ರೆಸ್ ಕಚೇರಿಗೆ ಆಗಮಿಸಿದ ಅಭ್ಯರ್ಥಿ ಹಾಗೂ ಶಾಸಕ ಸಿ.ಪುಟ್ಟರಂಗಶೆಟ್ಟಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಹಾಗೂ ಮುಖಂಡರು, ಕಾರ್ಯಕರ್ತರು ಕಾಂಗ್ರೆಸ್ ಕಚೇರಿಯಲ್ಲಿ ವೀಣಾ ಧ್ರುವನಾರಾಯಣ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮೌನ ಆಚರಿಸುವ ಮೂಲಕ ಶ್ರದ್ಧಾಂಜಲಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ ಆರ್.ಧ್ರುವನಾರಾಯಣ್ ಇತ್ತೀಚಿಗಷ್ಟೇ ನಿಧನರಾಗಿದ್ದು ಈಗ ಅವರ ಪತ್ನಿ ವೀಣಾ ನಿಧನವಾಗಿರುವುದು ಅಘಾತ ಉಂಟು ಮಾಡಿದೆ. ಈಗಾಗಲೇ ಕಾಂಗ್ರೆಸ್ ಅವರ ಪುತ್ರ ದರ್ಶನ ಧ್ರುವನಾರಾಯಣ್ ಅವರಿಗೆ ನಂಜನಗೂಡು ಕ್ಷೇತ್ರದಿಂದ ಟಿಕೆಟ್ ನೀಡಿ ಪ್ರಚಾರದಲ್ಲಿದ್ದಾರೆ. ಈ ಸಂದರ್ಭದಲ್ಲಿ ಅವರು ತಂದೆ–ತಾಯಿ ಇಬ್ಬರನ್ನು ಕಳೆದುಕೊಂಡಿದ್ದಾರೆ. ಆ ಇಬ್ಬರು ಮಕ್ಕಳಿಗೆ ಭಗವಂತ ದುಃಖ ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸಿದರು.

ಸಭೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವು, ಎಸ್ಟಿ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ಪು.ಶ್ರೀನಿವಾಸ ನಾಯಕ, ಓಬಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಜಿಪಂ ಮಾಜಿ ಅಧ್ಯಕ್ಷ ಮಹದೇವಶೆಟ್ಟಿ, ಎಪಿಎಂಸಿ ನಿರ್ದೇಶಕ ಆಲೂರು ಪ್ರದೀಪ್, ಮುಖಂಡರಾದ ಮಹೇಶ್ ಕುದರ್, ಸೈಯದ್ ರಫೀ, ನಾಗಯ್ಯ, ರವಿಗೌಡ, ಸೋಮಸುಂದರ್, ನಸ್ರುಲ್ಲಾಖಾನ್, ಕಾಗಲವಾಡಿ ಶಿವಸ್ವಾಮಿ, ಎಂ.ಶಿವಮೂರ್ತಿ, ಪ್ರಕಾಶ್, ಜಿಲ್ಲಾ ಮಾಧ್ಯಮ ಕಾರ್ಯದರ್ಶಿ ಅರುಣ್ ಕುಮಾರ್ ಇತರರು ಹಾಜರಿದ್ದರು.

ಸಿದ್ದಗಂಗಾ ಶ್ರೀಗಳ 116ನೇ ಜಯಂತಿ ಅಂಗವಾಗಿ

38 ಮಂದಿಯಿಂದ ಶಿಬಿರದಲ್ಲಿ ರಕ್ತದಾನ



ಚಾಮರಾಜನಗರ, ಏ.7– ಸಿದ್ದಗಂಗಾ ಮಠದ ಡಾ. ಶಿವಕುಮಾರಸ್ವಾಮೀಜಿಗಳ 116ನೇ ಜಯಂತಿಯ ಪ್ರಯುಕ್ತ ರೋಟರಿ ಸಂಸ್ಥೆ, ರೋಟರಿ ಸಿಲ್ಕ್ ಸಿಟಿ ಹಾಗೂ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಬೋಧನಾ ಆಸ್ಪತ್ರೆಯ ರಕ್ತನಿಧಿ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಬಹಳ ಯಶಸ್ವಿಯಾಗಿ ನಡೆಯಿತು.

ನಗರದ ರೋಟರಿ ಭವನದಲ್ಲಿ ನಡೆದ ಸ್ವಯಂ ಪ್ರೇರಿತ ರಕ್ತದಾನ ಶಿಬಿರದಲ್ಲಿ 38 ಮಂದಿ ರಕ್ತದಾನ ಮಾಡಿದರು. ಈ ಸಂದರ್ಭದಲ್ಲಿ ಮರಿಯಾಲ ಮಠದ ಅಧ್ಯಕ್ಷರಾದ ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿಗಳು ಶಿವಕುಮಾರ ಸ್ವಾಮೀಜಿಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿ, ಸಿದ್ದಗಂಗಾ ಮಠದ ಡಾ. ಶಿವಕುಮಾರಸ್ವಾಮೀಜಿಗಳ ತ್ರಿವಿಧ ದಾಸೋಹ, ಲಕ್ಷಾಂತರ ಮಕ್ಕಳಿಗೆ ಆಶ್ರಯ, ಅಕ್ಷರ ನೀಡುವ ಮೂಲಕ ಇಡೀ ವಿಶಕ್ಕೆ ಮಾದರಿಯಾಗಿದ್ದಾರೆ. ಅವರನ್ನು ಸ್ಮರಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ವಿಶ್ವೇಶ್ವರಯ್ಯ, ವೈದ್ಯಕೀಯ ವಿಜ್ಞಾನ ಸಂಸ್ಥೆಯ ಬೋಧನಾ ಆಸ್ಪತ್ರೆಯ ರಕ್ತ ನಿಧಿ ಕೇಂದ್ರದ ಡಾ. ದಿವ್ಯ ಮತ್ತು ಸಿಬ್ಬಂದಿ ವರ್ಗ ಆರೋಗ್ಯ ಇಲಾಖೆಯ ಮಹದೇವ ಪ್ರಸಾದ್, ರೋಟರಿ ಸಂಸ್ಥೆ ಅಧ್ಯಕ್ಷ ಕೆ.ಎಂ.ಮಹದೇವಸ್ವಾಮಿ, ರೋಟರಿ ಸಿಲ್ಕ್ ಸಿಟಿ ಅಧ್ಯಕ್ಷ ಮುರುಗೇಂದ್ರ ಸ್ವಾಮಿ, ಕಾರ್ಯದರ್ಶಿ ಶ್ರೀಧರ್ ಮತ್ತು ಸದಸ್ಯರು ರೋಟರಿ ಸಂಸ್ಥೆಯ ಕಾರ್ಯದರ್ಶಿ ಚಂದ್ರು, ಮುಂದಿನ ಸಾಲಿನ ಅಧ್ಯಕ್ಷ ಚಂದ್ರಪ್ರಭ ಜೈನ್, ಆರ್.ಎಂ. ಸ್ವಾಮಿ, ಪ್ರಕಾಶ್, ಅಂಕಶೆಟ್ಟಿ, ದೀನಾ, ಸುಭಾಷ್. ಶಿಬಿರದ ಮೊದಲನೇ ರಕ್ತದಾನಿ ಡಿ.ಪಿ ಉಲ್ಲಾಸ್, ವಿಶ್ವಾಸ್ ಸಿರವಿ, ಅಕ್ಷಯ್ ಅಜಯ, ಗಿರೀಶ್, ಡಾ. ಪರಮೇಶ್ವರಪ್ಪ, ಬಸವೇಶ್ವರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಯೋಗ ಪ್ರಕಾಶ್ ಇತರರು ಹಾಜರಿದ್ದರು.

ಮಹಾವೀರ ಜಯಂತಿ: ಸಾರ್ವಜನಿಕರಿಗೆ ಹಣ್ಣು ಹಂಪಲು ವಿತರಣೆ




ಚಾಮರಾಜನಗರ, ಏ.7– ಮಹಾವೀರ ಜಯಂತಿ ಪ್ರಯುಕ್ತ ರೋಟರಿ ಸಂಸ್ಥೆಯ ಮುಂದಿನ ಸಾಲಿನ ಅಧ್ಯಕ್ಷ ಸಿ ಎನ್ ಚಂದ್ರಪ್ರಭ ಜೈನ್ ಸಾರ್ವಜನಿಕರಿಗೆ ಹಣ್ಣು–ಹಂಪಲು ವಿತರಿಸಿದರು.

ನಗರದ ರೋಟರಿ ಭವನದಲ್ಲಿ ಆವರಣದಲ್ಲಿ ಕಣ್ಣಿನ ಶಸ್ತ್ರ ಚಿಕಿತ್ಸೆಗೆ ಕೊಯಮತ್ತೂರಿಗೆ ತೆರಳಲು ಬಂದಿದ್ದವರಿಗೆ ಮತ್ತು ಸಾರ್ವಜನಿಕರಿಗೆ ಹಣ್ಣು ವಿತರಿಸಿ ಮಾತನಾಡಿದ ಅವರು, ಮಹಾವೀರರು ಪಂಚ ಸಿದ್ದಾಂತ ಸಾರಿದರು. ಅವರು ತಮ್ಮ 30ನೇ ವಯಸ್ಸಿನಲ್ಲಿ ರಾಜಮನೆತನದ ಭೋಗವನ್ನು ತ್ಯಜಿಸಿ 12 ವರ್ಷಗಳ ಕಾಲ ಕಠಿಣ ತಪಸ್ಸು ಮಾಡಿ ಕೈವಲ್ಯ ಜ್ಞಾನವನ್ನು ಪಡೆದರು ಎನ್ನಲಾಗುತ್ತಿದೆ. ಅವರು ಅಹಿಂಸಾ ತತ್ವ ನೀತಿಗಳನ್ನು ಬಿಟ್ಟು ಹೋಗಿದ್ದಾರೆ. ಅಂತಹ ಮಹಾ ಪುರುಷರನ್ನು ಸ್ಮರಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದರು. ಈ ಸಂದರ್ಭದಲ್ಲಿ ರೋಟರಿ ಸಂಸ್ಥೆ ಅಧ್ಯಕ್ಷ ಕೆ.ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಕಾಗಲವಾಡಿಚಂದ್ರ, ಉಪಾಧ್ಯಕ್ಷ ಎಲ್. ನಾಗರಾಜು, ರಾಮು, ಅರವಿಂದ ಆಸ್ಪತ್ರೆಯ ವಿಜಯಕಾಂತ್, ಅಶೋಕ್, ಸುಭಾಷ್, ಇತರರು ಹಾಜರಿದ್ದರು.

ಮೋದಿ ಸಾಗುವ ಮಾರ್ಗದಲ್ಲಿ ಭದ್ರತಾ ಬೆಂಗಾವಲು ಪಡೆ ಪೂರ್ವಭ್ಯಾಸ





ಮೈಸೂರು, ಏ.7(ಜಿಎ)–ಮೈಸೂರಿನ ಪ್ರಧಾನ ಮಂತ್ರಿ ನರೇಂದ್ರ ಮೋದಿ ಆಗಮನದ ಹಿನ್ನೆಲೆಯಲ್ಲಿ ಅವರು ಸಂಚರಿಸುವ ಮಾರ್ಗದಲ್ಲಿ ಇಂದು ಎಸ್‌ಪಿಜಿ ಸೂಚನೆಯಂತೆ ಭದ್ರತಾ ಬೆಂಗಾವಲು ಪಡೆಯೂ ಪೂರ್ವಭ್ಯಾಸ(ಕಾನ್ವೆ ತಾಲೀಮು) ನಡೆಸಿತು. ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ನಗರಕ್ಕೆ ಶನಿವಾರ(ಏ.8) ರಾತ್ರಿ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಶುಕ್ರವಾರ ಸಂಜೆ ಭದ್ರತಾ ದೃಷ್ಟಿಯಿಂದ ಅವರು ಸಂಚರಿಸುವ ಮಾರ್ಗದಲ್ಲಿ ಅವರ ಬೆಂಗಾವಲು ಪಡೆಯವರು ಪೂರ್ವಭ್ಯಾಸ ಮಾಡಿದರು.

ನಾಳೆ ರಾತ್ರಿ 8.30ಕ್ಕೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣ ತಲುಪಲಿರುವ ಮೋದಿ ಅವರು ಅಲ್ಲಿಂದ ಕಾರಿನ ಮೂಲಕ ನಗರದ ಎಂ.ಜಿ.ರಸ್ತೆಯಲ್ಲಿರುವ ರ್‍ಯಾಡಿಸನ್ ಬ್ಲೂ ಹೋಟೆಲ್‌ಗೆ ಬಂದು ವ್ಯಾಸ್ತವ್ಯ ಹೂಡಲಿದ್ದಾರೆ. ಅದಕ್ಕಾಗಿ ಅವರ ಬೆಂಗಾವಲು ಪಡೆಯೂ ವಿಮಾನ ನಿಲ್ದಾಣದಿಂದ ಹೋಟೆಲ್‌ವರೆಗೂ ಪೂರ್ವಭ್ಯಾಸ ನಡೆಲಾಯಿತು.

ಮರುದಿನ(ಏ.9) ಬೆಳಗ್ಗೆ ನರೇಂದ್ರ ಮೋದಿ ಅವರು ಹೋಟೆಲ್‌ನಿಂದ ಓವಲ್ ಮೈದಾನದಲ್ಲಿ ನಿರ್ಮಿಸಿರುವ ತಾತ್ಕಾಲಿಕ ಹೆಲಿಪ್ಯಾಡ್‌ನಿಂದ ಭಾರತೀಯ ವಾಯುದಳ (ಐಎಎಫ್)ದ ಹೆಲಿಕಾಪ್ಟರ್ ಮೂಲಕ ಚಾಮರಾಜನಗರ ಜಿಲ್ಲೆ ಮೇಲುಕಮ್ಮನಹಳ್ಳಿ ತೆರಳಲಿದ್ದು, ಈ ಹಿನ್ನೆಲೆಯಲ್ಲಿ ಬೆಂಗಾವಲು ಪಡೆಯೂ ಹೋಟೆಲ್‌ನಿಂದ ಎಂ.ಜಿ.ರಸ್ತೆ ಮೂಲಕ ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತದಿಂದ ಜೆಎಲ್‌ಬಿ ರಸ್ತೆ ತಲುಪಿ, ಅಲ್ಲಿಂದ ಮೈಸೂರು ಹುಣಸೂರು ರಸ್ತೆಯಲ್ಲಿರುವ ಕೆಎಸ್‌ಓಯು ಘಟಿಕೋತ್ಸವ ಭವನದಲ್ಲಿ ಕಾರ್ಯಕ್ರಮ ಆಯೋಜಿಸಿರುವ ಸ್ಥಳದವರೆಗೂ ತಲುಪಿ ಮತ್ತೆ ತಾತ್ಕಾಲಿಕ ಹೆಲಿಪ್ಯಾಡ್‌ಗೆ ಮರಳಿದವು.

ಬೆಂಗಾವಲು ಪಡೆಯಲ್ಲಿ ಪ್ರಧಾನಿ ಮೋದಿ ಅವರ ಕಾರು, ಆಂಟೆನಾ ಹೊಂದಿರುವ ಕಾರು, ಮೈಸೂರು ನಗರ ಪೊಲೀಸ್ ಕಮೀಷನರ್ ಕಾರು, ಅಂಬ್ಯುಲೆನ್ಸ್ ಸೇರಿದಂತೆ 30ಕ್ಕೂ ಅಧಿಕ ವಾಹನಗಳನ್ನು ಒಳಗೊಂಡಿದೆ. ಪ್ರಧಾನ ಮಂತ್ರಿಗಳು ಭೇಟಿ ನೀಡುವ ಸ್ಥಳಗಳಿಗೆ ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿಗಳಾದ ಮುತ್ತುರಾಜ್, ಜಾಹ್ನವಿ ಸೇರಿದಂತೆ ಗುಪ್ತಚರ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮೋದಿ ಅವರು ಸಂಚರಿಸುವ ಮಾರ್ಗ ಮತ್ತು ಸ್ಥಳಗಳನ್ನು ಈಗಾಗಲೇ ಎಸ್‌ಪಿಜಿ ತಂಡವು ಭದ್ರತಾ ತಪಾಸಣೆ ಮಾಡಿದ್ದು, ಮುನ್ನೆಚ್ಚರಿಕಾ ಕ್ರಮವಾಗಿ ಅವರು ಸಂಚರಿಸುವ ರಸ್ತೆಯ ಇಕ್ಕೆಲ್ಲಗಳಲ್ಲಿ ಮರದಿಂದ ಬ್ಯಾರಿಕೇಟ್‌ಗಳನ್ನು ಅಳವಡಿಸುವ ಮೂಲಕ ಭದ್ರತಾ ಲೋಪ ದೋಷ ಮತ್ತು ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ಅಧಿಕಾರಿಗಳು ಕ್ರಮ ವಹಿಸಿದ್ದಾರೆ.

ಒಂದನೇ ಪುಟದಿಂದ

ನರೇಂದ್ರ ಮೋದಿ ಆಗಮನ

ಮೈದಾನಕ್ಕೆ ಆಗಮಿಸುವರು. ಅಲ್ಲಿಂದ ಅವರು, ಹುಣಸೂರು ರಸ್ತೆ ಮೂಲಕ ಮಾನಸ ಗಂಗೋತ್ರಿ ಆವರಣದ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಆಯೋಜಿಸಿರುವ ಹುಲಿ ಯೋಜನೆ ಸುವರ್ಣ ಮಹೋತ್ಸವ ಕಾರ್ಯಕ್ರಮ ಉದ್ಘಾಟಿ ಸುವರು. ಇದೇ ವೇಳೆ ವಿಶೇಷ ಹುಲಿ ಯೋಜನೆ ವರದಿ ಬಿಡುಗಡೆ ಮಾಡುವರು. ಮಧ್ಯಾಹ್ನ 12.10 ಗಂಟೆಗೆ ಘಟಿಕೋತ್ಸವ ಭವನದಿಂದ ನಿರ್ಗಮಿಸುವ ಪ್ರಧಾನಿಗಳು, ಮಧ್ಯಾಹ್ನ 12.15 ಗಂಟೆಗೆ ಓವೆಲ್ ಮೈದಾನದಿಂದ ಹೆಲಿಕ್ಯಾಪ್ಟರ್‌ನಲ್ಲಿ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ತೆರಳಿ ಅಲ್ಲಿಂದ ಮಧ್ಯಾಹ್ನ 12.30 ಗಂಟೆಗೆ ವಿಶೇಷ ವಿಮಾನದಲ್ಲಿ ನವದೆಹಲಿಗೆ ಪ್ರಯಾಣ ಬೆಳೆಸುವರು.

ಸರ್ವ ಸಿದ್ಧತೆ: ಪ್ರಧಾನ ಮಂತ್ರಿಗಳ ಆಗಮನದ ಹಿನ್ನೆಲೆಯಲ್ಲಿ ಅವರನ್ನು ಸ್ವಾಗತಿಸಲು ಮೈಸೂರು ವಿಮಾನ ನಿಲ್ದಾಣದಲ್ಲಿ ಸರ್ವ ಸಿದ್ಧತೆ ಮಾಡಿರುವ ಜಿಲ್ಲಾಡಳಿತವು, ಎಸ್‌ಪಿಜಿ ಅಧಿಕಾರಿಗಳ ನಿರ್ದೇಶನದಂತೆ ಪೊಲೀಸ್ ಅಧಿಕಾರಿಗಳ ಮೇಲ್ವಿಚಾರಣೆ ಯಲ್ಲಿ ವ್ಯಾಪಕ ಭದ್ರತೆ ಹಾಗೂ ಕಟ್ಟೆಚ್ಚರ ವಹಿಸಿದೆ. ಮಂಡಕಳ್ಳಿ ವಿಮಾನ ನಿಲ್ದಾಣದ ಆವರಣ, ಹೊರಭಾಗ, ಪ್ರವೇಶ ದ್ವಾರಗಳಲ್ಲಿ ಹೆಚ್ಚುವರಿ ಪೊಲೀಸರನ್ನು ನಿಯೋಜಿಸಲಾಗಿದ್ದು, ಪ್ರಧಾನ ಮಂತ್ರಿಗಳು ಸಾಗುವ ನಂಜನಗೂಡು ರಸ್ತೆಯಲ್ಲಿಯೂ ಭಾರೀ ನಿಗಾ ವಹಿಸಲಾಗಿದೆ. ಪ್ರಧಾನಿ ವಾಸ್ತವ್ಯ ಹೂಡಲಿರುವ ಹೋಟೆಲ್ ರ್‍ಯಾಡಿಸನ್ ಬ್ಲೂನಲ್ಲಿ ಅಗತ್ಯ ಸುರಕ್ಷತೆ ಕ್ರಮ ಕೈಗೊಳ್ಳಲಾಗಿದೆ.

ಅದೇ ರೀತಿ ಓವೆಲ್ ಮೈದಾನ, ಮುಕ್ತ ವಿವಿ ಘಟಿಕೋತ್ಸವ ಭವನದಲ್ಲೂ ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸಿ ಭದ್ರತೆ ಮಾಡಲಾಗಿದೆ. ಇಂದೂ ಸಹ ಎಸ್‌ಪಿಜಿ ಅಧಿಕಾರಿಗಳೊಂದಿಗೆ ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿಗಳಾದ ಎಂ.ಮುತ್ತುರಾಜ್, ಎಸ್.ಜಾಹ್ನವಿ, ಎಸಿಪಿಗಳು ಪ್ರಧಾನಮಂತ್ರಿಗಳು ಆಗಮಿಸಿ ಮೈಸೂರಿನಿಂದ ನಿರ್ಗಮಿಸುವವರೆಗೆ ಭೇಟಿ ನೀಡುವ ಸ್ಥಳಗಳಲ್ಲಿ ಮಾಡಿರುವ ಪೂರ್ವಸಿದ್ಧತೆ ಹಾಗೂ ಭದ್ರತಾ ವ್ಯವಸ್ಥೆಯನ್ನು ಪರಿಶೀಲಿಸಿದರು. ರ್‍ಯಾಡಿಸನ್ ಬ್ಲೂ ಹೋಟೆಲ್, ಮುಕ್ತ ವಿವಿ ಘಟಿಕೋತ್ಸವ ಭವನದ ಬಳಿ ಬ್ಯಾರಿಕೇಡ್ ಅಳವಡಿಸಿ ಯಾರೂ ಅತ್ತ ಸುಳಿಯದಂತೆ ಎಚ್ಚರ ವಹಿಸಿದ್ದು, ಬಿಗಿ ಭದ್ರತೆ ಮಾಡಲಾಗಿದೆ.

ಮೊದಲ ಪಟ್ಟಿ ಬಿಡುಗಡೆ

ತಿಳಿಸಿವೆ. ಚುನಾ ವಣಾ ಪೂರ್ವ ಸಮೀಕ್ಷೆ ಸಂಘ ಪರಿವಾರ ನೀಡಿರುವ ವರದಿ ಹಾಗೂ ರಾಜ್ಯ ಘಟಕ ವಿವಿಧ ಹಂತಗಳಲ್ಲಿ ಕಸರತ್ತು ನಡೆಸಿ, ಮಾಡಿರುವ ಶಿಫಾರಸ್ಸನ್ನು ಮುಂದಿಟ್ಟುಕೊಂಡು ಸಂಸದೀಯ ಮಂಡಳಿ ಅಭ್ಯರ್ಥಿಗಳ ಆಯ್ಕೆ ಮಾಡಲಿದೆ. ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್ ರಾಜ್ಯದ ಅಭ್ಯರ್ಥಿಗಳ ಆಯ್ಕೆಯಲ್ಲಿ ಪ್ರಮುಖ ಪಾತ್ರ ವಹಿಸಲಿದ್ದಾರೆ. ಕರ್ನಾಟಕದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತಂದೇ ತರುವ ದೃಢ ನಿಲುವು ಹೊಂದಿರುವ ಷಾ, ಕಳೆದ ಮೂರು ತಿಂಗಳಿನಿಂದ ಪೂರ್ಣವಾಗಿ ರಾಜ್ಯ ವಿಧಾನಸಭೆ ಚುನಾವಣೆಗೆ ಸಂಬಂಧಿಸಿದಂತೆ ತಮ್ಮನ್ನು ತೊಡಗಿಸಿಕೊಂಡಿದ್ದರು. ಈ ಎಲ್ಲಾ ಸಮೀಕ್ಷೆಗಳ ಜೊತೆಗೆ ತಾವೂ ಮತ್ತು ಸಂತೋಷ್ ಮಾಡಿರುವ ಕಸರತ್ತನ್ನು ಆಧಾರವಾಗಿಟ್ಟುಕೊಂಡೇ ಅಭ್ಯರ್ಥಿಗಳ ಆಯ್ಕೆಯಾಗಲಿದೆ.

ರಾಜ್ಯ ಘಟಕ ಮಾಡಿರುವ ಶಿಫಾರಸ್ಸಿಗೆ ಮಂಡಳಿ ಬೆಲೆ ಕೊಡುವ ಸಾಧ್ಯತೆ ಇಲ್ಲ. ಈ ಹಿಂದೆ ನಡೆದ ವಿವಿಧ ಚುನಾವಣೆಗಳಲ್ಲಿ ಬಿಜೆಪಿಯ ಕೋರ್ ಕಮಿಟಿ ಮಾಡಿದ ಶಿಫಾರಸ್ಸನ್ನು ಕೇಂದ್ರ ಘಟಕ ಪರಿಗಣಿಸಿರಲಿಲ್ಲ. ಹಾಲಿ ಪಕ್ಷದ ಶಾಸಕರಲ್ಲಿ ಶೇಕಡ 25 ರಿಂದ 30ರಷ್ಟು ಮಂದಿಗೆ ಕ್ಷೇತ್ರದಲ್ಲೇ ವಿರೋಧಿ ಅಲೆ ಇದೆ. ಅಂತಹವರಿಗೆ ಟಿಕೆಟ್ ಕೈ ತಪ್ಪಲಿದೆ. ಅಲ್ಲಿ ಹೊಸ ಮುಖಗಳಿಗೆ ಅವಕಾಶ ದೊರೆಯಲಿದೆ.

ಅಷ್ಟೇ ಅಲ್ಲ, ಬಿಜೆಪಿ ಮತ್ತು ಸಂಘಟನೆ ಎಲ್ಲಿ ಬಲವಾಗಿದೆಯೋ ಅಂತಹ ಕಡೆ ಹಿರಿತನವನ್ನು ಕಡೆಗಾಣಿಸಿ, ಹೊಸ ಮುಖಗಳು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವವರನ್ನು ಗುರುತಿಸಿ, ಚುನಾವಣಾ ಕಣಕ್ಕಿಳಿಸಲು ವರಿಷ್ಠರು ಮುಂದಾಗಿದ್ದಾರೆ ಎಂದು ಇದೇ ಮೂಲಗಳು ಹೇಳಿವೆ. ಪ್ರತಿಪಕ್ಷ ಕಾಂಗ್ರೆಸ್ ಈಗಾಗಲೇ ಎರಡು ಹಂತಗಳಲ್ಲಿ 166 ವಿಧಾನಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ, ಪಟ್ಟಿ ಪ್ರಕಟಿಸಿದೆ. ಅದೇ ರೀತಿ ಜೆಡಿಎಸ್ ಕೂಡ 90 ಕ್ಷೇತ್ರಗಳ ಹಾಸುಪಾಸಿನಲ್ಲಿ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಿದೆ. ಬಿಜೆಪಿ ಮಾತ್ರ ಕೊನೆಯ ಹಂತದಲ್ಲೂ ಚುನಾವಣಾ ಪೂರ್ವ ಸಮೀಕ್ಷೆ ನಡೆಸಿ, ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಮುಂದಾಯಿತು.

ಹಾಲಿ ಕೆಲ ಸಚಿವರು ಮತ್ತು ಶಾಸಕರಿಗೆ ಟಿಕೆಟ್ ಕೈತಪ್ಪಲಿದೆ. ಅದರ ಜೊತೆಗೆ ಪಕ್ಷಕ್ಕೆ ದುಡಿದ ಮುಖಂಡರಿಗೂ ಕೆಲವರಿಗೆ ಅವಕಾಶ ದೊರೆಯುವುದಿಲ್ಲ. ಇಂತಹವರು, ಕಾಂಗ್ರೆಸ್ ಮತ್ತು ಜೆಡಿಎಸ್ ಜೊತೆ ಕೈಜೋಡಿಸಬಹುದೆಂಬ ಭಯ ಬಿಜೆಪಿ ನಾಯಕರಿಗಿದೆ. ಇದನ್ನು ಗಮನದಲ್ಲಿಟ್ಟುಕೊಂಡೇ ವರಿಷ್ಠರು ಅಭ್ಯರ್ಥಿಗಳ ಆಯ್ಕೆಯಲ್ಲಿ ವಿಳಂಬ ಮಾಡಿದ್ದಾರೆ. ನಾಳೆ ನಡೆಯುವ ಸಭೆಯಲ್ಲಿ ಸುಮಾರು 145 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಲಿದ್ದಾರೆ. ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿಯವರು ಪಕ್ಷದ ಅಭ್ಯರ್ಥಿಗಳ ಆಯ್ಕೆಗೆ ನಾಳೆ ದೆಹಲಿಯಲ್ಲಿ ಸಭೆ ಸೇರುತ್ತಿರುವುದಾಗಿ ತಿಳಿಸಿದ್ದಾರೆ. ಈಗಾಗಲೇ ಕ್ಷೇತ್ರ ಹಾಗೂ ಜಿಲ್ಲಾ ಮಟ್ಟದಲ್ಲಿ ಅಭಿಪ್ರಾಯ ಸಂಗ್ರಹವಾಗಿದೆ. ರಾಜ್ಯ ಮಟ್ಟದಲ್ಲಿ ಚರ್ಚೆ ನಡೆದಿದೆ. ಅಭ್ಯರ್ಥಿಗಳನ್ನು ಶಾರ್ಟ್ ಲಿಸ್ಟ್ ಮಾಡಲಾಗಿದೆ. ಪ್ರತಿ ಕ್ಷೇತ್ರಕ್ಕೆ ಎರಡು–ಮೂರು ಜನರ ಹೆಸರು ಶಾರ್ಟ್ ಲಿಸ್ಟ್ ಮಾಡಲಾಗಿದ್ದು, ಅಂತಿಮವಾಗಿ ಸಂಸದೀಯ ಮಂಡಳಿ ಸಭೆಯಲ್ಲಿ ತೀರ್ಮಾನವಾಗಲಿದೆ ಎಂದರು. ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಕುರಿತು ಯಾವುದೇ ಆತಂಕ ಇಲ್ಲ, ನಿರೀಕ್ಷೆ ಇದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ಬಿಜೆಪಿ ಪಟ್ಟಿಯು ವ್ಯವಸ್ಥಿತವಾಗಿ ಪ್ರಜಾಪ್ರಭುತ್ವದ ರೀತಿಯಲ್ಲಿ ಸಿದ್ಧವಾಗುತ್ತಿದೆ. ಎಲ್ಲಾ ಹಂತದ ಕಾರ್ಯಕರ್ತರ ಭಾವನೆ, ತಾಲೂಕು ಹಾಗೂ ಜಿಲ್ಲಾ ಮಟ್ಟದ ಸಮಿತಿಗಳು ಚರ್ಚಿಸಿ ಜೊತೆ ಜನರ ಭಾವನೆಯನ್ನು ಗಮನದಲ್ಲಿಟ್ಟುಕೊಂಡು ಪಟ್ಟಿ ತಯಾರಿಸಲಾಗಿದೆ ಎಂದರು.

ಚುನಾವಣೆ ಹೊಸ್ತಿಲಲ್ಲಿ ಮೀಸಲಾತಿ ಹೆಚ್ಚಳ, ಪುನರ್ ಹಂಚಿಕೆ; ಬಿಜೆಪಿಯ ಬರೀ ರಾಜಕೀಯ ಸ್ಟಂಟ್

● ವಿಧಾನಪರಿಷತ್ ಸದಸ್ಯ ಡಾ. ತಿಮ್ಮಯ್ಯ ವಾಗ್ದಾಳಿ ● ಇದನ್ನೇ ಬಹಳ ಹಿಂದೆಯೇ ಇಲ್ಲ ಚುನಾವಣೆ ನಂತರ ಮಾಡಿದ್ದರೆ ನಂಬಬಹುದಿತ್ತು



ಮೈಸೂರು,ಏ.7(ಎಂಟಿವೈ)– ಬಿಜೆಪಿ ಸರ್ಕಾರ ವಿಧಾನಸಭೆ ಚುನಾವಣೆಯಲ್ಲಿ ರಾಜಕೀಯ ಲಾಭ ಮಾಡಿಕೊಳ್ಳುವ ಏಕೈಕ ಉದ್ದೇಶದಿಂದ ಕೆಲ ಸಮುದಾಯಕ್ಕೆ ಮೀಸಲಾತಿ ಹೆಚ್ಚಳ ಹಾಗೂ ಇನ್ನು ಕೆಲವಕ್ಕೆ ಪುನರ್ ಹಂಚಿಕೆ ಅಸ್ತ್ರ ಪ್ರಯೋಗಿಸಿ, ಜನರನ್ನು ದಾರಿ ತಪ್ಪಿಸುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಆರೋಪಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ವತಿಯಿಂದ ಆಯೋಜಿಸಿದ್ದ 'ಬಿಜೆಪಿ ಅಳಿಸಿ– ಮೀಸಲಾತಿ ಉಳಿಸಿ' ಅಭಿಯಾನವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ 4 ವರ್ಷದಿಂದ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದರೂ ಹಿಂದುಳಿದ ವರ್ಗ, ಶೋಷಿತ ಸಮುದಾಯದವರ ಏಳಿಗೆಗಾಗಿ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಚುನಾವಣೆ ದಿನಾಂಕ ಘೋಷಣೆಯಾಗಲು ಕೆಲವೇ ಕೆಲವು ದಿನಗಳಿರುವಾಗ ಮೀಸಲಾತಿ ಹೆಚ್ಚಳ ಹಾಗೂ ಪುನರ್ ಹಂಚಿಕೆ ಅಸ್ತ್ರ ಪ್ರಯೋಗ ಮಾಡಿದೆ. ಅಧಿಕಾರಕ್ಕೆ ಬಂದ ನಂತರ ಮೀಸಲಾತಿ ಹೆಚ್ಚಳ ಮಾಡಿದ್ದರೆ, ಅದನ್ನು ಜನ ಸ್ವಾಗತಿಸುತ್ತಿದ್ದರು. ಆದರೆ ಕೊನೆಯ ಸಚಿವ ಸಂಪುಟದಲ್ಲಿ ಮೀಸಲಾತಿ ಕುರಿತು ನಿರ್ಣಯ ಕೈಗೊಂಡಿದೆ. ಇದು ಮೀಸಲಾತಿ ನಾಟಕ. ಇದು ಯಾವುದೂ ಕಾರ್ಯಗತವಾಗಲ್ಲ. ಸಚಿವ ಸಂಪುಟದ ನಿರ್ಣಯವನ್ನು ಕೇಂದ್ರ ಸರ್ಕಾರ ಒಪ್ಪಿಕೊಳ್ಳಲು ಸಾಧ್ಯವೇ ಎಂದು ಪ್ರಶ್ನಿಸಿದರು.

ಮೀಸಲಾತಿ ಕುರಿತು ಕಾನೂನಾತ್ಮಕ, ಪ್ರಜಾಸತ್ತಾತ್ಮಕ ಪ್ರಕ್ರಿಯೆ ನಡೆಸಿಲ್ಲ. ವಿಧಾನಸಭೆ, ವಿಧಾನಪರಿಷತ್‌ನ ಅನುಮೋದನೆ ಪಡೆದುಕೊಂಡು ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು. ಅದು ಲೋಕಸಭೆಯಲ್ಲಿ ಮಂಡಿಸಿ ಅಂಗೀಕಾರ ಪಡೆದುಕೊಳ್ಳಬೇಕು. ಆದರೆ, ಈ ಯಾವ ಪ್ರಕ್ರಿಯೆ ನಡೆಸಿಲ್ಲ. ಬರೀ ಚುನಾವಣೆ ದೃಷ್ಟಿಯಲ್ಲಿ ಜನರಿಗೆ ಮೋಸ ಮಾಡಲು ಬಿಜೆಪಿ ಮುಂದಾಗಿದೆ. ಮುಸ್ಲಿಂ ಸಮುದಾಯಕ್ಕೆ ಇದ್ದ ಪ್ರವರ್ಗ 2ಬಿ ಮೀಸಲಾತಿಯನ್ನು ಕಿತ್ತುಕೊಂಡಿರುವ ಬಿಜೆಪಿ ಸರ್ಕಾರದ ಕ್ರಮ ಸಂವಿಧಾನ ವಿರೋಧಿಯಾಗಿದೆ. ಇಂತಹ ಜಾತಿಯಲ್ಲೇ ಹುಟ್ಟಬೇಕೆಂದು ಯಾರೂ ಸಹ ಅರ್ಜಿ ಹಾಕಿ ಹುಟ್ಟುವುದಿಲ್ಲ. ಜನನ ಆಕಸ್ಮಿಕ. ಆದರೆ, ಎಷ್ಟೋ ದೊಡ್ಡ ವ್ಯಕ್ತಿ, ವಿದ್ಯಾವಂತರರಾದರೂ ಅವರ ಜಾತಿ ಕೇಳುತ್ತಾರೆ. ಹೆಸರು, ಊರು ಕೇಳಿದ ಬಳಿಕ 'ನಿಮ್ಮದ್ದು ಯಾವ ಜಾತಿ' ಎಂದು ಪ್ರಶ್ನಿಸುತ್ತಾರೆ. ಜಾತಿ ರೋಗ ತಡೆಯಲು ಸಾಧ್ಯವಿಲ್ಲ ಎನ್ನುವಂತಾಗಿದೆ. ಜಾತ್ಯತೀತ ದೇಶದಲ್ಲಿ ಜಾತಿಯೇ ಅತಿಯಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಪ್ರತಿಯೊಂದು ಕಾಯಕ ಸಮುದಾಯವೂ ಸಮಾಜಕ್ಕೆ ಕೊಡುಗೆ ನೀಡಿವೆ. ಆದರೆ, ಅವುಗಳನ್ನು ವ್ಯವಸ್ಥೆ ದೂರ ಇಟ್ಟಿದೆ. ಇದನ್ನೇ ಸವಾಲಾಗಿ ಸ್ವೀಕರಿಸುವ ಮೂಲಕ ಈ ಸಮುದಾಯದ ಜನರು ವಿದ್ಯಾವಂತರಾಗಿ ಸಮಾಜ ಮುಖ್ಯವಾಹಿನಿಗೆ ಬರಬೇಕು. ಹಿಂದುಳಿದ ವರ್ಗಗಳ ಕುರಿತು ಕಳಕಳಿ ಹೊಂದಿರುವ ನಾಯಕರು ಬೇಕಾಗಿದ್ದಾರೆ. ಡಿ.ದೇವರಾಜ ಅರಸು ಈ ಸಮುದಾಯದ ಬಗ್ಗೆ ತುಡಿತವಿತ್ತು. ಸಿದ್ದರಾಮಯ್ಯ ಅವರಿಗೂ ಆ ಕಳಕಳಿ ಇದೆ. ಆದರೆ, ಉಳಿದ ನಾಯಕರು ತಮ್ಮ ಜಾತಿ, ಹುದ್ದೆ, ಕುರ್ಚಿಯನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಬಿಜೆಪಿ ಹಿಂದುಳಿದ ವರ್ಗ ವಿರೋಧಿ: ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ಅಧ್ಯಕ್ಷ ಕೆ.ಎಸ್.ಶಿವರಾಮ್ ಮಾತನಾಡಿ, ಬಿಜೆಪಿ ಹಿಂದುಳಿದ ವರ್ಗಗಳ ವಿರೋಧಿಯಾಗಿದೆ. ರಾಜಕೀಯ ಲಾಭ ಮಾಡಿಕೊಳ್ಳಲು ಸರ್ಕಾರದ ಅವಧಿ ಮುಗಿಯುವ ಸಂದರ್ಭದಲ್ಲಿ ಮೀಸಲಾತಿ ಹೆಚ್ಚಳ ಹಾಗೂ ಹಂಚಿಕೆ ಮಾಡುವ ಮಾತನ್ನಾಡಿದೆ. ಇವುಗಳು ಊರ್ಜಿತವಾಗುವುದಿಲ್ಲ ಎಂದು ಬಿಜೆಪಿ ನಾಯಕರಿಗೂ ತಿಳಿದಿದ್ದರೂ, ಜನರ ಭಾವನೆಯೊಂದಿಗೆ ಆಟವಾಡಲು ಮುಂದಾಗಿದೆ. ಕೆಲವು ಸಮುದಾಯಗಳಿಗೆ ಅಭಿವೃದ್ಧಿ ಮಂಡಳಿ ಹಾಗೂ ನಿಗಮವನ್ನು ರಚಿಸಲಾಗಿದೆ. ಆದರೆ, ಅವುಗಳಿಗೆ ಹಣ ನೀಡಿಲ್ಲ. ಇದು ಕಣ್ಣೊರೆಸುವ ತಂತ್ರವಾಗಿದೆ. ಇದರ ವಿರುದ್ಧ ಜನರು ಎಚ್ಚೆತ್ತುಕೊಳ್ಳಬೇಕು. ಬಿಜೆಪಿ ಎಂದಿಗೂ ಜನಪರವಾಗಿ, ಹಿಂದುಳಿದ ಹಾಗೂ ಬಡವರ ಪರವಾಗಿ ಕೆಲಸ ಮಾಡುವುದಿಲ್ಲ ಎಂದು ಆರೋಪಿಸಿದರು.

ಸವಿತಾ ಸಮಾಜದ ಜಿಲ್ಲಾಧ್ಯಕ್ಷ ಎನ್.ಆರ್.ನಾಗೇಶ್ ಮಾತನಾಡಿ, ಕಾಂಗ್ರೆಸ್ ಶೋಷಿತ ಸಮುದಾಯಗಳ ಹಿತಕಾಯುವ ಏಕೈಕ ಪಕ್ಷವಾಗಿ ಭರವಸೆ ಮೂಡಿಸಿದೆ. ಈ ಹಿಂದೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಹಲವು ಕಾರ್ಯಕ್ರಮ ಜಾರಿಗೊಳಿಸಿದ್ದರು. ಈ ಹಿನ್ನೆಲೆಯಲ್ಲಿ ಮುಂಬರುವ ಚುನಾವಣೆಯಲ್ಲಿ ಹಿಂದುಳಿದ ವರ್ಗಗಳ ಪರವಾಗಿರುವ ಕಾಂಗ್ರೆಸ್‌ಗೆ ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು.

ಇದಕ್ಕೂ ಮುನ್ನ ಮಾಜಿ ಸಂಸದ ಆರ್.ಧ್ರುವನಾರಾಯಣ್ ಪತ್ನಿ ವೀಣಾ ಅವರಿಗೆ ನುಡಿನಮನ ಸಲ್ಲಿಸಲಾಯಿತು. ಸಭೆಯಲ್ಲಿ ರಂಗಾಯಣದ ಮಾಜಿ ನಿರ್ದೇಶಕ ಜನಾರ್ಧನ್(ಜನ್ನಿ), ಕುಂಬಾರರ ಸಂಘದ ಜಿಲ್ಲಾಧ್ಯಕ್ಷ ಹೆಚ್.ಎಸ್.ಪ್ರಕಾಶ್, ಮಡಿವಾಳರ ಸಂಘದ ಜಿಲ್ಲಾಧ್ಯಕ್ಷ ರವಿನಂದನ್, ಉಪ್ಪಾರರ ಸಂಘದ ಜಿಲ್ಲಾಧ್ಯಕ್ಷ ಯೋಗೇಶ್ ಉಪ್ಪಾರ್, ವಿಶ್ವಕರ್ಮ ಜಾಗೃತ ವೇದಿಕೆಯ ಜಿಲ್ಲಾಧ್ಯಕ್ಷ ಕೆಂಡಗಣ್ಣ ವಿಶ್ವಕರ್ಮ, ನೆಲೆ ಹಿನ್ನೆಲೆ ಸಂಸ್ಥೆಯ ಗೋಪಾಲಕೃಷ್ಣ, ಮುಖಂಡರಾದ ಎಂ.ಎ. ಕಮಲಾ ಅನಂತರಾಮು, ಛಾಯ, ಶೋಭ ಲೋಕೇಶ್ ಮಾದಾಪುರ, ಮಹೇಂದ್ರ ಕಾಗಿನೆಲೆ, ಸತ್ಯನಾರಾಯಣ ಸೇರಿದಂತೆ ಇನ್ನಿತರರು ಇದ್ದರು.

ನಿರ್ಣಯಗಳು

ಹಿಂದುಳಿದ ವರ್ಗಗಳ ಮೀಸಲಾತಿ ರಕ್ಷಣೆಗಾಗಿ ಬಿಜೆಪಿ ವಿರುದ್ಧ ಮತ ಚಲಾಯಿಸುವುದು. ಹಿಂದಿನ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿ ಕಾರ್ಯ ನಿರ್ವಹಿಸಿದ ಸಿದ್ದರಾಮಯ್ಯ ಹಿಂದುಳಿದ(ಶೋಷಿತ) ಸಮುದಾಯಗಳ ಅಭಿವೃದ್ಧಿಗೆ ಹಲವು ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಆದ್ದರಿಂದ 2023ರ ವಿಧಾನಸಭಾ ಚುನಾವಣೆಯಲ್ಲಿ ಸಿದ್ದರಾಮಯ್ಯರ ಕೈ ಬಲಬಡಿಸುವ ಸಲುವಾಗಿ ಕಾಂಗ್ರೆಸ್ ಪಕ್ಷ ಬೆಂಬಲಿಸಲು ತೀರ್ಮಾನಿಸಲಾಯಿತು. ಹಿಂದುಳಿದ ವರ್ಗಗಳಿಗೆ ವಿಧಾನಸಭೆ ಹಾಗೂ ಲೋಕಸಭಾ ಕ್ಷೇತ್ರಗಳಲ್ಲಿ ಶೇ.15ರಷ್ಟು ರಾಜಕೀಯ ಮೀಸಲಾತಿಯನ್ನು ಜಾರಿಗೊಳಿಸಲು ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಗೆ ಸೇರಿಸಲು ಒತ್ತಾಯಿಸಲು ನಿರ್ಧರಿಸಲಾಯಿತು. ಹಿಂದುಳಿದ ಅಭಿವೃದ್ಧಿ ನಿಗಮಗಳಿಗೆ ಪ್ರತಿಯೊಂದು ನಿಗಮಕ್ಕೂ 100 ಕೋಟಿ ರೂ. ಅನುದಾನ ಮೀಸಲಿಡಬೇಕು. 2023ರ ವಿಧಾನಸಭಾ ಚುನಾವಣೆಯಲ್ಲಿ ಹಿಂದುಳಿದ ಸಮಾಜದ ಮುಖಂಡರಿಗೆ ಕಾಂಗ್ರೆಸ್ ಟಿಕೆಟ್ ನೀಡುವುದಕ್ಕೆ ಆದ್ಯತೆ ನೀಡಬೇಕು ಎಂದು ನಿರ್ಣಯ ಅಂಗೀಕರಿಸಲಾಯಿತು.

ಏ.15ರಿಂದ ಮೇ 8ರವರೆಗೆ 'ಮಕ್ಕಳ ಲೋಕ' ಶಿಬಿರ



ಮೈಸೂರು,ಏ.7(ಪಿಎಂ)– ನೆಲೆ ಹಿನ್ನೆಲೆ, ಜನಮನ ಸಾಂಸ್ಕೃತಿಕ ಸಂಘಟನೆ ಮತ್ತು ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಏ.15ರಿಂದ ಮೇ 8ರವರೆಗೆ 'ಮಕ್ಕಳ ಲೋಕ' ಶಿಬಿರ ಆಯೋಜಿಸಲಾಗಿದೆ ಎಂದು ಶಿಬಿರದ ವಿನ್ಯಾಸಕಾರರೂ ಆದ ಮೈಸೂರು ರಂಗಾಯಣ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್ (ಜನ್ನಿ) ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಜಯನಗರದ 1ನೇ ಹಂತದ ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆ ಆವರಣದಲ್ಲಿ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಶಿಬಿರ ನಡೆಯಲಿದೆ. 8ರಿಂದ 14 ವರ್ಷದೊಳಗಿನ ಮಕ್ಕಳು ಶಿಬಿರದಲ್ಲಿ ಭಾಗವಹಿಸಬಹುದು. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಜನಪದ, ರಂಗಭೂಮಿ, ಸಾಂಸ್ಕೃತಿಕ ಲೋಕದಲ್ಲಿ ಪರಿಣಿತಿ ಪಡೆದವರ ಸಾರಥ್ಯದಲ್ಲಿ ಶಿಬಿರ ನಡೆಯಲಿದೆ ಎಂದರು.

ಹಿರಿಯ ರಂಗಕರ್ಮಿ ಪ್ರಸನ್ನ, ಬಹುಭಾಷಾ ಚಲನಚಿತ್ರ ನಟ ಪ್ರಕಾಶ್ ರಾಜ್, ಚಿತ್ರನಟ ಸುಂದರ್ ರಾಜ್ ಸೇರಿದಂತೆ ಮೊದಲಾದವರು ಶಿಬಿರದಲ್ಲಿ ಪಾಲ್ಗೊಳ್ಳಲಿದ್ದಾರೆ. ಜನಪದ ಗೀತಗಾಯನ, ನೃತ್ಯ, ಭಾವ, ತತ್ವ, ವಚನ ಹಾಗೂ ರಂಗಗೀತೆಗಳ ಕಲಿಕೆ, ಧ್ಯಾನ, ಅಭಿನಯ, ಧ್ವನಿ, ಸ್ವರ, ತಾಳ, ಲಯಗಳ ಪರಿಚಯ, ಕಲಾತ್ಮಕ ಕುಶಲಗಾರಿಕೆ, ಮುಖವಾಡ ತಯಾರಿಕೆ, ಪ್ರಸಾಧನ ಚಟುವಟಿಕೆಗಳು, ಶೈಕ್ಷಣಿಕ ರಂಗಭೂಮಿ ಸೇರಿದಂತೆ ಮೊದಲಾದ ವಿಷಯಗಳನ್ನು ಶಿಬಿರದಲ್ಲಿ ಮಕ್ಕಳು ಕಲಿಯಲ್ಲಿದ್ದಾರೆ ಎಂದು ತಿಳಿಸಿದರು.

ಶಿಬಿರಕ್ಕೆ ತಲಾ 3 ಸಾವಿರ ರೂ. ಪ್ರವೇಶ ಶುಲ್ಕ ನಿಗದಿ ಮಾಡಲಾಗಿದೆ. ಶಿಬಿರದ ಖರ್ಚು–ವೆಚ್ಚಕ್ಕೆ ಪ್ರವೇಶ ಶುಲ್ಕದಿಂದ ಸಂಗ್ರಹಿಸುವ ಹಣ ಸಾಲದು. ಹೀಗಾಗಿ ಅನೇಕರು ನಮಗೆ ಸಹಕಾರ ನೀಡುತ್ತಿದ್ದಾರೆ. ಶಿಬಿರ ಕುರಿತು ಹೆಚ್ಚಿನ ವಿವರಗಳಿಗೆ ಮೊ.ಸಂ. 99457 80989 ಅನ್ನು ಸಂಪರ್ಕಿಸಬಹುದು ಎಂದು ಹೇಳಿದರು. ಶಿಬಿರದ ನಿರ್ದೇಶಕಿ ಕೆ.ಆರ್.ಸುಮತಿ, ಸಂಚಾಲಕ ಕೆ.ಆರ್.ಗೋಪಾಲಕೃಷ್ಣ, ರಂಗಾಯಣದ ನಿವೃತ್ತ ಕಲಾವಿದ ನೂರ್ ಅಹಮದ್ ಶೇಖ್, ಮೈಸೂರು ಎಪಿಎಂಸಿ ಮಾಜಿ ಉಪಾಧ್ಯಕ್ಷ ಜಮಪ್ಪ ಗೋಷ್ಠಿಯಲ್ಲಿದ್ದರು.

ನಾಳೆ 'ಅಣ್ಣಾವ್ರ ಅಭಿಮಾನಿ' ಗಾಯನ, ಪ್ರಶಸ್ತಿ ಪ್ರದಾನ



ಮೈಸೂರು,ಏ.7(ಪಿಎಂ)– ಡಾ.ರಾಜ್‌ಕುಮಾರ್ ಮ್ಯೂಸಿಕಲ್ ಗ್ರೂಪ್ ವತಿಯಿಂದ ಏ.9ರಂದು 'ಅಣ್ಣಾವ್ರ ಅಭಿಮಾನಿ' ಶೀರ್ಷಿಕೆಯಡಿ ಡಾ.ರಾಜ್‌ಕುಮಾರ್ ಹಾಡಿರುವ ಗೀತೆಗಳ ಗಾಯನ ಹಾಗೂ 'ಡಾ.ರಾಜ್ ಕಲಾಸೇವಾ ರತ್ನ' ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸಲಾಗಿದೆ ಎಂದು ಗ್ರೂಪ್‌ನ ಹಿತೈಷಿ ಸುಧೀಂದ್ರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಅಂದು ಸಂಜೆ 5ರಿಂದ ರಾತ್ರಿ 9.30ರವರೆಗೆ ಕಾರ್ಯಕ್ರಮ ನಡೆಯಲಿದೆ. ಡಾ.ರಾಜ್‌ಕುಮಾರ್ ಮ್ಯೂಸಿಕಲ್ ಗ್ರೂಪ್‌ನ ಸ್ಥಾಪಕ ಮೈಸೂರ್ ಜಯರಾಂ ಅವರು ತಮ್ಮ 6ನೇ ವಯಸ್ಸಿನಲ್ಲಿ ರಾಜ್‌ಕುಮಾರ್ ಅವರ ಬಗ್ಗೆ ಅಭಿಮಾನ ಬೆಳೆಸಿಕೊಂಡರು. ಅವರು ಅಭಿಮಾನಿಯಾಗಿ ಇದೀಗ 50 ವರ್ಷಗಳಾಗುತ್ತಿರುವ ಹಿನ್ನೆಲೆಯಲ್ಲಿ ಈ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ ಎಂದರು.

ಮೈಸೂರ್ ಜಯರಾಂ ಅವರ ನೇತೃತ್ವದಲ್ಲಿ ಸಹ ಗಾಯಕರು ನೈಜ ಸಂಗೀತದೊಂದಿಗೆ ಗಾಯನ ಸಾದರಪಡಿಸಲಿದ್ದಾರೆ. ಖ್ಯಾತ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಇದೇ ಸಂದರ್ಭದಲ್ಲಿ ರಂಗಕರ್ಮಿ ರಾಜಶೇಖರ ಕದಂಬ, ಕವಿ ಜಯಪ್ಪ ಹೊನ್ನಾಳಿ, ಕಲಾ ಪೋಷಕರಾದ ರವಿಗೌಡ, ಡಿ.ಸಿದ್ದರಾಜು, ಹಿನ್ನೆಲೆ ಗಾಯಕಿ ವೀಣಾ ಎಸ್.ಪಂಡಿತ್, ಹಿರಿಯ ಕಲಾವಿದರಾದ ಬಿ.ಎನ್.ಜನಾರ್ಧನ್, ಇಂದುಶೇಖರ್, ಗೀತಾ ಜಯರಾಂ, ಆರ್.ಶ್ರೀನಿವಾಸ್, ರವಿಸಂತು ಅವರಿಗೆ ಡಾ.ರಾಜ್ ಕಲಾ ಸೇವಾ ರತ್ನ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು. ಮ್ಯೂಸಿಕಲ್ ಗ್ರೂಪ್‌ನ ಸ್ಥಾಪಕ ಮೈಸೂರ್ ಜಯರಾಂ, ಗಾಯಕರಾದ ಎಡೆಯೂರು ಸಮೀಉಲ್ಲಾ, ಬಾಲು ಪ್ರಕಾಶ್, ಸುರೇಶ್, ಪ್ರದೀಪ್ ಗೋಷ್ಠಿಯಲ್ಲಿದ್ದರು.



ಚಾಮರಾಜ ಕ್ಷೇತ್ರದ ವಾರ್ಡ್ ನಂ.2 ಮಂಚೇಗೌಡನ ಕೊಪ್ಪಲಿನ ಅಭಿಷೇಕ್ ಸರ್ಕಲ್‌ನ 2 ಹಾಗೂ 3ನೇ ಅಡ್ಡ ರಸ್ತೆಯಲ್ಲಿ ಶಾಸಕ ನಾಗೇಂದ್ರ ಅವರು ಪಾದಯಾತ್ರೆ ಮೂಲಕ ಅಭಿವೃದ್ಧಿ ಕಾಮಗಾರಿಯ ಕುರಿತು ಮತದಾರರಿಗೆ ಮಾಹಿತಿ ನೀಡಿ ಮುಂದಿನ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಆಶೀರ್ವದಿಸುವಂತೆ ಮನವಿ ಮಾಡಿದರು. ಈ ವೇಳೆ ಪ್ರಧಾನ ಕಾರ್ಯದರ್ಶಿ ಪುನೀತ್, ವಾರ್ಡ್ ಮುಖಂಡರಾದ ನಂದೀಶ್, ಕುಮಾರ್, ಗೋವಿಂದ, ಪುಷ್ಪ, ವೆಂಕಟೇಶ್ ಹಾಗೂ ಮತ್ತಿತರರು ಹಾಜರಿದ್ದರು.

ಬೈಕ್ ಡಿಕ್ಕಿ ಪಾದಚಾರಿ ಸಾವು

ಬನ್ನೂರು, ಏ. 7– ಬೈಕ್ ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ಸಾವನ್ನಪ್ಪಿದ ಘಟನೆ ಬನ್ನೂರು ಟೌನ್‌ನ ಫಿರ್ದೋಸ್ತ್ ಮಸೀದಿ ರಸ್ತೆಯಲ್ಲಿ ಸಂಭವಿಸಿದೆ.

ಬನ್ನೂರು ಟೌನ್ ಹೌಸಿಂಗ್ ಬೋರ್ಡ್ ನಿವಾಸಿ ಮಹದೇವ ಅಲಿಯಾಸ್ ಮಾದಶೆಟ್ಟಿ(65) ಎಂಬುವರು ಏಪ್ರಿಲ್ 5ರಂದು ರಾತ್ರಿ 8.15ರ ಸುಮಾರಿನಲ್ಲಿ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ವ್ಯಕ್ತಿಯೋರ್ವ ಚಾಲನೆ ಮಾಡಿಕೊಂಡು ಬಂದ ಹೋಂಡಾ ಶೈನ್ ಬೈಕ್ (ಕೆಎ 55–ಇಬಿ 6769) ಅವರಿಗೆ ಡಿಕ್ಕಿ ಹೊಡೆದಿದೆ. ಇದರಿಂದ ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಬನ್ನೂರು ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಅಪಘಾತದ ನಂತರ ಬೈಕ್ ಸವಾರ ತನ್ನ ಬೈಕ್ ಅನ್ನು ಅಲ್ಲೇ ಬಿಟ್ಟು ಪರಾರಿಯಾಗಿದ್ದಾನೆ. ಈ ಸಂಬಂಧ ಬನ್ನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಶ್ವಮಾನ್ಯ ಪ್ರಧಾನಿ ಮೋದಿ ಕೈ ಬಲಪಡಿಸಲು ಮತ್ತೊಮ್ಮೆ ಬಿಜೆಪಿಗೆ ಅಧಿಕಾರ

ಶಾಸಕ ರಾಮದಾಸ್ ಬಲವಾದ ಪ್ರತಿಪಾದನೆ



ಮೈಸೂರು,ಏ.7(ಎಂಟಿವೈ)– ದೇಶದ ಸಮಗ್ರ ಅಭಿವೃದ್ಧಿ ಸದಾ ಚಿಂತಿಸುವ ಪ್ರಧಾನಿ ಮೋದಿ ಭಾರತದ ಕೀರ್ತಿಯನ್ನು ಮತ್ತಷ್ಟು ಉತ್ತುಂಗಕ್ಕೇರಿಸಲು ಶ್ರಮಿಸುತ್ತಿದ್ದಾರೆ. ಹಾಗಾಗಿ ಅವರ ಕೈ ಬಲಪಡಿಸಬೇಕಾದರೆ ಮುಂಬರುವ ಚುನಾವಣೆಯಲ್ಲಿ ಬಿಜೆಪಿಯನ್ನು ಮತ್ತೊಮ್ಮೆ ಬೆಂಬಲಿಸಬೇಕು ಎಂದು ಶಾಸಕ ಎಸ್.ಎ.ರಾಮದಾಸ್ ಮನವಿ ಮಾಡಿದ್ದಾರೆ.

ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಶಾಸಕರ ಗೃಹ ಕಚೇರಿಯಲ್ಲಿ ಕೆ.ಆರ್.ಕ್ಷೇತ್ರದ ಮಹಿಳಾ ಮೋರ್ಚಾದ ಬೂತ್ ಅಧ್ಯಕ್ಷರು ಹಾಗೂ ಪ್ರಭಾರಿಗಳ ಚುನಾವಣಾ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ದೇಶದ ಅಭಿವೃದ್ಧಿ ಹಾಗೂ ಒಳಿತಿಗಾಗಿ ಚಿಂತನೆ ಮಾಡುತ್ತಲೇ ಇರುತ್ತಾರೆ. ದೇಶಕಂಡ ಅಪ್ರತಿಮ ನಾಯಕ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅವರ ಸಮಗ್ರ ಆಶಯಗಳ ಅನುಷ್ಠಾನಕ್ಕಾಗಿ ಮತ್ತೊಂದು ಬಾರಿ ಬಿಜೆಪಿ ಅಧಿಕಾರಕ್ಕೆ ಬರುವ ಅಗತ್ಯವಿದೆ. ದೇಶ ಸೇವೆ ಮಾಡಲು ಅವಕಾಶ ನೀಡಬೇಕಾಗಿದೆ. ಮೋದಿಯವರ ಚಿಂತನೆಗಳನ್ನು ಕಾರ್ಯಗತಗೊಳಿಸಲು ಈ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿಸಬೇಕು. ನಾವು ಪ್ರಗತಿ ಹಾಗೂ ಅಭಿವೃದ್ಧಿಯ ವಿಚಾರವನ್ನು ಮುಂದಿಟ್ಟುಕೊಂಡು ಮತ ಕೇಳುತ್ತೇವೆ ಎಂದರು.

ಪಕ್ಷದ ಅಭ್ಯರ್ಥಿ ಪರ ಮತಯಾಚನೆಗೆ ಬೂತ್ ಅಧ್ಯಕ್ಷರು, ಪ್ರಭಾರಿಗಳು ಮನೆ ಮನೆಗೆ ಹೋದಾಗ ಕೆಲವರು ಮನಸ್ಸಿಗೆ ನೋವಾಗುವಂತೆ ಮಾತನಾಡಿದರೆ ಬೇಸರ ಮಾಡಿಕೊಳ್ಳದೆ ಕಳೆದ ಐದು ವರ್ಷಗಳ ಅವಧಿಯಲ್ಲಿ ಕ್ಷೇತ್ರದಲ್ಲಿ ಆಗಿರುವ ಕೆಲಸ ಕಾರ್ಯಗಳ ಬಗ್ಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಬೇಕು. ಐದು ವರ್ಷಗಳ ಸಾಧನೆ ಪುಸ್ತಕವನ್ನು ಕ್ಷೇತ್ರದ ಮತದಾರರಿಗೆ ನೀಡಬೇಕು. ನಮ್ಮ ಸರ್ಕಾರದ ಅವಧಿಯಲ್ಲಿ ಕೈಗೊಂಡಿರುವ ಯೋಜನೆಗಳು, ಕೆ.ಆರ್.ಕ್ಷೇತ್ರದಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯಕ್ಕೆ ಸಂಬಂಧಿಸಿದ ಕೈಪಿಡಿಯನ್ನು ಪ್ರತಿಯೊಬ್ಬ ಮತದಾರರಿಗೂ ತಲುಪಿಸಬೇಕು ಎಂದು ಅವರು ಮನವಿ ಮಾಡಿದರು.

ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಮಹಿಳಾ ಮೋರ್ಚಾದ ಕಾರ್ಯಕರ್ತರು ಹಾಗೂ ಮುಖಂಡರ ಮೇಲೆ ಜವಾಬ್ದಾರಿ ಹೆಚ್ಚಾಗಿದೆ. ತಾಳ್ಮೆ ಹಾಗೂ ಚಾತುರ್ಯ ಇರುವ ಮಹಿಳಾ ಕಾರ್ಯಕರ್ತರು ಪಕ್ಷ ಸಂಘಟನೆಗೆ ಶ್ರಮಿಸಬೇಕು. ಪಕ್ಷದ ಪರ ಪ್ರಚಾರ ಮಾಡಲು ಮನೆಗಳಿಗೆ ಹೋದಾಗ ಆ ಕುಟುಂಬದೊಂದಿಗೆ ಬಾಂಧವ್ಯ ಬೆಳೆಸಿಕೊಳ್ಳಬೇಕು. ಈ ಮೂಲಕ ಮತದಾರರ ಕಷ್ಟ ಸುಖ ಹಂಚಿಕೊಂಡು ಆತ್ಮಸ್ಥೈರ್ಯ ತುಂಬಬೇಕು. ಅಗತ್ಯವುಳ್ಳವರಿಗೆ ವಿವಿಧ ಇಲಾಖೆಗಳ ವತಿಯಿಂದ ನೀಡಲಾಗುವ ಸೌಲಭ್ಯದ ಬಗ್ಗೆ ಮಾಹಿತಿ ನೀಡಬೇಕು ಎಂದು ಸಲಹೆ ನೀಡಿದರು.

ಮೇ.10ರಂದು ನಡೆಯುವ ಚುನಾವಣೆ ಪಕ್ಷದ ಕಾರ್ಯಕರ್ತರಿಗೆ ಪರೀಕ್ಷೆಯಿದ್ದಂತೆ, ಮೇ 13ರಂದು ಪ್ರಕಟವಾಗುವ ಫಲಿತಾಂಶ ನೀವು ಪರೀಕ್ಷೆಯನ್ನು ಎಷ್ಟರ ಮಟ್ಟಿಗೆ ಎದುರಿಸಿದ್ದೀರಿ ಎಂಬ ಅಂಕಪಟ್ಟಿ (ಮಾರ್ಕ್ಸ್ ಕಾರ್ಡ್). ಆ ಫಲಿತಾಂಶದ ಒಂದೊಂದು ಅಂಕವೂ ನಿಮ್ಮ ಶ್ರಮದ ಫಲವಾಗಿರಬೇಕು. ಉತ್ತಮ ಭಾರತಕ್ಕಾಗಿ ಹಾಗೂ ಭವಿಷ್ಯದ ಕರ್ನಾಟಕಕ್ಕಾಗಿ ನಿಮ್ಮ ಶ್ರಮ ಈಗ ಅನಿವಾರ್ಯ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಮಹಿಳಾ ಮೋರ್ಚಾದ ನೂರಾರು ಕಾರ್ಯಕರ್ತೆಯರು ಪಾಲ್ಗೊಂಡಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

SITE FOR SALE
MUDA Approved
Hanuja Green Medos,
near H.D. Kote
Ring Road Circle
40x70, 40x60 N/F.
Rs. 3800/- Sqft.,
Mob: 9448372715

WANTED
INDEPENDANT HOUSE FOR RENT
3 BHK, Pure Veg family,
Location near by
Ramakrishna ashram only.
Contact: N.N.Murthy
Mob: 9900252202

ನುರಿತ ಕಾಫಿ ಮಾಸ್ಟರ್ ಬೇಕಾಗಿದ್ದಾರೆ.
ಆಕರ್ಷಕ ಸಂಬಳ ನೀಡಲಾಗುವುದು
ಸಂಪರ್ಕಿಸಿ: 9900661620

ಶಾದಿಗೂರೂಜಿ.ಕಾಂ
ಎಲ್ಲಾ ಜಾತಿಯ ವಧೂವರರಿಗೆ
ನೇರ ಸಂಪರ್ಕಿಸಿ ಲಕ್ಷದಲ್ಲಿ
ಒಂದನ್ನು ಆಯ್ಕೆಮಾಡಿಕೊಳ್ಳಿ
6361740552, 9449408551,
Shaadiguruji.com

ಟಿವಿ ರಿಪೇರಿ
ಎಲ್‌ಸಿಡಿ,
ಎಲ್‌ಇಡಿ ಟಿವಿ
Service at your doorstep.
Mob: 9880066886

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ
ಸಂಪು, ಟ್ಯಾಂಕ್ ಮತ್ತು ಸೋಲಾರ್
ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಕಮರ್ಷಿಯಲ್ ಜಾಗ ಬಾಡಿಗೆಗೆ
Basement 1450sqft., 1ನೇ ಮಹಡಿ
2250sqft., ಕೊಳ್ಳೆಗಾಲದ 168
A-B ಅಂಬೇಡ್ಕರ್ ರಸ್ತೆಯಲ್ಲಿ
ಬಾಡಿಗೆಗೆ ಇದೆ.
ಸಂಪರ್ಕಿಸಿ: 9900201981

ಸೈಟ್ಸ್ @ ಮೈಸೂರು
ಇಲವಾಲ ಬಸ್ ಸ್ಟ್ಯಾಂಡ್ ಹತ್ತಿರ
DTCP APPROVED
ಹೂಡಿಕೆಗೆ / ಮನೆ ಕಟ್ಟಲು ಸೂಕ್ತವಾದ ಸ್ಥಳ
ಮುಂಬರಲಿರುವ ಮೈಸೂರು ಕುಶಾಲ್ ನಗರ
ರಾಷ್ಟ್ರೀಯ ಹೆದ್ದಾರಿಯ ಹತ್ತಿರ
GSS 89512-76688

ಸೋಲಾರ್ ವಾಟರ್ ಹೀಟರ್
Solar Water Heater

ಸೇಲ್ಸ್, ಸರ್ವೀಸ್ ರಿಪೇರಿ,
ಎಕ್ಸ್‌ಚೇಂಜ್ ಹಾಗೂ
ಬಿಡಿ ಭಾಗಗಳಿಗಾಗಿ
ಸಂಪರ್ಕಿಸಿ
Vinaykrishna
9611648636

ಬೇಕಾಗಿದ್ದಾರೆ
ಲೀಡಿಂಗ್ ಆಟೋಮೊಬೈಲ್ ಡೀಲರ್‌ಶಿಪ್
ಸರ್ವಿಸ್ ಅಡ್ವೈಸರ್/ಫ್ಲೋರ್/
ಇಂಚಾರ್ಜ್/ಮೆಕ್ಯಾನಿಕ್/ ಟಿಂಕರಿಂಗ್/
ಎಲೆಕ್ಟ್ರಿಷಿಯನ್ ಬೇಕಾಗಿದ್ದಾರೆ.
ಆಟೋಮೊಬೈಲ್ ಕ್ಷೇತ್ರದಲ್ಲಿ ಉತ್ತಮ
ಅನುಭವ ಹೊಂದಿರಬೇಕು. ಮೈಸೂರು
9449936384, 0821-2404555
email:kshatriyaforcesales@gmail.com

WANTED
FLEX MACHINE OPERATOR
4 Years Exp. in field & Salary : 16000/-
SIGN BOARD MAKER
4 Years Exp. in field & Salary : 16000/-
HELPER Salary : 10,000/-
8105406141
7338336464

ಸೈಟ್ಸ್ @ ಮೈಸೂರು
ಟಿ.ನರಸೀಪುರ ರಿಂಗ್ ರೋಡ್
ನಿಂದ ಸುಮಾರು 1.5 KMS
MUDA APPROVED
ಸುತ್ತಮುತ್ತ ಮೂಡಾ ಲೇಔಟ್ಗಳಿವೆ
GSS 89512-76688

ಜಮೀನು ಮಾರಾಟಕ್ಕಿದೆ
ಮೈಸೂರು ಊಟಿ ರಾಷ್ಟ್ರೀಯ
ಹೆದ್ದಾರಿಗೆ ಒಳಗೊಂಡಂತೆ
35 ಎಕರೆ
ಜಮೀನ್ ಮಾರಾಟಕ್ಕಿದೆ
+91 98453 95000 | 98451 04048

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ
ವೃದ್ಧರು, ಪಾರ್ಶವಾಯು ಪೀಡಿತರು, ಹಾಗೂ
ಕೈಯಲಾಗದ ವಯೋ ವೃದ್ಧರನ್ನು
ಮನೆಯಂತೆಯೇ ನೋಡಿಕೊಳ್ಳುತ್ತಿರುವ ಸಂಸ್ಥೆ
ನಮ್ಮ ಮೈಸೂರಿನಲ್ಲಿ ಊಟ ವಸತಿಯೊಂದಿಗೆ
ಇಚ್ಛೆವುಳ್ಳವರು ಸಂಪರ್ಕಿಸಿ
9110455297 | 9591557126

ಶ್ರೀ ಮಹದೇಶ್ವರ ಟೂರ್ಸ್ & ಟ್ರಾವೆಲ್ಸ್ (ರಿ)
ಆಜಾದ್‌ನಗರ, ಚಾಮರಾಜಪೇಟೆ, ಬೆಂಗಳೂರು–18
9611801143/9611701143/
9742810701
1) 13 ದಿನಗಳ ಚಾರ್ ಧಾಮ್ ಪ್ರವಾಸ (ವಿಮಾನದಲ್ಲಿ) ಹೊರಡುವ ದಿನ: 20.05.2023 ಸೀಟು 1ಕ್ಕೆ ರೂ. 48,500/– ದೆಹಲಿ, ಹರಿದ್ವಾರ, ಯಮುನೋತ್ರಿ, ಗಂಗೋತ್ರಿ, ಕೇದಾರ, ಬದರಿನಾಥ, ಋಷಿಕೇಶ ಇತ್ಯಾದಿ.
2) 12 ದಿನಗಳ ಗುಜರಾತ್ ಮತ್ತು ಮಧ್ಯಪ್ರದೇಶ ಪ್ರವಾಸ ಹೊರಡುವ ದಿನ: 04.06.2023. ಸೀಟು 1ಕ್ಕೆ ರೂ. 45,000/– ಉಜ್ಜಯಿನಿ, ಓಂಕಾರೇಶ್ವರ ಮಾತೃಗಯಾ, ದ್ವಾರಕಾ, ಪೋರ್ ಬಂದರ್, ಸೋಮನಾಥ, ನಿಷ್ಕಳಂಕ ಮಹಾದೇವ, ಅಹಮದಾಬಾದ್ ಇತ್ಯಾದಿ,

ಶ್ರದ್ಧಾ ಗಾರ್ಮೆಂಟ್ಸ್
ಬಟ್ಟೆ ಬ್ಯಾಗ್ ಹೊಲಿಯಲು
ನುರಿತ ಮಹಿಳಾ ಟೈಲರ್‌ಗಳು
ಬೇಕಾಗಿದ್ದಾರೆ.
ಸಂಪರ್ಕಿಸಿ: 9886412655
ವಿಳಾಸ: ಶಿವಾಜಿ ರಸ್ತೆ, ಟ್ಯಾಂಕ್ ರಸ್ತೆ, ಭಾರತ ಕ್ಲಿನಿಕ್, ಎನ್. ಆರ್. ಮೊಹಲ್ಲಾ, ಮೈಸೂರು

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ
ಮತ್ತು ಅಣಬೆ ತಯಾರಿಸಿ ನಮಗೆ
ಮರಳಿಸಿ ಪ್ರತಿದಿನ 500 ರಿಂದ
800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
FAMOUS ASTROLOGER
ಪಂ. ಎಸ್.ಮಣಿಕಂಠನ್
ಮೊ: 9480743991
ಪ್ರೀತಿಯಲ್ಲಿ ನಂಬಿ ಮೋಸ, ಹಣಕಾಸು, ಶತ್ರುಕಾಟ, ಸ್ತ್ರೀಪುರುಷ, ಪ್ರೇಮ, ಗುಪ್ತ ಸಮಸ್ಯೆ, ಗಂಡ–ಹೆಂಡತಿ ಕಿರಿಕಿರಿ, ಸಾಲಬಾಧೆ, ಅನಾರೋಗ್ಯ ಮದುವೆ, ಸಂತಾನ, ವ್ಯಾಪಾರ, ವಿ.ಸೂ. ಅಘೋರಿ, ಕೊಲ್ಕತ್ತ, ಕೇರಳ, ಕೊಳ್ಳೇಗಾಲ, ಪೂಜಾ ಶಕ್ತಿಯಿಂದ ನಮ್ಮ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ, ನಿಮ್ಮ ಯಾವುದೇ ಗುಪ್ತ ಕಠಿಣ, ಸಮಸ್ಯೆಗಳಿಗೆ 600 ವರ್ಷಗಳ ತಾಳೆಗರಿ ವಿದ್ಯೆಯಿಂದ 100% ಪರಿಹಾರ
ಸೂಚನೆ: ಸರಿಯಾದ ವಿಳಾಸ ತಿಳಿದುಕೊಂಡು ಬನ್ನಿ: ಅಶೋಕ ರಸ್ತೆ, ಈಸ್ಟ್ ಕ್ರಾಸ್ 36, ಮೈಸೂರು

JOBNET
ಮೊಬೈಲ್‌ನಲ್ಲಿ ಕೆಲಸ
ಮನೆಯಲ್ಲಿ ಕುಳಿತು ಮೊಬೈಲ್
ಮೂಲಕ ಫಾರಂ ಫಿಲ್ಲಿಂಗ್
ಮಾಡಿ ಪ್ರತಿ ತಿಂಗಳಿಗೆ 10,000
ರಿಂದ 20,000 ಸಂಪಾದಿಸಿ
9731891409

S.K. Construction
ನಿಮ್ಮ ಕೈಗೆಟಕುವ ಬೆಲೆಯಲ್ಲಿ
ಅತಿ ಉತ್ತಮ ಗುಣಮಟ್ಟದಲ್ಲಿ
ಹೊಸ ಮನೆ ಮತ್ತು
Alteration Work,
Plan, 3D Elivation
ಸಹಿತ ಕಟ್ಟಿ ಕೊಡುತ್ತೇವೆ.
9620528490

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಬೇಕಾಗಿದ್ದಾರೆ
18 ವರ್ಷ ಮೇಲ್ಪಟ್ಟ ಯುವಕ,
ಯುವತಿಯರು, ಮಹಿಳೆಯರು, ವಿಧವೆ,
ವಿಚ್ಛೇಧಿತೆಯರು ಹೋಂ ನರ್ಸಿಂಗ್
ಕೆಲಸಕ್ಕೆ ಅನುಭವ ಇರುವ/
ಇಲ್ಲದಿರುವವರಿಗೆ ನಮ್ಮ ಸಂಸ್ಥೆಯಲ್ಲಿ
ಟ್ರೈನಿಂಗ್ ಕೊಡಲಾಗುವುದು ಊಟ
ವಸತಿಯೊಂದಿಗೆ ಆಕರ್ಷಕ
ಸಂಬಳ ಕೊಡಲಾಗುವುದು.
7483960098

ಜಮೀನು ಬೇಕಾಗಿದೆ
ಮೈಸೂರಿನ ರಿಂಗ್ ರೋಡಿನ 10 ರಿಂದ 12 ಕಿ.ಮೀ. ಸುತ್ತಮುತ್ತಲಿನ 10 ಎಕರೆಯಿಂದ 15 ಎಕರೆ ಜಮೀನು ಹುಡುಕುತ್ತಿದ್ದೇವೆ. ಜಮೀನು ಮಾರಾಟ ಮಾಡುವವರಿದ್ದರೆ. ಸಂಪರ್ಕಿಸಿ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ನೇರವಾಗಿ ಮಾರಾಟಗಾರರಿಗೆ ಆದ್ಯತೆ (ಮೊತ್ತ ಎಕರೆಗೆ 30 ರಿಂದ 35 ಲಕ್ಷ) ಆಸಕ್ತರು ಈ ಮೊಬೈಲ್ ನಂಬರಿಗೆ ಕರೆಮಾಡಿ.
7204559999,9880151303

ತಕ್ಷಣ ಬೇಕಾಗಿದ್ದಾರೆ
ಗಂಗೋತ್ರಿ ಮತ್ತು ಬಿಎಂಹೆಚ್ ಹಾಸ್ಟಲ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC & ಮೇಲ್ಪಟ್ಟು
ಸಂಬಳ: 15,500/- +W/o (26 Days)
ಊಟ, ತಿಂಡಿ ಸೌಲಭ್ಯ ಇರುತ್ತದೆ
9880727819
9620667819

Available for Rent
Built to Sqft.
9600 Sqft. 30x120
Address : New kantharaju urs Road, Next West Side, Kuvempunagar, Mysore
7204559999
9880151303

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್‌ಗಳು
ಸ್ಥಳ: ಶೂಟಿಂಗ್ ಮಹದೇವಪುರ
ಸುತ್ತಮುತ್ತ ಉತ್ತಮ ವೇತನ
ESI+PF ವ್ಯವಸ್ಥೆ ಇದೆ.
ಆಸಕ್ತರು ಸಂಪರ್ಕಿಸಿ
9686422400
9242406261

ಹೊಸ ಮನೆ ಮಾರಾಟಕ್ಕಿದೆ
20x30 ಡೂಪ್ಲೆಕ್ಸ್ 3 BHK
ಗ್ರಾನೈಟ್ ಫ್ಲೋರಿಂಗ್ ಆಲ್
ಫರ್ನಿಷಿಂಗ್
ರೈಲ್ವೆ ಲೇಔಟ್ ಜೆ.ಪಿ.ನಗರ,
ಮೈಸೂರು
9739825766
9483560766

ಗೋವ ಪ್ರವಾಸ
3 ದಿನಗಳು
ದೂಧ್ ಸಾಗರ್ ಜಲಾಶಯ, ಬಾಗ ಬೀಚ್,
ಕಲಂಗೂಟ್ ಬೀಚ್, ಮಂಗೇಶಿ ದೇವಸ್ಥಾನ,
ನಾಗೇಶಿ ದೇವಸ್ಥಾನ, ಬಾಸಲಿಕ ಚರ್ಚ್, ಇತ್ಯಾದಿ
ಊಟ ವಸತಿ ಸೇರಿ ಒಬ್ಬರಿಗೆ 6000 ರೂ ಗಳು
ಫ್ಯಾಮಿಲಿಗೆ ಪ್ರತ್ಯೇಕ ರೂಮ್ ಇರುತ್ತದೆ.
ಮೊಬೈಲ್ : 70222 71023



Solar Water Heater
SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಿಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೊರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

GAYATHRI EDUCATION TRUST (R)
GAYATHRI VIDYALAYA
Hosa undavadi, K.R.Sagara, S.R. Patna (T)
D.Ed - All Subject - 4 Teacher
BSc , B.Ed – 4 (Mathematics and Science), BA, B.Ed – 2 (English and Social), Montessori Teacher – 2
Computer Teacher – 1 Classical / Western Dance Teacher– 2
Music teacher– 1, Clerk -2
Bus Drivers -2 , Security Female -2
Ph: 8892927318
8183054747, 6360302911

ಸುವರ್ಣ ಯಾತ್ರ
ನೇಪಾಳ ಪ್ರವಾಸ 9 ದಿನಗಳು
13–04–23 ಪೋಕ್ರಾ, ಕಟ್ಮಂಡು,
ಮುಕ್ತಿನಾಥ ಇತರೆ,
ಕಾಶಿ ಪ್ರವಾಸ 7 ದಿನಗಳು 24–04–23.
ಗಯಾ, ಬುದ್ಧ ಗಯಾ, ಬಾಬಾ
ಬೈದ್ಯನಾಥ್, ಅಯೋಧ್ಯೆ, ಇತರೆ.
9008381022
9019462508

ಮೈತ್ರಿ ಟೂರ್ಸ್
ಶಿರಡಿ ಪ್ರವಾಸ 3 ದಿನಗಳು.
21–04–23 ಭೀಮಾಶಂಕರ
ಜ್ಯೋತಿರ್ಲಿಂಗ, ತ್ರಯಂಬಕೇಶ್ವರ
ಜ್ಯೋತಿರ್ಲಿಂಗ, ನಾಸಿಕ್, ಗೃಷ್ಣೇಶ್ವರ,
ಜ್ಯೋತಿರ್ಲಿಂಗ, ಎಲ್ಲೋರ,
ಶನಿಸಿಂಗನಪುರ, ಇತ್ಯಾದಿ.
9482421499

ಮನೆ ಕಟ್ಟಿಕೊಡಲಾಗುವುದು
ಮೈಸೂರು, ಕೊಡಗು, ಹಾಸನ,
ತುಮಕೂರು, ಬೆಂಗಳೂರು,
ಮಂಡ್ಯ, ಚಾಮರಾಜನಗರ ಹಳ್ಳಿ
ಹಾಗೂ ಸಿಟಿಗಳಲ್ಲಿ ಸಂಪರ್ಕಿಸಿ
8073026718

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ.
(ಕೋರಿಯರ್ ಸೌಲಭ್ಯವಿದೆ)
8749098879

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ
ರೂ.25,000 ಗಳಿಸಬಹುದು.
8884439666

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.
ಸರಸ್ವತಿಪುರಂ, ಮೈಸೂರು
ನಾವು ರೆವಿನ್ಯೂ ಮನೆಗಳಿಗೆ ಮಾರ್ಟ್‌ಗೇಜ್ ಲೋನ್ ಹಾಗೂ ಪರ್ಸನಲ್ ಲೋನ್ ಮಾಡಿಕೊಡುತ್ತೇವೆ. 12,000 ಮೇಲೆ 50,000 ಸಂಬಳ, ಪಿಎಫ್ ಡಿಡಕ್ಷನ್ ಆಗಿ ಅಕೌಂಟ್‌ಗೆ ಬರುವವರಿಗೆ 30,000 ದಿಂದ 50,000ದ ವರೆಗೂ ಲೋನ್ ಮಾಡುತ್ತೇವೆ ಹಾಗೂ ಈ ಕೆಳಗಿನ ರೆವಿನ್ಯೂ ಸ್ಥಳಗಳಿಗೆ ರಾಘವೇಂದ್ರ ನಗರ, ಕನಕಗಿರಿ, ಜನತಾ ನಗರ, ಲೋಕನಾಯಕ ನಗರ, ಗಣೇಶ್ ನಗರ, ಮಹದೇವಪುರ ಲೋನ್ ಮಾಡುತ್ತೇವೆ.
8088647887

ಸಂಪು
ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ಶುಂಠಿ ಕೃಷೀಕರೆ
ಉತ್ತಮ ದರ್ಜೆಯ ಬೇವಿನ ಹಿಂಡಿ
ಹಾಗೂ ಬೇವಿನ ಹುಡಿ ನಿಮ್ಮ ಸಮಕ್ಷಮ
ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ–ನೀಮ್
#203, ಬನ್ನಿಮಂಟಪ ಬಡಾವಣೆ,
ಮೈಸೂರು–570 015
Mob: 80888-87802

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
17–4–23: ಜಾರ್ಖಂಡ್, ಬಾಬಾ ಬೈದ್ಯನಾಥ್, ಜ್ಯೋತಿರ್ಲಿಂಗ, ಕೊಲ್ಕತ್ತಾ, ಗಂಗಾಸಾಗರ, ಕಪಿಲ ಮುನಿ ದೇವಸ್ಥಾನ, ಭುವನೇಶ್ವರ ಪುರಿ ಜಗನ್ನಾಥ್. 29–5–23: ಜಮ್ಮು, ಕಾಶ್ಮೀರ್, ವೈಷ್ಣೋದೇವಿ, ಪಹಲ್‌ಗಾಮ್, ಸೋನವಾರ್ಗ್, ಗುಲ್‌ಮಾರ್ಗ್. 8–6–23: ಚಾರ್‌ಧಾಮ್ ಯಾತ್ರೆ, ಕೇದಾರನಾಥ್, ಬದ್ರಿನಾಥ್, ಗಂಗೋತ್ರಿ, ಯಮುನೋತ್ರಿ 4–5–23: ರಾಮೇಶ್ವರ, ಕನ್ಯಾಕುಮಾರಿ, ಮಧುರೈ, 28–4–23: ಶಿರಡಿ, 3 ಜ್ಯೋತಿರ್ಲಿಂಗ ದರ್ಶನ
9591017782, 9964527782

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಂಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ /ಫೇಲ್ ಆದ ಯುವಕ/ ಯುವತಿಯರು ಇಂದೇ ಬೇಕಾಗಿದ್ದಾರೆ. ESI +PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ / ಓಟಿ, 15200-86000
9740733021, 9535028750

ಬೇಕಾಗಿದ್ದಾರೆ
ಸ್ಪಂದನ ಇಂಟರ್‌ನ್ಯಾಷನಲ್ ಸ್ಕೂಲ್, ಹೊಳಲು, ಮಂಡ್ಯ ತಾಲ್ಲೂಕು ಹಾಗೂ ಮಂಡ್ಯ ಜಿಲ್ಲೆ. ಈ ವಿದ್ಯಾ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸಲು B.SC, B.ED. M.SC, B.ED, MA IN ENGLISH B.ED, D.ED, C.P.ED, ಹಾಗೂ M.B.A IN MARKETING. M.S.W IN NGO ಮತ್ತು ಟೆಲಿ ಕಾಲರ್ಸ್ ಸೆನ್ಸಸ್ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ–
9743388889/ 9743388886

ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು
ಹುಡುಗಿಯರು ಬೇಕಾಗಿದ್ದಾರೆ.
(ಕನ್ನಡ, ತೆಲುಗು, ಹಿಂದಿ)
ಸ್ಥಳ: ಚಾಮುಂಡಿಪುರಂ ಮತ್ತು
ಎನ್.ಆರ್.ಮೊಹಲ್ಲಾ, ಸಂಬಳ: 8000.
8150005111

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಸೈಟು ಬೇಕಾಗಿದೆ
ಚಿಕ್ಕಹಳ್ಳಿ/ವರುಣ/ವಾಜಮಂಗಲ
ಹಾಗೂ ಇತರೆ ಅಕ್ಕಪಕ್ಕದ
ಬಡಾವಣೆಗಳಲ್ಲಿ
ಟಿ.ನರಸೀಪುರ ರಸ್ತೆ/ಬನ್ನೂರ್ ರಸ್ತೆ
Mob: 9686071750

ಕಮರ್ಷಿಯಲ್ ಜಾಗ ಮಾರಾಟಕ್ಕಿದೆ
35 ಗುಂಟೆ (ಅಲಿನೇಷನ್)
40x60 E/F ಸೈಟ್
80x80 S/F, N.H. Road
T. ನರಸೀಪುರ ರಸ್ತೆ
Mob: 7795306934

SITES FOR SALE
30X40 Sites
Bank Loan upto 80%
Near Gurur Bus Stop
Ramabainagar,
Mysore. DTCP approved
(Corporation Limits)
(1.5 kms from JP Nagar Ring Road)
8660105902

GAS GEYSER

Only Rs. 2,999/-
With 2 years Service Free.
Offer only 2 days.
ಹಳೆಯ ಗ್ಯಾಸ್‌ಗೀಸರ್‌ನ್ನು ರಿಪೇರಿ ಮಾಡಲಾಗುವುದು
HARSHA ENTERPRISES
PH: 99454-99180

ಬೇಕಾಗಿದ್ದಾರೆ
ಕೈಗಾರಿಕಾ Canteen ನಲ್ಲಿ
ಕೆಲಸ ಮಾಡಲು ನುರಿತ
ಗಂಡಸರು/ಹುಡುಗರು
ಬೇಕಾಗಿದ್ದಾರೆ. ESI/PF,
ಊಟ ವಸತಿ ಸೌಲಭ್ಯವಿರುತ್ತದೆ.
ತಕ್ಷಣ ಸಂಪರ್ಕಿಸಿ:
8904538628

ಮನೆ ಬಾಡಿಗೆಗೆ / ಭೋಗ್ಯಕ್ಕೆ ಇದೆ
20x30, 2 BHK
ಸಾತಗಳ್ಳಿ B Zone,
(ಮಾನಸಿನಗರ ಹತ್ತಿರ)
ಹಂಸ ವೃತ್ತ VTU ಹತ್ತಿರ
Contact:
7304914521

MUDA SITES
Launching offer..!!
behind Adishwarnagar,
Vijaynagara 4th stage.
Ready to Construct &
Registration | Loans |
Prospective area
+91-7349113666

WANTED
PERSONAL ASSISTANT
Minimum experience of
3-5 years in similar field.
Place of Work: Mysore
Contact Mobile:
9019323999

MULTIPLE JOB OPPORTUNITIES
in Mysore location
We are providing all kinds of job services. Visit our office with resume (10.30-2.00)
INSPIRE GLOBAL SOLUTIONS
M.G. Road, Mysore. Call:
8792540629 / 9900327273

AFFIDAVIT
I, LAKSHITHA.S. D/o Srinivas.T, R/at No.169, MIG, Group-1, KHB Colony, Hootagalli, Mysuru-570018, do hereby solemnly state on oath that, in My Aadhar Card No.5648 0370 9929 and my School records etc., my father's name mentioned as SRINIVAS.T, but in my DL No.KA-09 20220016620 my father's name mentioned as SRINIVASA.T instead of SRINIVAS.T. Therefore I, hereby swear that my father's correct name is SRINIVAS.T vide Affidavit sworn in before Notary Vijayalakshmi, Mysore dated 05.04.2023.
Sd/- LAKSHITHA.S.

SHOP FOR RENT
The shop is available for rent at Ganesh Complex, Rajendranagar Arch Circle, Opp. to Paras Jain school. Rent 4250/-. Contact
9986637219 / 9886238017

SALE
Residential Land, Gated Community
Pama Enclave, Site Dimensions:
50x80 West Face, Front - 12M Wide
Roads, Vasantha Nagar
(Bugathagalli Road), Mysuru
Immediate buyers Contact :
8105140149/9538354578

WANTED
PUC/SSLC Pass/Failed
Girls 17 to 25 years
as HELPER
in a Cake Shop
Contact:
7259722778

SITE FOR SALE
Sites measuring 40x60 for sale at Devanoor, Rajiv Nagar, III stage near HP Godown. Contact:
ALSTANDARD ENTERPRISES
Mobile:
7090080001/ 9686306475

HOUSE FOR SALE
Ramakrishna Nagar
K. Block,
East facing No.4,
GF+1st+Duplex
25x40 behind Ganesh
Temple, Mysore
9483982170

HOUSE FOR LEASE
40x40, 1st Floor,
Araavinda Nagar
3rd Main,
14 Lakh Final
Contact:
99001 27380

FOR SALE
1) HOUSE FOR SALE
Rs. 33 Lakhs (15x30)
2) SITE FOR SALE
Rs. 4500 Sqft., (30x60)
3) SITE FOR SALE
Rs. 4000 Sqft., (30x40)
Contact:
9916704061/8762937336

ಕೆಲಸಕ್ಕೆ ಬೇಕಾಗಿದ್ದಾರೆ
ಹೋಟೆಲ್ ಕೆಲಸಕ್ಕೆ ಕ್ಲೀನರ್ ಹಾಗೂ
ಸಪ್ಲೈಯರ್ ಫುಲ್ ಟೈಮ್ ಹಾಗೂ
ಪಾರ್ಟ್ ಟೈಮ್ ಕೆಲಸಗಾರರು
ಬೇಕಾಗಿದ್ದಾರೆ. ಮೈಸೂರು, KT Street
7892176372
8970856325

FLAT FOR SALE
Srishti Anmol Apartment
2 BHK, Fully Furnished,
near Ramaswamy Circle,
Opp. to Wadeyar Architect
College, Mysore. Contact:
Mob: 9036362119

30X40 HOUSE FOR RENT
East Face, Vastu, built with Two wardrobe rooms, Granite, Kitchen, Pooja Room, Showcase, Geyser, Solar, place for car & Two wheeler, commode, Teakwood doors, Rs. 13000/- P.M. Negotiable. No Brokers.
M: 6361760880
D. No. 7, Lakshmikantha Nagar, Hebbal, behind Ganesha Temple, Mysore.

SITE FOR SALE
ನ್ಯೂ R.T. ನಗರ 30x40
ಪೂರ್ವ ದಿಕ್ಕಿನ ಸೈಟು ಮಾರಾಟಕ್ಕಿದೆ
ಕ್ಲಿಯರ್ ಟೈಟಲ್ ಡೀಡ್‌ನೊಂದಿಗೆ
9606897207

ಬೇಕಾಗಿದ್ದಾರೆ
ಸಂಭ್ರಮ ಬಾರ್ & ರೆಸ್ಟೋರೆಂಟ್, ಮೈಸೂರು
ಅಡುಗೆ ಭಟ್ಟರು & ಕ್ಲೀನರ್.
ಸಪ್ಲೈಯರ್ ಬೇಕಾಗಿದ್ದಾರೆ. ಸಂಪರ್ಕಿಸಿ:
9945108109
7411164808

ಬೇಕಾಗಿದ್ದಾರೆ
ಡೆಲಿವರಿ ಸಂಸ್ಥೆಯಲ್ಲಿ ಕೆಲಸ ಮಾಡಲು
ಹುಡುಗರು ಬೇಕಾಗಿದ್ದಾರೆ
ಸಂಬಳ: 15,000–20,000
ಸ್ಥಳಗಳು: ಕೆ.ಆರ್. ನಗರ, ಮದ್ದೂರು,
ನಂಜನಗೂಡು, ಮಡಿಕೇರಿ, ವಿರಾಜಪೇಟೆ,
ಮಂಡ್ಯ ಹಾಗೂ ಕರ್ನಾಟಕದಾದ್ಯಂತ
9060438484 / 0821-2599777

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ತಾಂಡ್ಯ ಮತ್ತು ಇಮ್ಮಾವು
ಏರಿಯಾದಲ್ಲಿ ಕೆಲಸ ಮಾಡಲು
ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ: ಮೇಲ್ಪಟ್ಟು
ವಯೋಮಿತಿ: 45 ವರ್ಷದೊಳಗೆ
ಸಂಬಳ: 25,000/– – 26 Days
ESI, PF ಸೌಲಭ್ಯವಿರುತ್ತದೆ. ಸಂಪರ್ಕಿಸಿ:
9620667819/9620777819

ಬೇಕಾಗಿದೆ
ಗೋಕುಲಂ, ಜಯಲಕ್ಷ್ಮಿಪುರಂ,
ಹೆಬ್ಬಾಳ್ ಈ ಸುತ್ತಮುತ್ತ
60x40, 30x40
ಖಾಲಿ ಸೈಟ್ ಬೇಕಾಗಿದೆ.
9844033655 / 9945295134

ಬೇಕಾಗಿದ್ದಾರೆ
ಮೈಸೂರು ಕೂರ್ಗಳ್ಳಿ ಕೈಗಾರಿಕಾ ಪ್ರದೇಶ ಇಲ್ಲಿ ಖಾಸ್ಗಿತ ಕಂಪನಿಗಳಲ್ಲಿ ಹಾಗೂ ಪಾಂಡವಪುರ, ಶ್ರೀರಂಗಪಟ್ಟಣ ಹೋಟೆಲ್, ರೆಸಾರ್ಟ್‌ಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ, ಹೌಸ್‌ಕೀಪಿಂಗ್, ಸಹಾಯಕರು ಬೇಕಾಗಿದ್ದಾರೆ.
8th, 9th, 10th, PUC, Any Degree (ITI, Diploma, B.Com) ಪುರುಷರು /ಮಹಿಳೆಯರು (ESI, PF) ಸೌಲಭ್ಯ
Networking Field Oficer/Marketing Executive
ಫೀಲ್ಡ್ ಆಫೀಸರ್ ಪುರುಷರು/ಮಹಿಳೆಯರು ಬೇಕಾಗಿದ್ದಾರೆ.
ಸಂಪರ್ಕಿಸಿ: 9036461347/8296280922

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು
ಹೆಲ್ಪರ್, ಕ್ಯಾಷಿಯರ್, ಸೂಪರ್‌ವೈಸರ್ ಹಾಗೂ
Accountant (Retired -Part Time)
ಸಂಪರ್ಕಿಸಿ: 7259858585
SRI VAARAGANAPATHI FUEL STATION
Sy. No. 92/6, Metagally Ring Road, Mysore-16

WANTED
SALESMAN
For Mobile Accessories
Shop at K.T. Street
Ph: 8073680007

OPEN CHALLENGE BY BHARATH BOPANNA
ಕೇವಲ 5 ದಿನಗಳಲ್ಲಿ ಇಂಗ್ಲೀಷ್ ಕಲಿಸದಿದ್ದಲ್ಲಿ
Money Back
MAGIC WITH LOGIC
Mob:9008314702

WE'RE HIRING
Janamithra Finance Pvt. Ltd.,
we are associated with ICICI Bank,
2921/A, 1st Floor, 5th Cross, 1st Main, Saraswathipuram, Mysore-570 009.
Education: SSLC/PUC, pass or fail with or without experience.
Age limit: 18 to 25 years, Only Boys.
Jobs: Field Executive & Marketing
Places: Nanjangud & T. Narasipura, Kollegala, Chamarajanagar. Contact Mobile:
7795282549/8088647887

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 11 ರಲ್ಲಿ

ಕುರುಬ, ಲಿಂಗಾಯತ ಮುಖಂಡರು ಜೆಡಿಎಸ್‌ಗೆ ಸೇರ್ಪಡೆ

ಸಿಕ್ಕ ಅನುದಾನದಲ್ಲೇ ಕ್ಷೇತ್ರದ ಅಭಿವೃದ್ಧಿ: ಶಾಸಕ ಎಂ.ಅಶ್ವಿನ್ ಕುಮಾರ್



ತಿ.ನರಸೀಪುರ, ಏ.7– ನನ್ನ ಅಧಿಕಾರಾವಧಿಯಲ್ಲಿ ಸರ್ಕಾರದ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯ ಮಾಡಿದ್ದೇನೆ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ತಿಳಿಸಿದರು.

ತಾಲೂಕಿನ ಚೌಹಳ್ಳಿ ಗ್ರಾಮದಲ್ಲಿ ನಡೆದ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಗ್ರಾಮದ ಲಿಂಗಾಯತ ಹಾಗೂ ಕುರುಬ ಸಮಾಜದ ಮುಖಂಡರಿಗೆ ಜೆಡಿಎಸ್ ಶಾಲು ಹೊದಿಸಿ ಪಕ್ಷಕ್ಕೆ ಬರಮಾಡಿಕೊಂಡು ಅವರು ಮಾತನಾಡಿದರು.

ಕಳೆದ ಚುನಾವಣೆಯಲ್ಲಿ ಕ್ಷೇತ್ರದ ಜನತೆ ನಿರೀಕ್ಷೆಗೂ ಮೀರಿದ ಪ್ರೀತಿ–ವಿಶ್ವಾಸ ನೀಡಿ, ಹೆಚ್ಚಿನ ಮತಗಳಿಂದ ಗೆಲ್ಲಿಸಿ, ನಾನು ವಿಧಾನಸೌಧ ಪ್ರವೇಶಿಸಲು ಕಾರಣರಾಗಿದ್ದೀರಿ. ಆದರೆ ಕ್ಷೇತ್ರದ ಜನತೆಯ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಲು ಸಾಧ್ಯವಾಗಲಿಲ್ಲ ಎಂಬ ಅರಿವು ನನಗಿದೆ. 5 ವರ್ಷಗಳ ಅವಧಿಯಲ್ಲಿ 2 ವರ್ಷ ಕೊರೊನಾದಿಂದ ಆಡಳಿತ ಯಂತ್ರ ಸ್ಥಬ್ಧವಾಗಿ ಯಾವುದೇ ಅನುದಾನ ಬಿಡುಗಡೆಯಾಗಲಿಲ್ಲ. ಅಲ್ಲದೇ ಪ್ರವಾಹ, ಅತಿವೃಷ್ಟಿಯಿಂದ ನಿಯಮಿತವಾದ ಅನುದಾನ ಕ್ಷೇತ್ರಕ್ಕೆ ದೊರಕಿದ್ದರಿಂದ, ಸಿಕ್ಕ ಅನುದಾನ ಸದುಪಯೋಗಪಡಿಸಿಕೊಂಡು ಅಭಿವೃದ್ಧಿ ಕೆಲಸ ಮಾಡಿದ್ದೇನೆ ಎಂದರು.

ಕಳೆದ ಬಾರಿ ತೋರಿದ ಪ್ರೀತಿ ವಿಶ್ವಾಸವನ್ನು ನನಗೆ ಈ ಬಾರಿಯೂ ತೋರುವ ಮೂಲಕ ಮತ್ತೊಮ್ಮೆ ತಮ್ಮ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಡುವಂತೆ ಮನವಿ ಮಾಡಿದ ಅವರು, ಕ್ಷೇತ್ರದ ಜನರು ನನ್ನನ್ನು ಬೆಂಬಲಿಸಲಿದ್ದಾರೆಂಬ ವಿಶ್ವಾಸವಿದ್ದು, ಈ ಅವಧಿಯಲ್ಲಿ ಆದ ನ್ಯೂನತೆ ಸರಿಪಡಿಸಿಕೊಂಡು ಮುಂದಿನ ಅವಧಿಯಲ್ಲಿ ನಿರೀಕ್ಷೆಗೂ ಮೀರಿದ ಅಭಿವೃದ್ಧಿ ಕೆಲಸ ಮಾಡುತ್ತೇನೆ. ಹಾಗಾಗಿ ಜನರು ನನಗೆ ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಗ್ರಾಮದ ನಾಗೇಂದ್ರ ಮುಖೇಶ್, ಸುರೇಂದ್ರ, ಶಿವಣ್ಣ, ಶ್ರೀಕಂಠ ಸೇರಿದಂತೆ 50ಕ್ಕೂ ಹೆಚ್ಚು ಮಂದಿ ಕುರುಬ ಮತ್ತು ಲಿಂಗಾಯತ ಸಮುದಾಯದ ಮುಖಂಡರು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಯಾದರು. ಈ ವೇಳೆ ಶಾಸಕರು ಕ್ಷೇತ್ರ ವ್ಯಾಪ್ತಿಯ ನಿಲಸೋಗೆ, ಹೆಮ್ಮಿಗೆ ಶಂಭುದೇವನಪುರ ಗ್ರಾಮಗಳಿಗೆ ಭೇಟಿ ನೀಡಿ ಮತಯಾಚಿಸಿದರು.

> ಶಾಸಕ ಅಶ್ವಿನ್ ಕುಮಾರ್ ತಮ್ಮ ಅಧಿಕಾರವಧಿಯಲ್ಲಿ ಪಕ್ಷಭೇದ ಮಾಡದೇ ಅನುದಾನವನ್ನು ಸಮಾನವಾಗಿ ಹಂಚಿದ್ದಾರೆ. ಜನ ಸಾಮಾನ್ಯರಿಗೆ ಕೈಗೆಟಕುವ ಶಾಸಕರು ಸಿಗುವುದು ಅಪರೂಪ. ಹಾಗಾಗಿ ಕ್ಷೇತ್ರದ ಮತದಾರರು ಇಂತಹ ಶಾಸಕರನ್ನು ಕಳೆದುಕೊಳ್ಳುವುದು ಬೇಡ. ಒಮ್ಮೆ ಮೈ ಮರೆತರೆ ಕ್ಷೇತ್ರದ ಜನತೆ ಮತ್ತೆ ಕೈ ಗೆಟುಗದ ಶಾಸಕರನ್ನು ಹುಡುಕಿಕೊಂಡು ಅವರ ಮನೆ ಬಾಗಿಲು ಕಾಯುವ ಕೆಲಸ ಮಾಡಬೇಕಾಗುತ್ತದೆ. ಹಾಗಾಗಿ ಮುಂಬರುವ ಚುನಾವಣೆಯಲ್ಲಿ ಎಚ್ಚರಿಕೆಯಿಂದ ಮತ ಚಲಾಯಿಸಿ ಅಶ್ವಿನ್ ಕುಮಾರ್ ಅವರನ್ನು ಗೆಲ್ಲಿಸಿಕೊಡಿ.
> –ಸಿ.ಬಿ.ಹುಂಡಿ ಚಿನ್ನಸ್ವಾಮಿ, ಜೆಡಿಎಸ್ ಕ್ಷೇತ್ರಾಧ್ಯಕ್ಷ

ಮುಖಂಡರಾದ ಮೂಗೂರು ಶಿವಮೂರ್ತಿ, ಗ್ರಾಪಂ ಸದಸ್ಯ ಕೈಯ್ಯಂಬಳ್ಳಿ ಅಶೋಕ್, ಶಂಭುದೇವನಪುರ ರಮೇಶ್, ಎಂ.ಕೆ.ಅಡುಗೆ ಗ್ರೂಪ್ ಮಾಲಿಕ ಉಕ್ಕಲಗೆರೆ ಕುಮಾರ್, ಕಟ್ಟೇಪುರ ಸಿದ್ದಪ್ಪ, ಜಿಪಂ ಮಾಜಿ ಸದಸ್ಯ ಜೈಪಾಲ್ ಭರಣಿ, ವಿ.ಪಿ.ಹುಂಡಿ ಸಂತೋಷ್ ಕುಮಾರ್, ಕುಮಾರ್, ಗೋಪಿ ಬೋರೇಗೌಡ, ಭರತ್ ಸೇರಿದಂತೆ ಗ್ರಾಮದ ಮುಖಂಡರು, ಕಾರ್ಯಕರ್ತರು ಹಾಜರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಪ್ರವೀಣ (ಕ): ಬೆ.10.30ಕ್ಕೆ, ಗುರುದೇವ್ ಹೊಯ್ಸಳ (ಕ): ಮ.1.05ಕ್ಕೆ, ದಸರಾ (ತೆ): ಮ.3.45ಕ್ಕೆ, ರಾವಣಾಸುರ (ತೆ): ಸಂ.6.55ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 2	ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ): ಬೆ.11ಕ್ಕೆ, ಮ.1.05ಕ್ಕೆ, ಮ.3.10ಕ್ಕೆ, ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಸಂ.5.10ಕ್ಕೆ, ರಾ.7.30ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ರಾಮಾಚಾರಿ 2.0 (ಕ): ಬೆ.10.45ಕ್ಕೆ, ಆಗಸ್ಟ್ 16 1947(ತ): ಮ.1.30ಕ್ಕೆ, ಪೆಂಟಗನ್ (ಕ): ಸಂ.4.20ಕ್ಕೆ, ಗುಮ್ರಾಹ್ (ಹಿಂ): ರಾ.7.30ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಗುರುದೇವ್ ಹೊಯ್ಸಳ (ಕ): ಬೆ.10.50ಕ್ಕೆ, ರಾ.7.40ಕ್ಕೆ, ರಾ.10.15ಕ್ಕೆ, ವೀರಂ (ಕ): ಮ.1.30ಕ್ಕೆ, ಸಂ.4.35ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಗುರುದೇವ್ ಹೊಯ್ಸಳ (ಕ): ಬೆ.10.20ಕ್ಕೆ, ವೀರಂ (ಕ): ಮ.1.05ಕ್ಕೆ, ರಾ.7.15ಕ್ಕೆ, ರಾವಣಾಸುರ (ತೆ): ಸಂ.4.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಬೆ.10.25ಕ್ಕೆ, ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ): ಮ.12.45ಕ್ಕೆ, ಸಂ.5.40ಕ್ಕೆ, ರಾ.7.50ಕ್ಕೆ, ರಾಮಾಚಾರಿ 2.0(ಕ): ಮ.2.55ಕ್ಕೆ, ದಸರಾ (ತೆ): ರಾ.10ಕ್ಕೆ.
ಸ್ಕ್ರೀನ್ 3	ವೀರಂ (ಕ): ಬೆ.10.10ಕ್ಕೆ, ರಾವಣಾಸುರ (ತೆ): ಮ.1.25ಕ್ಕೆ, ಗುರುದೇವ ಹೊಯ್ಸಳ (ಕ): ಸಂ.4.20ಕ್ಕೆ, ರಾ.9.50ಕ್ಕೆ, ನಮ್ ನಾಣಿ ಮದುವೆ ಪ್ರಸಂಗ (ಕ): ರಾ.7.05ಕ್ಕೆ.
ಸ್ಕ್ರೀನ್ 4	ಪ್ರವೀಣ (ಕ): ಬೆ.11.10ಕ್ಕೆ, ಗುರುದೇವ ಹೊಯ್ಸಳ (ಕ): ಮ.1.45ಕ್ಕೆ, ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಸಂ.4.30ಕ್ಕೆ, ರಾ.10.20ಕ್ಕೆ, ಪೆಂಟಗನ್ (ಕ): ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಠಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಠಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಡೆತ್‌ನೋಟ್ ಬರೆದಿಟ್ಟು ವಿದ್ಯಾರ್ಥಿನಿ ಆತ್ಮಹತ್ಯೆ



ಸರಗೂರು, ಏ.7– ಪಟ್ಟಣದ ಸ್ವಾಮಿ ವಿವೇಕಾನಂದ ಆಸ್ಪತ್ರೆಯಲ್ಲಿ ಆಯುರ್ವೇದಿಕ್ ಪಂಚಕರ್ಮ ತರಬೇತಿ ಪಡೆಯುತ್ತಿದ್ದ ವಿದ್ಯಾರ್ಥಿನಿಯೊಬ್ಬಳು ಡೆತ್‌ನೋಟ್ ಬರೆದಿಟ್ಟು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಗುರುವಾರ ಬೆಳಗ್ಗೆ ಪಟ್ಟಣದಲ್ಲಿ ನಡೆದಿದೆ.

ನಂಜನಗೂಡು ತಾಲೂಕಿನ ಹೆಗ್ಗಡಹಳ್ಳಿ ಗ್ರಾಮದ ನಿವಾಸಿ ಲೇ.ಚಿಕ್ಕಣ್ಣ ಎಂಬುವರ ಪುತ್ರಿ ಸಿ.ಬೇಬಿ(18) ಆತ್ಮಹತ್ಯೆ ಮಾಡಿಕೊಂಡವರು. ಈಕೆ ಕಳೆದ ಮೂರ್‍ನಾಲ್ಕು ದಿನಗಳ ಹಿಂದೆ ಇಲ್ಲಿನ ಸ್ವಾಮಿ ವಿವೇಕಾನಂದ ಆಸ್ಪತ್ರೆಯಲ್ಲಿ ಆಯುರ್ವೇದಿಕ್ ಪಂಚಕರ್ಮ ತರಬೇತಿಗೆ ದಾಖಲಾಗಿದ್ದಳು. ತರಗತಿಗೆ ಹಾಜರಾಗುತ್ತಿದ್ದ ಈಕೆ ಗುರುವಾರ ಬೆಳಗ್ಗೆ ತರಗತಿಯಲ್ಲಿದ್ದಾಗ ತಲೆ ನೋವು ಎಂದು ವಿಶ್ರಾಂತಿ ಪಡೆಯಲು ಆಸ್ಪತ್ರೆಯ ಹಾಸ್ಟೆಲ್‌ಗೆ ತೆರಳಿದ್ದಳು. ಆದರೆ ಬೇಬಿ ನನ್ನ ಸಾವಿಗೆ ನಾನೇ ಕಾರಣ ಎಂದು ಡೆತ್‌ನೋಟ್ ಬಡೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಕೆಲ ಹೊತ್ತಿನ ಬಳಿಕ ಹಾಸ್ಟೆಲ್ ಸಿಬ್ಬಂದಿ ಹೋಗಿ ನೋಡಲಾಗಿ ಪ್ರಕರಣ ಬೆಳಕಿಗೆ ಬಂದಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸರಗೂರು ಠಾಣೆ ಎಸ್‌ಐ ಶ್ರವಣದಾಸ ರೆಡ್ಡಿ, ಸಿಬ್ಬಂದಿ ನಾಗನಾಯಕ, ಶಿವಕುಮಾರ್, ಮೊಹಮ್ಮದ್ ಇಮ್ರಾನ್ ಸೇರಿದಂತೆ ಇನ್ನಿತರರು ಪರಿಶೀಲನೆ ನಡೆಸಿದರು. ಬಳಿಕ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಮೃತದೇಹವನ್ನು ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು. ಈ ಸಂಬಂಧ ಸರಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೋಟೆಯಲ್ಲಿ ಧ್ರುವನಾರಾಯಣ್ ಪತ್ನಿ ವೀಣಾಗೆ ಶ್ರದ್ಧಾಂಜಲಿ



ಹೆಚ್.ಡಿ.ಕೋಟೆ, ಏ.7– ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರಂತೆ ಅವರ ಪತ್ನಿ ವೀಣಾ ಕೂಡ ಸರಳ, ಸಜ್ಜನಿಕೆಯುಳ್ಳವರಾಗಿದ್ದರು ಎಂದು ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ತಿಳಿಸಿದರು.

ತಾಲೂಕಿನ ಹ್ಯಾಂಡ್‌ಪೋಸ್ಟ್‌ನಲ್ಲಿರುವ ಮಂಜುನಾಥ ಕಲ್ಯಾಣ ಮಂಟಪದಲ್ಲಿ ಕೋಟೆ–ಸರಗೂರು ಜೆಡಿಎಸ್ ಘಟಕದಿಂದ ಏರ್ಪಡಿಸಿದ್ದ ದಿ.ಧ್ರುವನಾರಾಯಣ್ ಅವರ ಧರ್ಮಪತ್ನಿ ವೀಣಾ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಮೃತರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಧ್ರುವನಾರಾಯಣ್ ವಿಧಿವಶರಾಗಿ ಕೆಲವೇ ದಿನಗಳಾಗಿದ್ದು, ಅವರ ಧರ್ಮಪತ್ನಿ ವೀಣಾ ಕೂಡ ಇಂದು ನಿಧನರಾಗಿರುವುದು ನಿಜಕ್ಕೂ ದುರಂತ. ಅವರ ಆತ್ಮಕ್ಕೆ ದೇವರು ಶಾಂತಿ ನೀಡಲಿ. ಅಲ್ಲದೇ ಈ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ನೀಡಲಿ ಎಂದು ಪ್ರಾರ್ಥಿಸಿದರು. ಸಭೆಯಲ್ಲಿ ಜೆಡಿಎಸ್ ಮುಖಂಡ ಜಯಪ್ರಕಾಶ್ ಚಿಕ್ಕಣ್ಣ, ಕೋಟೆ ಸರಗೂರು ತಾಲೂಕು ಜೆಡಿಎಸ್ ಅಧ್ಯಕ್ಷರಾದ ರಾಜೇಂದ್ರ, ಗೋಪಾಲಸ್ವಾಮಿ, ತಾಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ವೆಂಕಟೇಶ್, ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ಗಾಯತ್ರಿ, ವಿಶ್ವಕರ್ಮ ಮಹಾಸಭಾ ತಾಲೂಕು ಅಧ್ಯಕ್ಷ ಸಿದ್ದಪ್ಪಾಜಿ, ಮುಖಂಡರಾದ ನರಸಿಂಹೇಗೌಡ, ರಾಜೇಗೌಡ, ರೇಣುಕಾ, ಕುಮಾರಿ, ಚಿನ್ನಬೆಳ್ಳಿ ರವಿ, ವೆಂಕಟೇಶ್, ಕಾರ್ಯಕರ್ತರು ಹಾಜರಿದ್ದರು.

ಪದ್ಮ ಚಿತ್ರಮಂದಿರ	(ದೂ: 2521923)
ರಾವಣಸುರ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಹೊಯ್ಸಳ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಓನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪ್ರದರ್ಶನ ಇರುವುದಿಲ್ಲ	
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ರಾವಣಸುರ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ವೀರಂ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
1947 (ತ)	4 ಪ್ರದರ್ಶನಗಳು
ಸಂಗಂ	
ರಾವಣಸುರ (ತೆ)	4 ಪ್ರದರ್ಶನಗಳು
ಲಿಡೋ	
ಕಬ್ಜ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವೀರಂ (ಕ)	4 ಪ್ರದರ್ಶನಗಳು
ಪ್ರಭಾ	
ವೀರಂ (ಕ)	4 ಪ್ರದರ್ಶನಗಳು

ನಂ.ಗೂಡಿನ ಸಮಗ್ರ ಅಭಿವೃದ್ಧಿಗೆ ಮತ್ತೊಂದು ಅವಕಾಶ ನೀಡಿ

ಚುನಾವಣಾ ಪ್ರಚಾರದಲ್ಲಿ ಶಾಸಕ ಬಿ.ಹರ್ಷವರ್ಧನ್ ಮನವಿ



ನಂಜನಗೂಡು, ಏ.7– ನಂಜನಗೂಡು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ನನಗೆ ಮತ್ತೊಂದು ಅವಕಾಶ ನೀಡಿ ಎಂದು ಶಾಸಕ ಬಿ.ಹರ್ಷವರ್ಧನ್ ಮನವಿ ಮಾಡಿದರು.

ನಗರದ ಹಳ್ಳದಕೇರಿ, ಒಕ್ಕಲಗೇರಿ, ಶ್ರೀರಾಂಪುರ, ಶಂಕರಪುರ ಬಡಾವಣೆಗಳಲ್ಲಿ ಚುನಾವಣಾ ಪ್ರಚಾರ ನಡೆಸಿ ಮಾತನಾಡಿದ ಅವರು, ನನ್ನ ಅಧಿಕಾರವಧಿಯಲ್ಲಿ ಕೊರೊನಾ, ಪ್ರವಾಹ ಪರಿಸ್ಥಿತಿಯಲ್ಲೂ 834 ಕೋಟಿ ಅನುದಾನ ತಂದು ನಂಜನಗೂಡನ್ನು ಸ್ಯಾಟಲೈಟ್ ಟೌನ್ ಮಾಡಲು ಅಗತ್ಯವಿರುವ ಮೂಲ ಸೌಕರ್ಯ ಒದಗಿಸಿದ್ದೇನೆ. ದಶಕಗಳ ಕನಸಾಗಿದ್ದ ಬೆಳ್ಳಿರಥ ನಿರ್ಮಾಣ, ನಗು ಏತ ನೀರಾವರಿ ಯೋಜನೆ ಜಾರಿಗೊಳಿಸಿರುವುದಲ್ಲದೆ ತಾಲೂಕಿನ ಪ್ರತಿ ಗ್ರಾಮಗಳಲ್ಲೂ ಸಹ ಸಿಸಿ ರಸ್ತೆ, ಚರಂಡಿ ನಿರ್ಮಾಣ ಸೇರಿದಂತೆ ಅನೇಕ ಅಭಿವೃದ್ಧಿ ಕೆಲಸ ಮಾಡುವ ಮೂಲಕ ಜನರಿಗೆ ಅಗತ್ಯ ಸೌಕರ್ಯ ಒದಗಿಸಿದ್ದೇನೆ. ನಂಜನಗೂಡು ನಗರದ ಮುಖ್ಯ ರಸ್ತೆಗಳ ಅಭಿವೃದ್ಧಿ, ವಿವಿಧ ಬಡಾವಣೆಗಳಲ್ಲಿ ಅನೇಕ ಅಭಿವೃದ್ಧಿ ಕಾರ್ಯ ಮಾಡಲಾಗಿದೆ ಎಂದರು.

ವಿ.ಶ್ರೀನಿವಾಸ ಪ್ರಸಾದ್ ಅವರು ಮಿನಿ ವಿಧಾನಸೌಧ, ಹೈಟೆಕ್ ಬಸ್ ನಿಲ್ದಾಣ, ಬಟಾನಿಕಲ್ ಗಾರ್ಡನ್ ನಿರ್ಮಾಣ ಸೇರಿದಂತೆ ಸಂಸದ, ಶಾಸಕ ಹಾಗೂ ಸಚಿವರಾಗಿ ನಂಜನಗೂಡಿನ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ಈ ಚುನಾವಣೆ ಅವರ ಕೊನೆ ಚುನಾವಣೆಯಾಗಿದೆ. ಹೀಗಾಗಿ ಈ ಬಾರಿ ನನ್ನನ್ನು ಗೆಲ್ಲಿಸಿಕೊಡುವ ಮೂಲಕ ಅವರಿಗೆ ಗೆಲುವಿನ ಉಡುಗೊರೆ ನೀಡುವಂತೆ ಮನವಿ ಮಾಡಿದರು.

ಈ ವೇಳೆ ಬಿಜೆಪಿ ರಾಜ್ಯ ಮುಖಂಡ ಕೆ.ಕೆ.ಜಯದೇವ್, ನಗರಸಭಾಧ್ಯಕ್ಷ ಹೆಚ್.ಎಸ್. ಮಹದೇವಸ್ವಾಮಿ, ಸದಸ್ಯರಾದ ಮಹದೇವ ಪ್ರಸಾದ್, ಮಾದೇವಮ್ಮ, ಮೀನಾಕ್ಷಿ, ಸಿದ್ದರಾಜು, ವಿಜಯಲಕ್ಷ್ಮಿ, ಬಿಜೆಪಿ ನಗರಾಧ್ಯಕ್ಷ ಪಿ.ಶ್ರೀನಿವಾಸ್ ರೆಡ್ಡಿ, ಮುಖಂಡರಾದ ಮಹೇಶ್ ಅತ್ತಿಖಾನೆ, ದೇವಪುತ್ರ, ಕೃಷ್ಣಂರಾಜು, ನಾಗೇಂದ್ರ, ರತ್ನಾಕರ, ಧನರಾಜ್ ಬೂಲ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮಾಜಿ ಅಧ್ಯಕ್ಷ ಎನ್. ಆರ್.ಕೃಷ್ಣಪ್ಪಗೌಡ ಸೇರಿದಂತೆ ಇತರರಿದ್ದರು.

ನಂಜನಗೂಡಲ್ಲಿ ಧ್ರುವನಾರಾಯಣ್ ಪತ್ನಿ

ವೀಣಾ ಅವರ ಪಾರ್ಥಿವ ಶರೀರ ಮೆರವಣಿಗೆ



ನಂಜನಗೂಡು, ಏ.7– ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ ದಿ.ಆರ್.ಧ್ರುವನಾರಾಯಣ್ ಧರ್ಮಪತ್ನಿ ವೀಣಾ ಅವರ ಪಾರ್ಥಿವ ಶರೀರವನ್ನು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ನಗರದ ಡಿ.ದೇವರಾಜ ಅರಸು ಸೇತುವೆ ಬಳಿ ಆಂಬುಲೆನ್ಸ್‌ನಲ್ಲಿ ಬಂದ ಪಾರ್ಥಿವ ಶರೀರವನ್ನು ನಂಜನಗೂಡು ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಅಶ್ರುತರ್ಪಣದ ನಡುವೆ ಗೌರವದಿಂದ ಬರಮಾಡಿಕೊಂಡರು. ಬಳಿಕ ನಗರದ ಹುಲ್ಲಹಳ್ಳಿ ವೃತ್ತ, ಆರ್‌ಪಿ ರಸ್ತೆ ಮೂಲಕ ಕಾಂಗ್ರೆಸ್ ಕಚೇರಿಗೆ ಪಾರ್ಥಿವ ಶರೀರವನ್ನು ತರಲಾಯಿತು. ನಗರದ ಕಾಂಗ್ರೆಸ್ ಕಚೇರಿ ಎದುರು ಕಾಂಗ್ರೆಸ್ ಕಾರ್ಯಕರ್ತರು, ಧ್ರುವನಾರಾಯಣ್ ಅಭಿಮಾನಿಗಳು, ಮೃತ ದೇಹಕ್ಕೆ ಪುಷ್ಪ ನಮನ ಸಲ್ಲಿಸಿ ಗೌರವ ಸಲ್ಲಿಸುವ ಮೂಲಕ ಶ್ರದ್ಧಾಂಜಲಿ ಅರ್ಪಿಸಿದರು. ಸಾರ್ವಜನಿಕರು ರಸ್ತೆಯ ಇಕ್ಕೆಲಗಳಲ್ಲಿ ನಿಂತು ಪಾರ್ಥಿವ ಶರೀರದ ದರ್ಶನ ಪಡೆದು ಕಂಬನಿ ಮಿಡಿದರು.

ಇದೇ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಕುರಹಟ್ಟಿ ಮಹೇಶ್, ಮುಖಂಡರಾದ ಕೆ.ಮಾರುತಿ, ನಾಗೇಶ್ ರಾಜ್ ಸೇರಿದಂತೆ ಸಾವಿರಾರು ಕಾರ್ಯಕರ್ತರು ಅಭಿಮಾನಿಗಳು ಇದ್ದರು.

ಮಹದೇವಪ್ಪ



ಸರಗೂರು, ಏ.7– ಪಟ್ಟಣದ 11ನೇ ವಾರ್ಡ್ ಬಿಡಗಲು ನಿವಾಸಿ, ವೀರಶೈವ ಸಮಾಜದ ಹಿರಿಯ ಮುಖಂಡ ನವಿಲೂರು ಮಹದೇವಪ್ಪ (89) ಶುಕ್ರವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಬೆಳಗ್ಗೆ ಮೃತರ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೂಗೂರಿನ ಶ್ರೀರಾಮ ಕಾಲೋನಿಯಲ್ಲಿ ಮಾದಿಗ ಯುವಕರ ಸಂಘದಿಂದ ಡಾ.ಬಾಬು ಜಗಜೀವನರಾಂ ಜನ್ಮ ದಿನಾಚರಣೆ ಆಚರಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಎಂ.ಎಂ. ಗಿರೀಶ್, ಮಾಜಿ ಗ್ರಾಪಂ ಉಪಾಧ್ಯಕ್ಷ ಮಹದೇವಸ್ವಾಮಿ, ಮಾಜಿ ಸದಸ್ಯ ಪುಟ್ಟಸ್ವಾಮಿ, ಮಹದೇವ, ನಾಗಸುಂದ್ರ, ಮಹೇಶ್, ಸುನೀಲ್ ಕುಮಾರ್, ಮೋಹನ್, ಇಂದ್ರ ಇತರರಿದ್ದರು.



ಬಿಜೆಪಿ, ಕಾಂಗ್ರೆಸ್‌ನಿಂದ ವಿಶ್ವಕರ್ಮ ಸಮುದಾಯಕ್ಕೆ ಅನ್ಯಾಯ: ಆರೋಪ



ಹೆಚ್.ಡಿ.ಕೋಟೆ, ಏ.7– ಕಾಂಗ್ರೆಸ್ ಪಕ್ಷದಿಂದ ವಿಶ್ವಕರ್ಮ ಸಮುದಾಯಕ್ಕೆ ಅನ್ಯಾಯವಾಗಿದೆ ಎಂದು ವಿಶ್ವಕರ್ಮ ಸಮಾಜದ ತಾಲೂಕು ಅಧ್ಯಕ್ಷ ಬಡಗಲಪುರ ವೆಂಕಟೇಶ್ ಆರೋಪಿಸಿದರು.

ತಾಲೂಕಿನ ಹ್ಯಾಂಡ್‌ಪೋಸ್ಟ್‌ನಲ್ಲಿರುವ ಮಂಜುನಾಥ ಕಲ್ಯಾಣ ಮಂಟಪದಲ್ಲಿ ಶುಕ್ರವಾರ ಆಯೋಜಿಸಿದ್ದ ಕೋಟೆ ಮತ್ತು ಸರಗೂರು ತಾಲೂಕು ವಿಶ್ವಕರ್ಮ ಸಮಾಜದ ಮುಖಂಡರ ಜೆಡಿಎಸ್ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿಶ್ವಕರ್ಮ ಸಮಾಜವನ್ನು ಕಾಂಗ್ರೆಸ್ ಮತ್ತು ಬಿಜೆಪಿ ಸರ್ಕಾರಗಳು ಕಡೆಗಣಿಸುತ್ತಾ ಬಂದಿದ್ದು, ಯಾವುದೇ ಸ್ಥಾನಮಾನ ಕೊಡದೇ ನಮ್ಮ ಸಮಾಜವನ್ನು ಮೂಲೆಗುಂಪು ಮಾಡಿವೆ ಎಂದು ದೂರಿದರು.

ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ನಮ್ಮ ಸಮಾಜಕ್ಕೆ ಸಾಮಾಜಿಕ ನ್ಯಾಯ ಸಿಕ್ಕಿದೆ. ಹಾಗಾಗಿ ವಿಶ್ವಕರ್ಮ ಸಮಾಜದ ಬಂಧುಗಳು ಹೆಚ್.ಡಿ.ಕೋಟೆ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಯಪ್ರಕಾಶ್ ಚಿಕ್ಕಣ್ಣ ಅವರನ್ನು ಬೆಂಬಲಿಸುವ ಮೂಲಕ ಕುಮಾರಸ್ವಾಮಿ ಅವರನ್ನು ಮತ್ತೊಮ್ಮೆ ಮುಖ್ಯಮಂತ್ರಿ ಮಾಡುವ ನಿಟ್ಟಿನಲ್ಲಿ ಕೆಲಸ ಮಾಡೋಣ ಎಂದರು.

ಮುಂದಿನ ದಿನಗಳಲ್ಲಿ ಜೆಡಿಎಸ್ ಅಧಿಕಾರ ಬಂದರೆ ಕುಮಾರಸ್ವಾಮಿ ಅವರು ನಮ್ಮ ಜನಾಂಗದ ಏಳಿಗೆಗಾಗಿ ಶ್ರಮಿಸುತ್ತಾರೆ ಎಂಬ ನಂಬಿಕೆ ನಮಗಿದೆ ಎಂದರು.

ಈ ವೇಳೆ ಬಿಜೆಪಿ, ಕಾಂಗ್ರೆಸ್ ತೊರೆದು ವಿಶ್ವಕರ್ಮ ಸಮಾಜದ ನೂರಕ್ಕೂ ಹೆಚ್ಚು ಮುಖಂಡರು ಜೆಡಿಎಸ್ ಸೇರ್ಪಡೆಯಾದರು. ಕಾರ್ಯಕ್ರಮದಲ್ಲಿ ಕೋಟೆ ಮತ್ತು ಸರಗೂರು ತಾಲೂಕು ಜೆಡಿಎಸ್ ಅಧ್ಯಕ್ಷರಾದ ರಾಜೇಂದ್ರ, ಗೋಪಾಲಸ್ವಾಮಿ, ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ಗಾಯತ್ರಿ, ವಿಶ್ವಕರ್ಮ ಮಹಾಸಭಾ ತಾಲೂಕು ಅಧ್ಯಕ್ಷ ಸಿದ್ದಪ್ಪಾಜಿ, ಮುಖಂಡರಾದ ನರಸಿಂಹಗೌಡ, ರಾಜೇಗೌಡ, ಚಿನ್ನ ಬೆಳ್ಳಿ ರವಿ, ವೆಂಕಟೇಶ್, ಚೆನ್ನಾಚಾರ್, ಗೋವಿಂದಾಚಾರ್, ವಸಂತ ಆಚಾರ್, ವಿಶ್ವನಾಥ್, ಮೂರ್ತಿ, ಪುಟ್ಟಣ್ಣಾಚಾರಿ, ನಾಗಾಚಾರ್, ಶ್ರೀನಿವಾಸ್, ಚೆಲುವಾಚಾರಿ, ಪುಟ್ಟಣ್ಣಾಚಾರಿ, ನಟರಾಜ್, ನಾಗಾಚಾರ್, ಸುರೇಶ್, ದಾಸ ಚಾರಿ, ಲೋಕೇಶ್, ಮಂಜು, ಚಂದ್ರು, ಆನಂದ್, ಜಗದೀಶ್, ಕಾರ್ಯಕರ್ತರು, ಮುಖಂಡರು ಹಾಜರಿದ್ದರು.


ವಕೀಲರು ಹಾಗೂ ಜೆಡಿಎಸ್ ಮುಖಂಡರಾದ
ಎಂ.ಜಿ.ಸಿದ್ದರಾಜು
ಅವರಿಗೆ
ಜನ್ಮದಿನದ
ಶುಭಾಶಯಗಳು
ಶುಭಕೋರುವವರು
ದುರ್ಗಾ ಗ್ರೂಪ್ಸ್